ಸಂಪುಟ 21 ಸಂಚಿಕೆ 1

ಜನವರಿ - ಫೆಬ್ರವರಿ 2006

# ಪ್ರಸಾದ

ದ್ವೈಮಾಸಿಕ

ಜೆಎಸ್ಎಸ್ ಮಹಾವಿದ್ಯಾಪೀಠ

ಮೈಸೂರು

# ಪ್ರಸಾದ

ಸಂಪುಟ ೨೧ ಸಂಚಿಕೆ ೧ ಜನವರಿ-ಫೆಬ್ರವರಿ ೨೦೦೬

ಸಂಪಾದಕ

**ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

**'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ**
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಡಾ. ಸಿ.ಪಿ. ಕೃಷ್ಣಕುಮಾರ್
ಪ್ರೊ. ಎ.ಎಸ್. ಜಯರಾಂ
ಶ್ರೀ ಎಸ್. ನಂಜುಂಡಯ್ಯ
ಶ್ರೀ ಲಿಂಗದೇವರು ಹಳೆಮನೆ
ಡಾ. ಎನ್. ಎಸ್. ತಾರಾನಾಥ

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಲೇಖಕರವು

# ಪರಿವಿಡಿ


ಸಂಪಾದಕೀಯ 5

ಗುರುವಾಣಿ 7

ಉದಕ ಮೂರುತಿಯಾಗಿ ಉದಯವಾಯಿತು ಪಿಂಡಿಗೆಯಲ್ಲಿ 9
**ಎನ್. ಬೋರಲಿಂಗಯ್ಯ**

ಸಂಕ್ರಾಂತಿ: ಸಂಸ್ಕೃತಿ ಮತ್ತು ಕಾವ್ಯ 19
**ಡಾ. ರಾಗೌ**

ಅಲ್ಲಮಪ್ರಭುದೇವರ ವಚನಗಳ ಟೀಕು 36
**ಡಾ. ಎಫ್.ಟಿ. ಹಳ್ಳಿಕೇರಿ**

ದೇವರ ದಾಸಿಮಯ್ಯ - ಒಂದು ಟಿಪ್ಪಣಿ 49
**ಪ್ರೊ. ಚಂದ್ರಶೇಖರಯ್ಯ**

ವಾರ್ತಾ ವಿಹಾರ 57

## ಲೇಖಕರ ವಿಳಾಸ

**ಪ್ರೊ. ಎನ್. ಬೋರಲಿಂಗಯ್ಯ**
43, 8 ನೇ ಮುಖ್ಯರಸ್ತೆ
5ನೇ ಕ್ರಾಸ್, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಮೈಸೂರು 570 009

**ಡಾ. ರಾಗೌ**
144, ಕಾಳಿದಾಸ ರಸ್ತೆ
ಜೆಟಿಎಂ ಮೊಬೈಲ್ ಆಫೀಸ್ ಪಕ್ಕ
ಮಹಾರಾಷ್ಟ್ರ ಬ್ಯಾಂಕ್ ಹತ್ತಿರ
ಜಯಲಕ್ಷ್ಮೀಪುರಂ, ಮೈಸೂರು

**ಡಾ. ಎಫ್.ಟಿ. ಹಳ್ಳಿಕೇರಿ**
ಪ್ರವಾಚಕರು, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583 276, ಬಳ್ಳಾರಿ ಜಿಲ್ಲೆ

**ಪ್ರೊ. ಚಂದ್ರಶೇಖರಯ್ಯ**
165, 'ಶಾಶ್ವತಿ'
ಟಿ.ಕೆ. ಬಡಾವಣೆ 4ನೇ ಹಂತ
ಮೈಸೂರು 570 023

# ಸಂಪಾದಕೀಯ

'ಪ್ರಸಾದ' ಪತ್ರಿಕೆ ಈಗ ಮೂವತ್ತೆಂಟನೆಯ ವರ್ಷಕ್ಕೆ ಪದಾರ್ಪಣೆ ಮಾಡುತ್ತಿದೆ.

ಪತ್ರಿಕೆ ಎಂದ ತಕ್ಷಣ ನಮ್ಮ ಕಣ್ಣಮುಂದೆ ಬರುವಂತಹವು ದಿನಪತ್ರಿಕೆಗಳು. ಇಂದಿನ ಸಮಾಜದಲ್ಲಿ ಇವುಗಳ ಪ್ರಭಾವ ಎಷ್ಟೆಂದರೆ, ಬೆಳಗ್ಗೆ ಎದ್ದು ಪತ್ರಿಕೆಗಳ ಮೇಲೆ ಕಣ್ಣಾಡಿಸದಿದ್ದರೆ ನಾಡಿಮಿಡಿತ ಏರಿಳಿತಗೊಳ್ಳುವಷ್ಟರಮಟ್ಟಿಗೆ! ಪ್ರಜಾಪ್ರಭುತ್ವದ ಅಂಗತ್ರಯಗಳಾದ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗಗಳ ಕಾರ್ಯವೈಖರಿಯ ಮೇಲೆ ಸದಾ ಕಣ್ಣಿಟ್ಟು ಕಾಯುವ ಹಾಗೆಯೇ ಜನಸ್ಪಂದನವನ್ನು ಈ ಮೂರು ಅಂಗಗಳಿಗೆ ತಲುಪಿಸುವ ಕೆಲಸ ಈ ಪತ್ರಿಕೆಗಳದ್ದು. ಆದ್ದರಿಂದಲೇ ಇವಕ್ಕೆ ಹೆಚ್ಚಿನ ಕಿಮ್ಮತ್ತು. ಸ್ವಾತಂತ್ರ್ಯ ಚಳವಳಿಯಲ್ಲಿ ಇವುಗಳು ವಹಿಸಿದ ಪಾತ್ರ ಮಹತ್ವದ್ದು. ಗಾಂಧೀಜಿಯಾದಿಯಾಗಿ ದೇಶದ ಮಹಾನ್ ನೇತಾರರು ಪತ್ರಿಕಾ ಸಂಪಾದಕರೋ, ವರದಿಗಾರರೋ ಆಗಿದ್ದುದನ್ನು ನಾವು ಇಲ್ಲಿ ಸ್ಮರಿಸಬಹುದು. ಇತ್ತೀಚಿನ ದಿನಗಳಲ್ಲಿ ಬೇರೆಯ ಉದ್ಯಮಗಳಂತೆ ಪತ್ರಿಕಾ ಕ್ಷೇತ್ರವೂ ಉದ್ಯಮದ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ಪತ್ರಿಕೋದ್ಯಮ ಎನ್ನುವ ಮಾತು ಪ್ರಚಲಿತವಿದ್ದರೂ, ಇದು ಲಾಭವನ್ನೇ ಮೂಲಮಂತ್ರವನ್ನಾಗಿಸಿಕೊಳ್ಳುವ ಬೇರೆ ಉದ್ಯಮದಂತಲ್ಲ. ಆರ್ಥಿಕ ಸ್ಥಿತಿ ಅದರ ಬೆನ್ನೆಲುಬಾದರೂ, ಅದಷ್ಟೇ ಮುಖ್ಯವಾಗುವುದಿಲ್ಲ. ಲಾಭಕ್ಕಿಂತ ಮುಖ್ಯವಾಗಿ ಪತ್ರಿಕೆಯ ಮಾಲೀಕರಿಗೆ ಇರಬೇಕಾದುದು ಸಾಮಾಜಿಕ ಬದ್ಧತೆ. ಸ್ವಾತಂತ್ರ್ಯ ಚಳವಳಿಯ ಸಂದರ್ಭದ ಪತ್ರಿಕೆಗಳನ್ನು ಪರಾಮರ್ಶಿಸಿದರೆ, ಆ ಮಾಲೀಕರ, ವರದಿಗಾರರ, ಲೇಖಕರ ಬದ್ಧತೆ ಯಾವ ಮಟ್ಟದ್ದಾಗಿತ್ತು ಎನ್ನುವುದನ್ನು ನೆನೆದುಕೊಳ್ಳುವುದೇ ಒಂದು ರೀತಿ ರೋಮಾಂಚನವನ್ನು ಉಂಟುಮಾಡುತ್ತದೆ.

ಹಿಂದಿನಿಂದಲೂ ದಿನಪತ್ರಿಕೆಗಳಿಗೆ ಸಮಾನಾಂತರವಾಗಿ ನಿಯತಕಾಲಿಕೆಗಳೂ ಪ್ರಕಟವಾಗುತ್ತಿವೆ. ಇವುಗಳಲ್ಲಿ ಎಲ್ಲ ರೀತಿಯ, ಎಲ್ಲ ವರ್ಗದ ವಾಚಕರ ಅಭಿರುಚಿಗೆ ಅನುಗುಣವಾಗಿ ರೂಪಿತವಾಗುವ ಸುಧಾ, ತರಂಗ, ಮಯೂರ, ಕಸ್ತೂರಿ, ತುಷಾರ, ಮಲ್ಲಿಗೆ ಮತ್ತು ಕೆಲವು ಜನಪ್ರಿಯ ಟ್ಯಾಬ್ಲಾಯ್ಡ್‌ಗಳೂ ವಿಸ್ತಾರವಾದ ಓದುಗ ವರ್ಗವನ್ನೇ ಹೊಂದಿವೆ. ಆದರೆ ಸಂಗೀತ, ಸಾಹಿತ್ಯ, ಧರ್ಮ, ಅಧ್ಯಾತ್ಮ, ವಿಜ್ಞಾನ ಮುಂತಾದ ನಿರ್ದಿಷ್ಟ ಚೌಕಟ್ಟಿನ ಹಿನ್ನೆಲೆಯಲ್ಲಿ ಪ್ರಕಟವಾಗುವ ನಿಯತಕಾಲಿಕೆಗಳ ಪ್ರಕಟನೆ ತುಂಬಾ ಕಷ್ಟದ ಕೆಲಸ. ಏಕೆಂದರೆ ಇಲ್ಲಿ ವಸ್ತು ಒಂದೇ ಆಗಿರುವುದರಿಂದ, ಅದರ ಬಗ್ಗೆ ಅಭಿರುಚಿ ಇರುವವರು ಮಾತ್ರ ಅವುಗಳನ್ನು ಕೊಂಡು ಓದುತ್ತಾರೆ. ಅಂತಹವರ ಸಂಖ್ಯೆ ಎಷ್ಟಿರುತ್ತದೆ? ಜೊತೆಗೆ ದಿನಪತ್ರಿಕೆಗಳಂತೆ ಇವುಗಳನ್ನು ಓದಲೇಬೇಕಾದ ಕಾಲದ ತುರ್ತೂ ಇರುವುದಿಲ್ಲ. ಇದು ಒಂದು ರೀತಿಯ ಸಮಸ್ಯೆಯಾದರೆ, ಇವುಗಳಿಗೆ ಬರೆಯುವ ಲೇಖಕರ ಕೊರತೆ ಮತ್ತೊಂದು ರೀತಿಯ ಸಮಸ್ಯೆ

ಆಗಿರುತ್ತದೆ. ಅದರಲ್ಲಿಯೂ ಧಾರ್ಮಿಕ ನಿಯತಕಾಲಿಕೆಗಳಿಗೆ ಬಾಲಾರಿಷ್ಟವೇ ಹೆಚ್ಚು. ಇವುಗಳನ್ನು ಓದುವವರ ಸಂಖ್ಯೆ ವಾಸ್ತವವಾಗಿ ಕಡಿಮೆಯೇ. ಇದಕ್ಕೆ ಕಾರಣಗಳು ಅನೇಕ. ಹೀಗಿದ್ದೂ ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ 'ಪ್ರಸಾದ' ಪತ್ರಿಕೆ ಕಳೆದ ಮೂವತ್ತೇಳು ವರ್ಷಗಳಿಂದ ಯಶಸ್ವಿಯಾಗಿ ಪ್ರಕಟವಾಗುತ್ತಿದ್ದು ಈಗ ಮೂವತ್ತೆಂಟನೆಯ ವರ್ಷಕ್ಕೆ ಕಾಲಿಡುತ್ತಿದ್ದು, ಐದು ಸಾವಿರದಷ್ಟು ಪ್ರಸಾರ ಸಂಖ್ಯೆಯನ್ನು ಹೊಂದಿದೆ. ಇಂತಹ ನಿಯತಕಾಲಿಕೆಯೊಂದು ಐದು ಸಾವಿರ ಪ್ರಸಾರವನ್ನು ಹೊಂದಿರುವುದು ಸಾಮಾನ್ಯ ವಿಷಯವಲ್ಲ. ಧಾರ್ಮಿಕ ವಿಚಾರಗಳನ್ನು ಸಾಮಾಜಿಕರಿಗೆ ಮುಟ್ಟಿಸಬೇಕು ಎನ್ನುವ ಉದ್ದೇಶದಿಂದ ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ 1967ರಲ್ಲಿ 'ಪ್ರಸಾದ' ಪತ್ರಿಕೆಯನ್ನು ಪ್ರಾರಂಭಿಸಿದರು. ಆಗ ಮೈಸೂರಿನ ಜೆಎಸ್‌ಎಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಪ್ರಸಿದ್ಧ ಜಾನಪದ ವಿದ್ವಾಂಸ ಡಾ. ಜೀ.ಶಂ. ಪರಮಶಿವಯ್ಯನವರು ಇದರ ಸ್ಥಾಪಕ ಸಂಪಾದಕರಾಗಿದ್ದರು. ಮುದ್ರಣ ತಂತ್ರಜ್ಞಾನ ಇಂದಿನಂತೆ ಮುಂದುವರಿದಿಲ್ಲದಿದ್ದರೂ ಪ್ರಸಾದ ತುಂಬಾ ಸುಂದರವಾಗಿ ಪ್ರಕಟವಾಗುತ್ತಿತ್ತು. ನಾಡಿನ ಅನೇಕ ವಿದ್ವಾಂಸರ ಲೇಖನಗಳಿಂದ ಸಂಚಿಕೆ ಮೈದುಂಬಿಕೊಂಡಿರುತ್ತಿತ್ತು. ಮುಂದೆ ಅನೇಕ ಮಹನೀಯರು ಇದರ ಕರ್ಣಧಾರತ್ವವನ್ನು ವಹಿಸಿಕೊಂಡು ನಾಡಿನ ಧಾರ್ಮಿಕ ನಿಯತಕಾಲಿಕೆಗಳ ಸಾಲಿನಲ್ಲಿ ಇದಕ್ಕೊಂದು ಮಹತ್ವದ ಸ್ಥಾನವನ್ನು ತಂದುಕೊಟ್ಟರು.

ಇದು ಶ್ರೀ ಪಾರ್ಥಿವ ಸಂವತ್ಸರದ ಮೊದಲ ಸಂಚಿಕೆ. ಇದುವರೆವಿಗೆ ಇದರ ಪ್ರಧಾನ ಸಂಪಾದಕರಾಗಿದ್ದವರು ನಾಡಿನ ಹಿರಿಯ ಕವಿ, ಚಿಂತಕರಾದ ಶ್ರೀ ಕೆ.ಸಿ. ಶಿವಪ್ಪನವರು. ಶ್ರೀಯುತರದು ಅಭಿಜಾತ ಪ್ರತಿಭೆ. ತಮ್ಮ ನಿರಂತರ ಕ್ರಿಯಾಶೀಲತೆಯಿಂದ 'ಪ್ರಸಾದ' ಬಳಗಕ್ಕೆ ಸ್ಫೂರ್ತಿಯ ಒರತೆಯಾಗಿದ್ದರು. ಸಾಹಿತ್ಯ, ಸಂಗೀತ, ಚಿತ್ರಕಲೆ, ಮುದ್ರಣ, ಮುಖಪುಟ ವಿನ್ಯಾಸ, ಆಡಳಿತ – ಇವುಗಳ ಬಗ್ಗೆ ಅಪಾರ ಅನುಭವ, ಒಳನೋಟ ಇವರದು. ಇಂತಹ ದೈತ್ಯ ಪ್ರತಿಭೆಯ ಒತ್ತಾಸೆಯಿಂದ ನಾನು ಧೈರ್ಯಮಾಡಿ 'ಪ್ರಸಾದ'ದ ಸಂಪಾದಕತ್ವವನ್ನು ವಹಿಸಿಕೊಂಡೆ. ಅವರು ವೈಯಕ್ತಿಕ ಕಾರಣಗಳಿಂದ ಮೈಸೂರನ್ನು ಬಿಟ್ಟು ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿದರು. ಈಗ ಅವರು 'ಪ್ರಸಾದ'ದ ಪ್ರಧಾನ ಸಂಪಾದಕರಲ್ಲ. ಆದರೂ ಅವರು ಕಲಿಸಿದ ಓನಾಮದ ಬಲದಿಂದಲೇ ನಾನು ಮುಂದಿನ ಸಂಚಿಕೆಗಳನ್ನೂ ಸಂಪಾದಿಸುವ ಧೈರ್ಯ ಮಾಡಿದ್ದೇನೆ. ಇಷ್ಟು ವರ್ಷಗಳೂ ನಮಗೆ ಮಾರ್ಗದರ್ಶನ ಮಾಡಿ ಮುನ್ನಡೆಸಿದ್ದಕ್ಕೆ 'ಪ್ರಸಾದ' ಬಳಗ ಅವರಿಗೆ ಯಾವಾಗಲೂ ಋಣಿಯಾಗಿರುತ್ತದೆ. ಲೇಖಕರು ಹಾಗೂ ಓದುಗ ಬಂಧುಗಳು ಈ ನಿಯತಕಾಲಿಕೆಗೆ ಎಂದಿನಂತೆ ಪ್ರೋತ್ಸಾಹ ನೀಡಬೇಕೆಂದು ವಿನಂತಿಸುತ್ತೇನೆ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಪುಷ್ಯಮಾಸದಲ್ಲಿ ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸುವ ದಿನವನ್ನು ಸಂಕ್ರಾಂತಿ ಎಂದು ಕರೆಯಲಾಗಿದೆ. ಅಲ್ಲಿಯ ತನಕ ದಕ್ಷಿಣ ದಿಕ್ಕಿನತ್ತ ಚಲಿಸುತ್ತಿದ್ದ ಸೂರ್ಯ ಅಂದಿನ ನಿರ್ದಿಷ್ಟ ಘಳಿಗೆಯಲ್ಲಿ ಉತ್ತರದ ಕಡೆಗೆ ಚಲಿಸಲಾರಂಭಿಸುತ್ತಾನೆ (ಆದ್ದರಿಂದಲೇ ಇದಕ್ಕೆ ಉತ್ತರಾಯಣ ಎಂದು ಹೆಸರು.) ಹಿಂದೂಗಳಿಗೆ ಇದೊಂದು ಪುಣ್ಯದ ದಿನ. ಸಂಪ್ರದಾಯ ರೀತ್ಯಾ ಪ್ರತಿವರ್ಷವೂ ಮಕರ ಸಂಕ್ರಮಣವನ್ನು ಈ ದಿನದಂದೇ ಆಚರಿಸಲಾಗುತ್ತದೆ. ಸಹಸ್ರಾರು ವರ್ಷಗಳ ಅವಧಿಯಲ್ಲಿ ನಭೋಮಂಡಲದಲ್ಲಿನ ನಕ್ಷತ್ರಗಳ ಚಲನೆಯಿಂದಾಗಿ ಈ ದಿನಗಳು ವಾಸ್ತವವಾಗಿ ಬೇರೆ ದಿನಗಳಿಗೆ ವ್ಯತ್ಯಾಸಗೊಂಡಿದೆ, ಆದರೂ ಜನರು ಪಂಚಾಂಗಗಳನ್ನು ಆಧರಿಸಿ ಹಿಂದಿನ ದಿನಗಳನ್ನೇ ಆಚರಿಸುತ್ತಿದ್ದಾರೆ ಎಂದು ಇತ್ತೀಚಿನ ಸಂಶೋಧಕರು ಅಭಿಪ್ರಾಯಪಡುತ್ತಾರೆ). ಈ ಜಗತ್ತು ರೂಪಿತವಾದ ದಿನದಿಂದಲೂ ಈ ಪ್ರಕ್ರಿಯೆಯಲ್ಲಿ ಯಾವ ಬದಲಾವಣೆಯೂ ಉಂಟಾಗಿಲ್ಲ. ಇದೊಂದು ನಿಸರ್ಗ ನಿಯಮ. ಹಾಗೆ ನೋಡಿದರೆ ನಿಸರ್ಗದ ಯಾವುದೇ ನಿಯಮವೂ ಎಂತಹ ಸಂದರ್ಭದಲ್ಲಿಯೂ ಬದಲಾಗುವುದಿಲ್ಲ. ಇಲ್ಲಿನ ಎಲ್ಲ ಕಾಯಗಳ ಸೃಷ್ಟಿ ಸ್ಥಿತಿ ಲಯಗಳು, ಯಾರಿಗೆ ಗೋಚರವಾಗಲಿ ಬಿಡಲಿ, ಒಂದು ನಿಯತ ರೀತಿಯಲ್ಲಿ ನಡೆಯುತ್ತ ಇರುತ್ತವೆ. ಈ ಸೃಷ್ಟಿಯಲ್ಲಿನ ಎಲ್ಲ ಋತುಮಾನಗಳೂ ಈ ನಿಯಮಕ್ಕೆ ಬದ್ಧವಾಗಿಯೇ ಇರುತ್ತವೆ.

ಇಂಥ ಪ್ರಾಕೃತಿಕ ನಿಯಮಗಳು ಕೇವಲ ಭೂಮಿಗೆ ಸೀಮಿತವಾದುದಲ್ಲ. ಇದು ಅಖಂಡ ಬ್ರಹ್ಮಾಂಡಕ್ಕೂ ಸಂಬಂಧಪಟ್ಟುದು, ಸಾರ್ವಕಾಲಿಕವಾಗಿ ಅನ್ವಯವಾಗುವಂಥದು. ಇಂತಹ ನೈಸರ್ಗಿಕ ಪ್ರಕ್ರಿಯೆಗಳೇ ನಿತ್ಯ ಸತ್ಯ, ಉಳಿದವೆಲ್ಲ ಪಾರ್ಶ್ವಿಕ ಸತ್ಯಗಳು. ಆದ್ದರಿಂದಲೇ ಬ್ರಹ್ಮಾಂಡದ ಅನೇಕ ಪ್ರಕ್ರಿಯೆಗಳು ಪಂಚೇಂದ್ರಿಯಗಳ ಮಿತ ಅನುಭವದ ವಿಶ್ಲೇಷಣೆಯ ವ್ಯಾಪ್ತಿಯಿಂದ ಆಚೆಗೂ ವ್ಯಾಪಿಸುತ್ತವೆ. ಇಡೀ ಸೃಷ್ಟಿಯಲ್ಲಿ ಇಂತಹದೆಲ್ಲಾ ಏಕೆ ಆಗುತ್ತದೆ, ಹೇಗೆ ಆಗುತ್ತದೆ ಎನ್ನುವ ಸಂಶೋಧನೆಯಂತೂ ನಡೆಯುತ್ತಲೇ ಇದೆ. ಆದರೂ ಅದು ಪ್ರಯೋಗಾಲಯದ ಸೀಮಿತ ಉಪಕರಣಗಳ ಪ್ರಯೋಗಗಳಿಗೆ ಅಷ್ಟು ಸುಲಭವಾಗಿ ದಕ್ಕದ ಕಾರಣ, ಸಂಶೋಧನೆ ನಡೆಸಿದಷ್ಟೂ ಈ ಆಕಾಶಕಾಯಗಳ ಪರಿಭ್ರಮಣೆಯ ವಿಸ್ಮಯ 'ಅತ್ಯತಿಷ್ಠದ್ದಶಾಂಗುಲ' ವಾಗಿಯೇ ಉಳಿಯುತ್ತ ಬಂದಿದೆ.

ಇಂತಹ ಸೃಷ್ಟಿ ವಿಸ್ಮಯವನ್ನು ಪರಿಭಾವಿಸಿದ ಮನುಷ್ಯ, ಅದನ್ನು ಒಂದು ವಿಶೇಷ ಸಂದರ್ಭವನ್ನಾಗಿ ಪರಿಗಣಿಸಿ, ವಿಶೇಷ ಅನುಭವವನ್ನಾಗಿ ಸ್ವೀಕರಿಸಿ ಅದಕ್ಕೊಂದು ಧಾರ್ಮಿಕ

ಆವರಣವನ್ನು ಕಲ್ಪಿಸಿ, ಅದನ್ನು ಆರಾಧಿಸಲು ಅನೇಕ ಆಚರಣೆಗಳನ್ನು ರೂಢಿಸಿಕೊಂಡು ಬರಲಾಗಿದೆ.

ಈ ಪಿಂಡಾಂಡ ಆ ಬ್ರಹ್ಮಾಂಡದ ಒಂದು ಭಾಗ ಎನ್ನುವ ಚಿಂತನೆಯ ಹಿನ್ನೆಲೆಯಲ್ಲಿ ಅದರೊಡನೆ ಬೆರೆಯುವ ಕುರುಹಾಗಿ ಇಂತಹ ವಿಶೇಷ ದಿನಗಳಲ್ಲಿ ಅದರ ಉಪಾಸನೆಯನ್ನು ಮಾಡಲಾಗುತ್ತದೆ. ಚಿಂತನಶೀಲರಾದ ದ್ರಷ್ಟಾರರು ಇದನ್ನು ಉನ್ನತ ಹಂತದಲ್ಲಿ ಪರಿಭಾವಿಸಿದರೆ, ಸಾಮಾನ್ಯರ ಸ್ತರದಲ್ಲಿ ಅದು ಕೇವಲ ಬಾಹ್ಯಾಚರಣೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಆದರೂ ಅಂತಹವರ ಮುಗ್ಧ ಮನಸ್ಸುಗಳ ಒಳಗೂ ಆ ತತ್ತ್ವದರ್ಶನದ ಅಭೀಪ್ಸೆ ಸೂಕ್ಷ್ಮರೂಪದಲ್ಲಿ ಅಡಕವಾಗಿಯೇ ಇರುತ್ತದೆ ಎನ್ನುವುದನ್ನು ಧಾರ್ಮಿಕಾಚರಣೆಯ ಸಂದರ್ಭದಲ್ಲಿ ಒಂದು ಸಮೂಹ ನಡೆದುಕೊಳ್ಳುವ 'ಏಕೋಭಾವ'ದ ಸ್ಥಿತಿಯಲ್ಲಿ ಸ್ಪಷ್ಟವಾಗಿ ಗುರ್ತಿಸಬಹುದು.

ಇಡೀ ಬ್ರಹ್ಮಾಂಡದಲ್ಲಿನ ಗ್ರಹತಾರೆ ನೀಹಾರಿಕೆಗಳಿಂದ ಹಿಡಿದು ಭೂಗೋಲದ ಒಂದು ಅನಾಮಧೇಯ ಜೀವಿಯ ತನಕ ಯಾವುದೂ ತನ್ನ ಸಹಜ ಪಥವನ್ನು ಬಿಟ್ಟು ಕೂದಲೆಳೆಯಷ್ಟೂ ಕ್ರಮಿಸುವುದಿಲ್ಲ. ಕ್ರಮಬಿಟ್ಟು ಅಕ್ರಮಗಳು ನಡೆಯುವುದು, ತಾನೊಬ್ಬ ವಿಚಾರವಂತ ಜೀವಿ ಎಂದುಕೊಂಡು ಬೀಗುವ ಮನುಷ್ಯನಲ್ಲಿ ಮಾತ್ರ. ಅದಕ್ಕೆ ಕಾರಣ ಸ್ಪಷ್ಟ – ನಿಸರ್ಗಸಹಜ ಬಯಕೆಗಳನ್ನು ಧಿಕ್ಕರಿಸಿ ತೆರಣಿಯ ಹುಳುವಿನಂತೆ ತನ್ನ ಸುತ್ತ ಅನಂತ ಕೃತಕ ಬಯಕೆಗಳ ಬಲೆಯನ್ನು ತಾನೇ ನೇಯ್ದುಕೊಂಡಿರುವುದು. ಇಡೀ ವ್ಯವಸ್ಥೆ ತನ್ನ ಸುಖಕ್ಕಾಗಿ ಮಾತ್ರ ಸೀಮಿತವಾಗಿರಬೇಕು ಎನ್ನುವ ದುರಾಸೆ. ಇಂತಹ ದುರಾಶಾಪೂರಿತ ಬಯಕೆಗಳ ಕಾಡುಹಾದಿಯಲ್ಲಿ ಕ್ರಮಿಸಿ ಮನುಜ ತನ್ನ ನಿಜದ ಗುರಿಯ ಹಾದಿ ತಪ್ಪುತ್ತಿರುವುದರ ಫಲವೇ ಇಂದಿನ ಅನೇಕ ಗೊಂದಲಗಳಿಗೆ ಕಾರಣವಾಗಿದೆ. ಎಲ್ಲರ ಮುಂದೆಯೂ ಎಲ್ಲ ರೀತಿಯ ದಾರಿಗಳೂ ತೆರೆದುಕೊಂಡಿರುತ್ತವೆ. ಆದರೆ ದಾರಿಯ ಆಯ್ಕೆ ಮತ್ತು ಅನಿವಾರ್ಯತೆಗಳನ್ನು ಮನುಷ್ಯ ಅರಿತುಕೊಳ್ಳಬೇಕಾಗಿದೆ. ಆ ಆಯ್ಕೆಯಲ್ಲಿ 'ಬಹುಜನ ಹಿತಾಯ ಬಹುಜನ ಸುಖಾಯ' ತತ್ತ್ವ ಅಡಕವಾಗಿರಬೇಕಿದೆ. ಆಗ ಮಾತ್ರ ಹಿಡಿದ ಹಾದಿ ಕೇವಲ ಸುಖದ ಹಾದಿಯಾಗುವುದಿಲ್ಲ, ಅದು ಬ್ರಹ್ಮಾನಂದದ ಹಾದಿಯಾಗುತ್ತದೆ. ಈ ದಿನ ನಿರ್ದಿಷ್ಟ ಘಳಿಗೆಯಲ್ಲಿ ಹೇಗೆ ಸೂರ್ಯ ದಕ್ಷಿಣಾಯನದಿಂದ ಉತ್ತರಾಯಣಕ್ಕೆ ಚಲಿಸುತ್ತಾನೋ, ಅಂಥದೇ ಸಹಜ ನಡೆ ಮನುಷ್ಯನ ಆತ್ಮಸಾಕ್ಷಿಯ ಹಾದಿಯಲ್ಲಿ ನಿರಂತರವಾಗಿ ಚಲಿಸಿದಾಗ ಮಾತ್ರ ಮನುಷ್ಯನ ಲೌಕಿಕ ಬದುಕೂ ಸ್ವರ್ಗಸದೃಶವಾಗುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ. ಸಂಕ್ರಾಂತಿಯ ಆಚರಣೆ ಇಂತಹ ಸಹಜ ಸಂಕಲ್ಪವನ್ನು ಎಲ್ಲರಲ್ಲಿ ಉದ್ದೀಪಿಸಲಿ ಎಂದು ಆಶಿಸುತ್ತೇವೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಉದಕ ಮೂರುತಿಯಾಗಿ ಉದಯವಾಯಿತು ಪಿಂಡಿಗೆಯಲ್ಲಿ

ಎನ್. ಬೋರಲಿಂಗಯ್ಯ

ಅಲ್ಲಮಪ್ರಭು ಗುಹೇಶ್ವರನನ್ನು ಒಂದು ಸಂಕೇತವಾಗಿಟ್ಟುಕೊಂಡು ಈ ಲೋಕದ ಆಗುಹೋಗುಗಳನ್ನು ಕುರಿತ ತನ್ನ ಅನುಭವಗಳನ್ನು ವಚನಗಳ ಮೂಲಕ ದಾಖಲಿಸಲು ಪ್ರಯತ್ನಿಸಿದ್ದಾನೆ. ಅವನ ವಚನಗಳು ಮೂಲತಃ ಹೆಚ್ಚು ವಸ್ತುನಿಷ್ಠವಾಗಿವೆ. ವ್ಯಕ್ತಿನಿಷ್ಠೆಯಿಂದ ಅವನು ಯೋಚಿಸುತ್ತಿರುವಂತೆಯೇ ತೋರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಅವನು ಭಕ್ತನಲ್ಲದೆ ಇರುವುದು. ಆ ಕಾರಣಕ್ಕಾಗಿಯೇ ಅವನನ್ನು ಭಕ್ತಿಮೂಲವಾದ ದಯೆ, ದಾಕ್ಷಿಣ್ಯಗಳು ಅಷ್ಟಾಗಿ ಕಾಡುವುದಿಲ್ಲ. ಹಾಗಾಗಿ ಅವನ ದೃಷ್ಟಿ ನೇರ ಮತ್ತು ಹರಿತ. ವಿರಕ್ತ ಮತ್ತು ಅಲೆಮಾರಿ ಸನ್ಯಾಸಿಯಾದ ಅಲ್ಲಮನನ್ನು ಮುಜುಗರಗಳು ಹಿಂಸಿಸುವುದಿಲ್ಲ. ವ್ಯಕ್ತಿಯನ್ನು ಮುಜುಗರಗಳು ಕಾಡುವುದು ವೈಯಕ್ತಿಕ ನೆಲೆಯಲ್ಲಿ ಗೊಂದಲಗಳಿದ್ದಾಗ ಮಾತ್ರ. ಅಲ್ಲಮಪ್ರಭು ಏನನ್ನು ಕುರಿತು ಮಾತನಾಡುತ್ತಾನೋ ಅದು ಅವನಿಗೆ ಹೃದ್ಗತವಾಗಿರುತ್ತದೆ. ಅದರ ಬಗ್ಗೆ ಅವನಿಗೆ ಸಂಪೂರ್ಣ ತಿಳಿವಳಿಕೆಯಿರುತ್ತದೆ. ಅವನು ನಿಜವಾಗಿಯೂ, ನಿಜವಾದ ಅರ್ಥದಲ್ಲಿ 'ಅರಿತ'ವನಾಗಿದ್ದಾನೆ. ವಿಚಾರಗ್ರಹಣದಲ್ಲಿ, ವಿಚಾರಮಂಡನೆಯಲ್ಲಿ ತಾಕಲಾಟಗಳಿಲ್ಲದ ವಚನಕಾರನೆಂದರೆ, ಅಲ್ಲಮಪ್ರಭು.

ಅಲ್ಲಮನಲ್ಲಿ ನಾವು ಗಮನಿಸಬೇಕಾದ ಬಹಳ ಮುಖ್ಯವಾದ ಮತ್ತೊಂದು ಗುಣ ಎಂದರೆ, ಅವನು ಲೌಕಿಕವಾದ ಎಲ್ಲ ಬಗೆಯ ಮಾನಾಪಮಾನಗಳಿಂದ ಬಿಡುಗಡೆ ಹೊಂದಿರುವುದು. ಇದು ನಿಜವಾದ ದಾರ್ಶನಿಕನ ಲಕ್ಷಣ. ಎಂಥವರನ್ನೂ ಚಂಚಲಗೊಳಿಸುವ ವರ್ಣವೈವಿಧ್ಯದಿಂದ ಕೂಡಿರುವ ಮಾನವ ಬದುಕಿನಲ್ಲಿ ರಾಗದ್ವೇಷಗಳಿಗೆ ಬಲಿಯಾಗದಿರುವುದು ಬಹಳ ಕಷ್ಟದ ಮಾತು. ಅದು ಸ್ವತಃ ಪ್ರಭುವಿಗೂ ತಿಳಿದಿರುವ ಮಾತು. ಈ ಕುರಿತು ಅನೇಕ ಕಡೆ ಅವನಲ್ಲಿ ಪ್ರಸ್ತಾಪಗಳಿವೆ. ಆದರೆ, ಅವನ್ನೆಲ್ಲ ಅವನು ನಿರ್ವಹಿಸುವ ರೀತಿ ಅನನ್ಯವಾಗಿದೆ. ಅಲ್ಲಮಪ್ರಭುವಿಗೆ ಸಿಟ್ಟು ದ್ವೇಷದ ಮೂಲದಿಂದ ಬಂದದ್ದಲ್ಲ, ಪ್ರೀತಿಯ ಮೂಲದಿಂದ ಚಿಮ್ಮಿದ್ದು. ದ್ವೇಷ ನಾಶಕ್ಕೆ ದಾರಿಯಾದರೆ, ಪ್ರೀತಿ ವಿಕಾಸಕ್ಕೆ ನಾಂದಿಯಾಗುತ್ತದೆ. ಎಲ್ಲವನ್ನು ಸರಿಪಡಿಸಬೇಕೆಂಬ ಕಳಕಳಿಯಿಂದ ಚಿಂತಿಸುವ ಅಲ್ಲಮನಲ್ಲಿ ಕ್ಷಮಾಗುಣ ಕೊಂಚ ಕಡಿಮೆ ಇದೆ. ಪ್ರಕೃತಿ ತಪ್ಪುಗಳನ್ನು ಕ್ಷಮಿಸುವುದಿಲ್ಲ ಎಂಬ ಎಚ್ಚರ ಅಲ್ಲಮನಿಗೆ ಯಾವಾಗಲೂ ಇರುತ್ತದೆ.

ಅಲ್ಲಮನ ಹೃದಯದಲ್ಲಿ ಪ್ರೀತಿ ತುಂಬಿರುತ್ತದೆ ಎಂದ ಮಾತ್ರಕ್ಕೆ ಅಲ್ಲಿ ಕರುಣೆಯೂ

ಇರುತ್ತದೆ ಎಂದು ತಿಳಿಯಬಾರದು. ಕೋಪದಲ್ಲಿ ಪ್ರೀತಿ ಅಂತರ್ಗತವಾಗಿರಲು ಸಾಧ್ಯ. ಆದರೆ, ಅಲ್ಲಿ ಕರುಣೆಗೆ ಸ್ವಲ್ಪ ಕೂಡ ಜಾಗ ಇರುವುದಿಲ್ಲ, ಇರಬಾರದು ಕೂಡ. ಪ್ರೀತಿಪೂರ್ವಕ ಕೋಪ ಮನುಷ್ಯನನ್ನು ಉದ್ಧರಿಸಿದರೆ, ಕರುಣೆಮಿಶ್ರಿತ ಕೋಪ ಅವನನ್ನು ನಾಶದ ದಾರಿಗೆ ಹಚ್ಚುತ್ತದೆ.

ನಾನೀಗ ಆಧುನಿಕ ಬದುಕಿಗೆ ಅಲ್ಲಮನ ಅನಿವಾರ್ಯತೆಯನ್ನು ಕುರಿತು ಮಾತನಾಡುತ್ತಿದ್ದೇನೆ. ಅಂದ ಮಾತ್ರಕ್ಕೆ, ನಾನು ವೀರಶೈವ ಧರ್ಮದ ಬಗ್ಗೆ ಮಾತನಾಡುತ್ತಿದ್ದೇನೆಂದು ತಪ್ಪು ತಿಳಿಯಬಾರದು. ಹಾಗೆ ನೋಡಿದರೆ, ಪ್ರಭುವೆ ವೀರಶೈವನಲ್ಲ. ಶೈವ ಪರಿಭಾಷೆಯಲ್ಲಿ ಮಾತನಾಡುತ್ತಿರುವ ಒಬ್ಬ ವಿಶ್ವಮಾನವ. ಕನ್ನಡದ ಸಂದರ್ಭದಲ್ಲಿ ಆ ಬಗೆಯ ಅಥವಾ ಮತ್ತೂ ಹೆಚ್ಚಿನ ವ್ಯಾಪ್ತಿಯ ಇನ್ನೊಬ್ಬ ಗಂಭೀರ ಚಿಂತಕ ಕಾಣಿಸಿಕೊಂಡದ್ದು ಸುಮಾರು ಎಂಟುನೂರು ವರ್ಷಗಳ ನಂತರದ ಕುವೆಂಪುವಿನಲ್ಲಿ. ಕುವೆಂಪು ವೈದಿಕ ಪರಿಭಾಷೆಯಲ್ಲಿ ಬರೆದಿದ್ದರೂ ವೈದಿಕರಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಅಲ್ಲಮನ ಅದೃಷ್ಟ ಕೆಳಜಾತಿಯವರನ್ನೂ ಮೇಲಕ್ಕೆತ್ತುವ ಸಂಕಲ್ಪಬಲದ ವಚನಕಾರರ ಸಂದರ್ಭದಲ್ಲಿ ಹುಟ್ಟಿದ್ದು; ಕುವೆಂಪುಗೆ ರಾಮಕೃಷ್ಣ ಪರಮಹಂಸ ಮತ್ತು ಗಾಂಧೀಯುಗದ ಬೆಂಬಲ ಸಿಕ್ಕಿದಂತೆ.

ಕಳೆದ ಎರಡು ಮೂರು ಸಾವಿರ ವರ್ಷಗಳಲ್ಲಿ ಕಾಲ ಬಹಳ ಬದಲಾದಂತೇನೂ ತೋರುವುದಿಲ್ಲ. ಕಾಲಕಾಲಕ್ಕೆ ನಡೆಯುತ್ತಾ ಬಂದ ಮತೀಯ ಚಳವಳಿಗಳೂ, ರಾಜಕೀಯ ವಿಪ್ಲವಗಳೂ ಮನುಷ್ಯನ ಅಂತರಂಗದಲ್ಲಿ ಶಾಂತಿ ನೆಮ್ಮದಿಗಳಿಗಿಂತ ಹೆಚ್ಚಾಗಿ ದ್ವೇಷಾಸೂಯೆಗಳನ್ನೆ ಹೆಚ್ಚು ಹೆಚ್ಚು ಹುರಿಗೊಳಿಸುತ್ತಾ ಬಂದಿರುವುದು ಕಾಣಿಸುತ್ತಿದೆ. ಇತ್ತೀಚಿನ ವಿಜ್ಞಾನ-ತಂತ್ರಜ್ಞಾನ ಪ್ರೇರಿತ ಪ್ರಗತಿ ಕೂಡ ಬಾಹ್ಯರೂಪದ್ದಾಯಿತೆ ಹೊರತು ಆಂತರಂಗಿಕವಾಗಿ ಮೌಲಿಕ ಪರಿಣಾಮ ಬೀರಿದಂತಿಲ್ಲ. ಎಲ್ಲ ಕಾಲದಲ್ಲಿಯೂ ಎಲ್ಲ ಬಗೆಯ ಜನರೆ ಇದ್ದದ್ದು. ಅಂಥವರಲ್ಲಿ ಅಲ್ಲಮಪ್ರಭುವೂ ಒಂದು ಮಾದರಿ; ಅಂದಿನಂತೆ ಇಂದಿಗೂ ಅಚ್ಚರಿ ಹುಟ್ಟಿಸುವ ಮಾದರಿ. ಮುಂದಕ್ಕಿರುವುದು ಅಲ್ಲಮನ ಚಿಂತನೆ.

ಹುಟ್ಟಿದಲ್ಲಿಯೆ ಹೊಂದುವುದೆಲ್ಲರಿಗೆಯೂ ಸ್ವಭಾವ.
ಪುಣ್ಯಪಾಪವೆಲ್ಲರಿಗೆಯೂ ಸ್ವಭಾವ.
ಮಹಾ ಶಿವತತ್ವದಲ್ಲಿ ಹುಟ್ಟಿದ ಶಿವಭಕ್ತರು,
ಆಗಮ ತತ್ವದಲ್ಲಿ ಹೊಂದಿದಡೇನು?
ಆ ಪುಣ್ಯಪಾಪವಿಲ್ಲಾಗಿ, ಅವರು ಮಹಾನುಭಾವರು.
ಆದಡೇನು? ಲೋಕದ ಪರಿಯೆ? – ಅಲ್ಲ.
ಇದ, ಲೋಕದ ಪರಿಯೆಂಬ ಅಜ್ಞಾನಿಗಳನೇನೆಂಬೆ ಗುಹೇಶ್ವರಾ.

ಅಲ್ಲಮಪ್ರಭು ತೀಕ್ಷ್ಣ ಸಮಾಜ ವಿಜ್ಞಾನಿ. ಬಹಳ ಪೂರ್ವದಿಂದಲೂ ಮತೀಯ ಧರ್ಮಗಳು ಹುಟ್ಟಿ ಹುಲುಸಾಗಿ ಬೆಳೆದು ಕಾದುತ್ತಿದ್ದದ್ದು ಅವನಿಗೆ ಚೆನ್ನಾಗಿ ತಿಳಿದಿತ್ತು. ತನ್ನ

ಕಾಲದಲ್ಲಿಯೇ ತನಗೇ ಜೈನ ಮತ್ತು ಆಗಮ ತತ್ವಗಳು ಎದುರಾಗಿದ್ದುದನ್ನು ಅವನು ಗಂಭೀರವಾಗಿಯೇ ತೆಗೆದುಕೊಂಡಿದ್ದನು. ಪ್ರಭು ತನ್ನ ವಚನಗಳಲ್ಲಿ ಯಾವ ಬಗೆಯ ಚಾರಿತ್ರಿಕ ಸುಳುಹುಗಳನ್ನೂ ಬಿಟ್ಟುಕೊಡುವುದಿಲ್ಲ. ಅದು ಅವನಿಗೆ ಅನಾವಶ್ಯಕ ಕೂಡ. ಚರಿತ್ರೆಯ ಪುಟಗಳಲ್ಲಿ ಹುದುಗಿಕೊಳ್ಳಲು ಇಷ್ಟಪಡದ ತತ್ವಗಳಿಗಾಗಿ ಅವನ ಹುಡುಕಾಟ. ತತ್ವಗಳಿಗೆ ಸಾವಿರುವುದಿಲ್ಲ. ಹಿಮಗಾಡುಗಳಲ್ಲಿ ಅರೆಚೇಷ್ಟಿತವಾಗಿ ಬಿದ್ದಿರುವ ಪ್ರಾಣಿಗಳಂತೆ ತಕ್ಕ ಗಾಳಿ ತೂರಿದಾಗ ಉಸಿರಾಟ ಆರಂಭಿಸುತ್ತವೆ. ಮಡಿ-ಮೈಲಿಗೆ, ಪಾಪ-ಪುಣ್ಯ ಮುಂತಾದ ದ್ವಂದ್ವಗಳನ್ನೂ ಪ್ರಭು ಮೈಗಂಟಿಸಿಕೊಂಡವನಲ್ಲ. ಮುಕ್ತವಾಗಿ ಚಿಂತಿಸಿ ಮುಕ್ತವಾಗಿ ದಾಖಲಿಸುವುದು ಅವನ ಸ್ವಭಾವ.

ಸಾಮಯಿಕ ದ್ವಂದ್ವಗಳು ಪ್ರಭುವನ್ನು ಕಾಡಿರುವುದು ನಿಜ. ಆದರೆ ಅದಕ್ಕೆ ಹೆದರಿ ಅವನು ಸತ್ಯ ಹೇಳುವುದನ್ನು ಬಿಟ್ಟುಕೊಡುವುದಿಲ್ಲ, ಬಡಪಟ್ಟಿಗೆ ರಾಜಿಯನ್ನು ಮಾಡಿಕೊಳ್ಳುವುದಿಲ್ಲ. ಇಂಥದಕ್ಕೆಲ್ಲ ತಾಯಿ-ತಂದೆಯಂತೆ ಸಾರ್ವಕಾಲಿಕ ರಕ್ಷಣೆ ನೀಡುವ ಪ್ರಭು ತನ್ನ ವಿಚಾರಗಳನ್ನು ತನ್ನ ವಚನಗಳಲ್ಲಿ ಹುದುಗಿಸಿಟ್ಟಿದ್ದಾನೆ. ಈ ಮೇಲಿನ ವಚನ ಅಂಥ ಒಂದು ತಾತ್ವಿಕ ಕಾವ್ಯ.

ಒಂದು ಮತದಲ್ಲಿ ಹುಟ್ಟಿ ಮತ್ತೊಂದು ಮತದಲ್ಲಿ ಸಾಯುವುದು ಅಪರೂಪವೇನಲ್ಲ. ಆದರೆ ತಾತ್ವಿಕವಾಗಿರುವ ಪುಣ್ಯ-ಪಾಪದ ಜಿಗುಟಿನ ಪ್ರಶ್ನೆಯನ್ನು ಪ್ರಭು ಇಲ್ಲಿ ಎದುರಿಸುತ್ತಿದ್ದಾನೆ. ಈ ವಚನದ ಮೊದಲಿನ ಎರಡು ಸಾಲುಗಳಲ್ಲಿ ಪ್ರಭು ಎರಡು ಪ್ರಮುಖ ವಿಚಾರಗಳನ್ನು ಮಂಡಿಸುತ್ತಿದ್ದಾನೆ. ಮಾನವ ಬದುಕಿನ ಬಹು ಭಾಗವನ್ನು ಮಿಸುಕಾಡದಂತೆ ಕಟ್ಟಿಹಾಕಿರುವ ವಿಚಾರಗಳು ಅವು. "ಹುಟ್ಟಿದಲ್ಲಿಯೇ ಹೊಂದುವುದೆಲ್ಲರಿಗೆಯೂ ಸ್ವಭಾವ. ಪುಣ್ಯ ಪಾಪವೆಲ್ಲರಿಗೆಯೂ ಸ್ವಭಾವ." ಪರಸ್ಪರ ವಿರುದ್ಧವಾದ ಎರಡು ವಿಚಾರಗಳು ಈ ಎರಡು ಮಾತುಗಳಲ್ಲಿವೆ.

ಮನುಷ್ಯನ ಮನಸ್ಸು ಬಹು ದೊಡ್ಡ ಅಖಾಡ. ಅಲ್ಲಿಯ ಘೋರ ಯುದ್ಧದಲ್ಲಿ ನೂರಾರು ಕನಸುಗಳು ಹುಟ್ಟಿ ಸಾಯುತ್ತಿರುತ್ತವೆ. ಅಂಥ ಒಂದು ಸಾವು ಬದುಕಿನ ಪ್ರಶ್ನೆಯನ್ನು ಪ್ರಭು ಇಲ್ಲಿ ಎತ್ತುತ್ತಿದ್ದಾನೆ. ಹುಟ್ಟಿದ ಮತದಲ್ಲಿಯೆ ಬದುಕಿ ಸಾಯುವುದು ಒಂದು ರೂಢಿಯ ಮಾತು. ಬಹುತೇಕ ಹಾಗೆ ಇರುವುದು ನಿಜ. ಇದು ಪುಣ್ಯದ ಕೆಲಸವೆನ್ನುವುದಾದರೆ ಇದನ್ನು ವಿರೋಧಿಸುವುದು ಪಾಪದ ಕೆಲಸವೆಂದಾಗುತ್ತದೆ. ಈ ಪಾಪದ ಕೆಲಸವೂ ನಿಜ ಮತ್ತು ಸ್ವಾಭಾವಿಕ. ಹಾಗಾದರೆ ಪ್ರಭು ಇಲ್ಲಿ ಏನನ್ನು ಹೇಳಿದಂತಾಯಿತು? ಉತ್ತರ ಮುಂದಿನ ಸಾಲುಗಳಲ್ಲಿದೆ –

> ಮಹಾ ಶಿವತತ್ವದಲ್ಲಿ ಹುಟ್ಟಿದ ಶಿವಭಕ್ತರು,
> ಆಗಮ ತತ್ವದಲ್ಲಿ ಹೊಂದಿದಡೇನು?
> ಆ ಪುಣ್ಯಪಾಪವಿಲ್ಲಾಗಿ, ಅವರು ಮಹಾನುಭಾವರು.

ಇಲ್ಲಿಯ 'ಮಹಾ' ವಿಶೇಷಣವು ಶಿವತತ್ತ್ವವನ್ನು ಆಗಮ ತತ್ತ್ವಕ್ಕಿಂತ ಮೇಲೆಂದು ತಿಳಿಸುವುದಕ್ಕೆ ಬಳಕೆಯಾಗಿಲ್ಲ ಎಂಬುದನ್ನು ತಿಳಿದಿರುವುದು ಉಚಿತ. ಯಾಕೆಂದರೆ "ಅವರು ಮಹಾನುಭಾವರು" ಎಂಬಲ್ಲಿ ವ್ಯಂಗ್ಯವೇನೂ ಇಲ್ಲ. ಪ್ರಭು ಇಲ್ಲಿ ಮುಖ್ಯವಾಗಿ ಮಾಡಬೇಕೆಂದಿರುವುದು "ಆ ಪುಣ್ಯಪಾಪವಿಲ್ಲಾಗಿ" ಎಂಬುದರ ಪ್ರತಿಷ್ಠಾಪನೆ. ಆಚಾರಕ್ಕೆ ಅವ್ಯೆಚಾರಿಕವಾಗಿ ಅಂಟಿಕೊಳ್ಳುವ ಬದುಕನ್ನು ಪ್ರಭು ಪುಣ್ಯವೆಂದು ಕರೆಯುವುದಿಲ್ಲ. ವಿಚಾರ ಸಮ್ಮತವಾದ ಪರಿವರ್ತನೆಯನ್ನು ಪಾಪವೆಂದೂ ಕರೆಯುವುದಿಲ್ಲ. ಶಿವತತ್ತ್ವದಲ್ಲಿ ಹುಟ್ಟಿ ಆಗಮತತ್ತ್ವದಲ್ಲಿ ಸಾಯುವುದು ಲೋಕದ ರೂಢಿಯ ಮಾತಲ್ಲದಿರಬಹುದು. ಆದರೆ ಅದೂ ಒಂದು ಮಹಾನುಭಾವರ ಕೆಲಸವೆ. ಹುಟ್ಟಿದಲ್ಲಿಯೇ ಹೊಂದಬೇಕೆನ್ನುವ ಅಜ್ಞಾನಿಗಳನ್ನು ಏನೆಂದು ಕರೆಯಲಿ? ಇದು ಪ್ರಭುವಿನ ಪ್ರಶ್ನೆ. ಅಂದರೆ, ಬದುಕಿನಲ್ಲಿ ಆಚಾರ-ವಿಚಾರಗಳ ಮಾತು ಬಂದಾಗ ತಾತ್ತ್ವಿಕವಾಗಿ ಪ್ರಭು ವಿಚಾರದ ಪರವಾಗಿ ವಕಾಲತ್ತು ವಹಿಸುತ್ತಾನೆ.

ಹಾಗಾದರೆ ಬದುಕಿನಲ್ಲಿ ಪಾಪ-ಪುಣ್ಯಗಳ ಪ್ರಶ್ನೆಯೆ ಇಲ್ಲವೆ! ಇದೆ ಎನ್ನುತ್ತಾನೆ ಪ್ರಭು. ಅದೊಂದು ಪರಿಮಿತವಾದ ಒಡಲಿನ ಪ್ರಶ್ನೆ; ಅಪರಿಮಿತವಾದ ಜ್ಞಾನದ ಪ್ರಶ್ನೆಯಲ್ಲ. ಈ ಮುಂದಿನ ವಚನದಲ್ಲಿ ಪ್ರಭು ಈ ಸಮಸ್ಯೆಗೆ ಉತ್ತರಿಸಿದ್ದಾನೆ.

> ಎಣ್ಣೆ ಬೇರೆ ಬತ್ತಿ ಬೇರೆ; ಎರಡೂ ಕೂಡಿ ಸೊಡರಾಯಿತ್ತು.
> ಪುಣ್ಯ ಬೇರೆ ಪಾಪ ಬೇರೆ; ಎರಡೂ ಕೂಡಿ ಒಡಲಾಯಿತ್ತು.
> ಮಿಗಬಾರದು, ಮಿಗದಿರಬಾರದು, ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು.

ಇಲ್ಲಿ ಪ್ರಭು ಭಕ್ತನ ಸ್ವರೂಪವನ್ನು ನಿರ್ಣಯಿಸುತ್ತಿದ್ದಾನೆ. ಅದು ಪಾಪ-ಪುಣ್ಯಗಳ ತೊಡಕನ್ನು ಬಿಡಿಸಿಕೊಳ್ಳುವುದರಲ್ಲಿದೆ. ಸೊಡರು ಮಾನವದೇಹಕ್ಕೆ ಒಡ್ಡಿದ ಪ್ರತಿಮೆ. ಸಂದೇಹವಿಲ್ಲ, ರೋಮಾಂಚಕಾರಿ ಪ್ರತಿಮೆ. ಮಾತ್ರವಲ್ಲ ಪುಣ್ಯ-ಪಾಪಗಳನ್ನು ಎಣ್ಣೆ ಬತ್ತಿಗೆ ಹೋಲಿಸುತ್ತಿರುವುದೂ ಹಿತಕರ. ಯಾಕೆಂದು ಕೇಳಿ; ಸಾಮಾನ್ಯವಾಗಿ ಜ್ಯೋತಿಯನ್ನು ಜ್ಞಾನಕ್ಕೆ ಹೋಲಿಸುವುದು ಸಂಪ್ರದಾಯ. 'ಜ್ಞಾನಜ್ಯೋತಿ' ಎಂಬುದು ಒಂದು ನುಡಿಗಟ್ಟು ಕೂಡ. ಆದರೆ ಪ್ರಭು ಇಲ್ಲಿ ದೇಹವನ್ನೇ ಜ್ಯೋತಿಯಾಗಿಸುತ್ತಿದ್ದಾನೆ. ಪ್ರಭುವಿನ ತಾತ್ತ್ವಿಕ ತೀಕ್ಷ್ಣತೆ ಇರುವುದೆ ಇಲ್ಲಿ. ಎಣ್ಣೆ ಬತ್ತಿಗಳು ಕೂಡಿ ಸೊಡರಾಗುವಂತೆ ಪುಣ್ಯ-ಪಾಪಗಳು ಕೂಡಿ ಒಡಲಾಗುತ್ತದೆ. ಎಣ್ಣೆ ಬತ್ತಿಗಳ ಹೆಸರನ್ನು ಕೇಳಿದಾಗ ಒಂದು ಬಗೆಯ ತಟಸ್ಥಭಾವ ಉಂಟಾಗುವಂತೆ ಪುಣ್ಯ-ಪಾಪಗಳ ಹೆಸರು ಕೇಳಿದಾಗ ಉಂಟಾಗುವುದಿಲ್ಲ. ಪಾಪವನ್ನು ತಿರಸ್ಕರಿಸಲು ಮನಸ್ಸಾಗುತ್ತದೆ. ಆದರೆ ಈ ದ್ವಿಪಾತ್ರದಲ್ಲಿ ಯಾವ ಒಂದನ್ನೂ ತಿರಸ್ಕರಿಸುವ ಪ್ರಶ್ನೆಯೇ ಇಲ್ಲ. ಹಾಗೆ ಅಡ್ಡಗಟ್ಟಿ ನಿಲ್ಲಿಸಿದ್ದಾನೆ, ಪ್ರಭು. ಯಾಕೆಂದರೆ, ಇವುಗಳಲ್ಲಿ ಯಾವ ಒಂದನ್ನು ತಿರಸ್ಕರಿಸಿದರೂ ನಮಗೆ ಅನಿವಾರ್ಯವಾಗಿ ಬೇಕಾಗಿರುವ ಮೂರನೆಯ ಇನ್ನೊಂದು ಸೃಷ್ಟಿಯಾಗುವುದೇ ಇಲ್ಲ.

ದೇಹದ ಪ್ರಸ್ತುತತೆಯನ್ನು ಪ್ರಭು ಇಲ್ಲಿ ಮಂಡಿಸುತ್ತಿದ್ದಾನೆ. ನಿಸ್ಸಂದೇಹವಾಗಿ ಅದು ನಮ್ಮ ಜ್ಞಾನವಾಹಿನಿಯ ಪಾತ್ರ. ಅಂದರೆ ಜ್ಞಾನದ ರಕ್ಷಣೆಯಾಗಬೇಕಾದರೆ ದೇಹದ ರಕ್ಷಣೆಯಾಗಲೇಬೇಕಾಗುತ್ತದೆ.

ಇಲ್ಲಿ ಪಾಪ-ಪುಣ್ಯಗಳ ಪ್ರಶ್ನೆ ಇರುವುದರಿಂದ ಮತ್ತೊಂದು ವಿಷಯವನ್ನು ಗಮನಿಸಬೇಕಿದೆ. ನಮ್ಮ ಶರೀರ ಬಾಧಿಸುವ ಇಂದ್ರಿಯಗಳಿಂದ ಕೂಡಿದ್ದು. "ಮಿಗಬಾರದು ಮಿಗದಿರಬಾರದು ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು" ಎಂದಾಗ ಅದರ ಅರ್ಥ ಶರೀರ ಪೋಷಕ ಆಹಾರಕ್ಕೆ ಮಾತ್ರ ಸೀಮಿತವಾಗುವುದಿಲ್ಲ; ಇಂದ್ರಿಯಪೋಷಕ ಆಹಾರದ ಕಡೆಗೂ ಬೊಟ್ಟು ಮಾಡುತ್ತದೆ. ಆಹಾರ ದೇಹಸಂಬಂಧಿಯಾಗಿರುವತನಕ ಅಂಥ ಸಮಸ್ಯೆಯಿರುವುದಿಲ್ಲ. ಅದು ಇಂದ್ರಿಯಸಂಬಂಧಿಯಾದಾಗ ಮಾತ್ರ ಸಮಸ್ಯೆಗಳು ಘೇರಾಯಿಸುತ್ತವೆ. ಅದು ಪೂರ್ತಿಯಾಗಿ ಪುಣ್ಯ-ಪಾಪಗಳು ಕೂಡಿ ಆಗಿರುವ ಶರೀರವೇ ಆಗಿದ್ದರೂ 'ಇದು ಒಂದು ಪಾಪದ ಕೊಡ' ಎಂಬ ಭ್ರಮೆಯನ್ನು ಹುಟ್ಟಿಸುವಷ್ಟರ ಮಟ್ಟಿಗೆ ಕೊಬ್ಬಿರುವ ಇಂದ್ರಿಯಗಳ ಉಪಟಳ ಹೆಚ್ಚಾಗುತ್ತದೆ. ಆಗ ದೇಹವೇ ಇಂದ್ರಿಯಗಳ ಅಧೀನವಾಗುವ ಸಾಧ್ಯತೆಯಿರುತ್ತದೆ. ಈ ಬಗೆಯ ಪಾಪದ ಹಿಡಿತದಿಂದ ಒಡಲು ಬಿಡುಗಡೆಯಾಗಬೇಕಾಗುತ್ತದೆ. 'ಪಾಪದ ಹಿಡಿತದಿಂದ' ಎಂದು ಹೇಳುವುದೂ ತಪ್ಪು. ಪಾಪ-ಪುಣ್ಯಗಳನ್ನು ಪ್ರಭು ಎಂದೂ 'ವಸ್ತುಸ್ಥಿತಿ'ಯಾಗಿ ಗ್ರಹಿಸಿಲ್ಲ, ಅವು 'ಭಾವಸ್ಥಿತಿ'ಗಳು ಮಾತ್ರ. ಹಾಗೆ ನೋಡಿದರೆ ಇಲ್ಲಿ ಒಡಲೊಂದೇ ವಸ್ತು, ಉಳಿದ ಎಲ್ಲವೂ ಭಾವಗಳೇ. ಅವುಗಳನ್ನು ಬೇಕಾದ ರೀತಿಗೆ ಒಗ್ಗಿಸಲು, ಬಗ್ಗಿಸಲು ಸಾಧ್ಯ. ಆದ್ದರಿಂದಲೇ ಪ್ರಭು 'ಕಾಯಗುಣವಳಿದು ಮಾಯಾಜ್ಯೋತಿ ವಾಯುವ ಕೂಡುವ ಮುನ್ನ ಭಕ್ತಿಯ ಮಾಡಬಲ್ಲಡೆ ಆತನೆ ದೇವ' ಎಂದು ಹೇಳುತ್ತಿರುವುದು. ಇಲ್ಲಿ ಅಳಿಯಬೇಕಾಗಿರುವುದು 'ಕಾಯವಲ್ಲ' ಬದಲಿಗೆ 'ಕಾಯಗುಣ.' ಈ ಗುಣಪ್ರೇರಕ ಮೂಲಗಳೇ ಪಾಪ-ಪುಣ್ಯಗಳು.

ಕಾಯಗುಣ ಕೂಡ ಭೌತಸಂಬಂಧಿ ಅಥವಾ ಸ್ಥೂಲಸಂಬಂಧಿ, ಅದು ಎಂದಿಗೂ ಸೂಕ್ಷ್ಮ ಸಂಬಂಧಿಯಾಗಲಾರದು. ಹಾಗಾಗಿ ಕರಣೇಂದ್ರಿಯಗಳು ಸ್ಥೂಲದ ನೆಲೆಯಲ್ಲಿರಬೇಕಾದ ಅಥವಾ ಪ್ರವರ್ತಿಸಬೇಕಾದ ರೀತಿಯ ಬಗ್ಗೆ ಪ್ರಭು ಇಲ್ಲಿ ಮಾತನಾಡುತ್ತಿದ್ದಾನೆ. ಪ್ರಭುವಿನಲ್ಲಿ ಸಾವು ಎಂದರೆ ಸಾಮಾನ್ಯವಾಗಿ ಮಾಯೆಯ ಹಿಡಿತದಿಂದ ಬಿಡುಗಡೆ ಎಂದರ್ಥ. ಇಲ್ಲಿ ಯಾವುದೂ ಸಾಯುವುದಿಲ್ಲ, ಬಿಡಿಸಿಕೊಳ್ಳುತ್ತದೆ, ಪರಿವರ್ತನೆಯಾಗುತ್ತದೆ. ಇದನ್ನು ಬೇರೆಯ ಮಾತುಗಳಲ್ಲಿ ಹೇಳುವುದಾದರೆ ಪರಿಣಾಮಗೊಳ್ಳುತ್ತದೆ. ಮತ್ತೊಂದು ವಚನದಲ್ಲಿ "ಪರಮ ತತ್ವದೊಳಗಿರಬಲ್ಲಡೆ ಉಣಲಾಗದು ಉಣದಿರಲಾಗದು, ಎಲ್ಲರ ಸಂಗದಲ್ಲಿರಲಾಗದು ಮತ್ತೆ ಒಬ್ಬನೇ ಇರಲಾಗದು, ತಾಯಿ ಸತ್ತ ಅರುದಿಂಗಳಿಗೆ ತಾ ಹುಟ್ಟಿದ ಮೂಲ ಗುಹೇಶ್ವರಾ" ಎಂಬುದಾಗಿ ಪ್ರಭು ಸ್ಪಷ್ಟಪಡಿಸಿದ್ದಾನೆ. ವ್ಯಕ್ತಿ ಎಷ್ಟೇ ಎತ್ತರಕ್ಕೆ ಬೆಳೆದರೂ ಒಂಟಿಯಾಗಿರುವ ಸ್ಥಿತಿಯನ್ನೂ ಅಲ್ಲಗಳೆದಿದ್ದಾನೆ. ಹಾಗೆಯೇ ಎಲ್ಲರ, ಎಲ್ಲದರ ಸಂಗದಲ್ಲಿರುವುದನ್ನೂ

ನಿರಾಕರಿಸಿದ್ದಾನೆ. ಬಹುಶಃ ಪ್ರಭು ಈ ಮೂಲಕ ಜೀವನದಲ್ಲಿ ಆಯ್ಕೆ ಮುಖ್ಯ ಎಂಬುದನ್ನು ಎತ್ತಿ ಹೇಳುತ್ತಿದ್ದಾನೆ.

ಒಬ್ಬ ಸಾಮಾನ್ಯ ಗೃಹಸ್ಥನಾಗಿ ನನಗೆ ಈ ಮಾತು ಅರ್ಥವಾಗುತ್ತದೆ. ಗೃಹಸ್ಥರು ಎಷ್ಟೇ ಜ್ಞಾನಿಗಳಾದರೂ ಎಲ್ಲರ ಜತೆ ಬೆರೆಯಲಿಕ್ಕಾಗುವುದಿಲ್ಲ. ಆದರೆ ಪ್ರಭುವಿನಂಥ ವಿರಕ್ತ ಈ ಮಾತುಗಳನ್ನಾಡುತ್ತಿರುವುದು ಸೋಜಿಗ. ಭಗವಂತನ ಸಂಸಾರ ಬಹಳ ದೊಡ್ಡದು. ಅಲ್ಲಿ ಆಯ್ಕೆ ಇರುವುದಿಲ್ಲ. ಯಾಕೆಂದರೆ, ಭೋಗದ ಮಾತು ಹಾಗಿರಲಿ, ತ್ಯಾಗ-ಯೋಗಗಳನ್ನೂ ಮೀರಿ ನಿಂತ ನೆಲೆ ಅದು. ಅದೊಂದು ನಿಸ್ಸೀಮ ಅವಕಾಶ. ಅಂಥ ಅವಕಾಶದಲ್ಲಿರುವ ವ್ಯಕ್ತಿ-ನೆಲೆಯ ಎತ್ತರಕ್ಕೆ ಎಲ್ಲರೂ ಏರಿ ಹೋಗಬೇಕಲ್ಲ. ಆ ಮಾತು ಬೇರೆ. ಇದು ಪ್ರಭುವಿಗೂ ತಿಳಿಯದ ಮಾತಲ್ಲ.

ಪರತತ್ವದಲ್ಲಿ ತದ್ಗತವಾದ ಬಳಿಕ
ಬೇರೆ ಮತ್ತೆ ಅರಿದೆಹೆನೆಂಬ ಭ್ರಾಂತೇಕೆ?
ಅರಿವು ಸಯವಾಗಿ ಮರಹು ನಷ್ಟವಾದ ಬಳಿಕ
ತಾನಾರೆಂಬ ವಿಚಾರವೇಕೆ?
ಗುಹೇಶ್ವರನ ಬೆರಸಿ ಭೇದಗೆಟ್ಟ ಬಳಿಕ
ಮತ್ತೆ ಸಂಗವ ಮಾಡಿಹೆನೆಂಬ ತವಕವೇಕಯ್ಯಾ?

ಬೆರಸಿ ಭೇದಗೆಡುವ ಮುಂಚೆ ಶರೀರವನ್ನೂ ಒಂದು ಹದಕ್ಕೆ ಸಮೆಯುವ ಆವಶ್ಯಕತೆಯೂ ಒಂದಿದೆ. ಅಲ್ಲಮ ಬಸವಾದಿಗಳು ದೇಹವನ್ನೆ ದೇವಾಲಯವಾಗಿಸುವ ಒಂದು ಪ್ರಾಚೀನ ಪರಿಕಲ್ಪನೆಗೆ ತಮ್ಮ ವಚನಗಳಲ್ಲಿ ಮರುಜೀವ ತುಂಬಿದರು. ಆ ಮೂಲಕ ದೇವರು ಮತ್ತು ದೇವಾಲಯಗಳು ಒಂದರೊಳಗೊಂದು ಐಕ್ಯವಾಗುವ ಸಾಧ್ಯತೆಯನ್ನು ಎತ್ತಿ ಹಿಡಿದರು. ಬಸವಣ್ಣನ ಈ ವಚನ ಆ ದೃಷ್ಟಿಯಿಂದ ಈವತ್ತಿಗೂ ಮಾನ್ಯವಾಗುತ್ತಿದೆ –

ಉಳ್ಳವರು ಶಿವಾಲಯವ ಮಾಡಿಹರು,
ನಾನೇನ ಮಾಡುವೆ ಬಡವನಯ್ಯಾ,
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರ ಹೊನ್ನ ಕಲಶವಯ್ಯಾ.
ಕೂಡಲಸಂಗಮದೇವ ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಇದು ನಿಸ್ಸಂದೇಹವಾಗಿ ಅನೇಕ ಆಯಾಮಗಳಿಂದ ಕೂಡಿರುವ ಒಂದು ಸುಂದರ ವಚನ. ಬಸವಣ್ಣನನ್ನು ಕುರಿತು ಆಲೋಚಿಸುವ ಯಾರನ್ನೂ ಈ ವಚನ ಸೆರೆಗೈಯ್ಯದೆ ಬಿಟ್ಟಿಲ್ಲ. ಇದರ ಸ್ವಾರಸ್ಯವನ್ನೂ, ಸಾಮಾಜಿಕ ಉಪಯುಕ್ತತೆಯನ್ನೂ ಅನೇಕ ರೀತಿಯಲ್ಲಿ ಸವಿಯಲಾಗಿದೆ, ಸಂಗ್ರಹಿಸಲಾಗಿದೆ. ಈ ಕುರಿತು ನನ್ನ ಅಭಿಪ್ರಾಯವನ್ನು ಮಂಡಿಸುವುದಕ್ಕೆ ಮುಂಚೆ ಅಷ್ಟಾಗಿ ಚರ್ಚೆಗೆ ಒಳಪಡದಿರುವ ಪ್ರಭುವಿನ ಎರಡು ವಚನಗಳನ್ನು ಇದಕ್ಕೆ ಮುಖಾಮುಖಿಯಾಗಿಸಲು

ಇಷ್ಟವಾಗುತ್ತಿದೆ. ಈ ಎರಡೂ ವಚನಗಳು ಕಾಯ ಸಿದ್ಧಾಂತವನ್ನು ಕುರಿತ ವಚನಗಳಾಗಿರುವುದರಿಂದ ಇದು ಅನಿವಾರ್ಯ ಕೂಡ. ಆ ವಚನಗಳು ಹೀಗಿವೆ –

> ಕಳಸವುಳ್ಳ ಶಿವಾಲಯವೊಂದಕ್ಕೆ, ಚೌಕದಲ್ಲಿ ಎರಡು ಕಂಬ,
> ಮೂರು ಭಾವ – ಪೂಜಕರಾರೊ? ಅನುಭಾವಿಗಳಿನ್ನಾರೊ?
> ಪೂಜಿಸುವರಿನ್ನಾರೊ?
> ಇದರ ಸ್ಥಾನದ ನೆಲಗತಿಯನಾರು ಬಲ್ಲರು ಗುಹೇಶ್ವರಾ?

> ಕಾಲೇ ಕಂಬಗಳಾದುವೆನ್ನ, ದೇಹವೇ ದೇಗುಲವಾಯಿತ್ತಯ್ಯಾ!
> ಎನ್ನ ನಾಲಗೆಯೆ ಗಂಟೆ, ಶಿರ ಸುವರ್ಣದ ಕಳಸ – ಇದೇನಯ್ಯಾ!
> ಸರವೆ ಲಿಂಗಕ್ಕೆ ಸಿಂಹಾಸನವಾಗಿದ್ದಿತ್ತಯ್ಯಾ
> ಗುಹೇಶ್ವರಾ ನಿಮ್ಮ ಪ್ರಾಣಲಿಂಗಪ್ರತಿಷ್ಠೆ,
> ಪಲ್ಲಟವಾಗದಂತಿದ್ದೆನಯ್ಯಾ.

ಈ ಎರಡರಲ್ಲಿ ಮೊದಲನೆಯದು ಸ್ವಲ್ಪ ಸಾಂಕೇತಿಕವಾಗಿ ಕಂಡರೂ ಒಟ್ಟಿನಲ್ಲಿ ದೇಹವೆ ದೇಗುಲ ಎಂಬರ್ಥವನ್ನು ಕಟ್ಟಿಕೊಡುವಲ್ಲಿ ಸೋಲುವುದಿಲ್ಲ. ಎರಡನೆಯದಂತೂ ಈ ಮೇಲಿನ ಬಸವ ವಚನಕ್ಕೆ ಮಾದರಿ ನಿಲ್ಲುವಂತಿದೆ. ಈ ಎರಡೂ ಸಂದರ್ಭಗಳನ್ನು ಮುಖಾಮುಖಿ ಯಾಗಿಸಿದಾಗ ಹೊಳೆದು ಕಾಣುವ ಒಂದು ಮುಖ್ಯ ವ್ಯತ್ಯಾಸದ ಕಡೆಗೆ ನಿಮ್ಮ ಗಮನ ಸೆಳೆಯುವ ಇರಾದೆ ನನ್ನದಾಗಿದೆ. ಬಸವ ಒಬ್ಬ ಸಮಾಜಸುಧಾರಕನಾದರೆ, ಪ್ರಭು ಒಬ್ಬ ಆತ್ಮಮುಖಿ ಸಾಧಕ ಎಂಬುದನ್ನು ಈ ಸಂದರ್ಭ ಬೆಳಕಿಗೆ ತರುತ್ತಿದೆ. ಇದರಲ್ಲಿ ಹೊಸತೇನೂ ಇಲ್ಲ ನಿಜ. ಆದರೆ, ಪ್ರಭುವಿನ ಈ ವಚನಗಳ ನೆಳಲಿನಂತಿರುವ ಬಸವ ವಚನ ಇಷ್ಟೊಂದು ವೈಭವೋಪೇತ ಮೆರವಣಿಗೆಗೆ ಪಾತ್ರವಾಗಬೇಕಾಗಿರಲಿಲ್ಲ. ಅಥವಾ ಪ್ರಭುವಿನ ಏನು ಕೇಳಿದರೂ ಕೊಡುವ ಈ ಇಂಥ ವಚನಗಳು ಈ ಪ್ರಮಾಣದಲ್ಲಿ ಅಲಕ್ಷಿತವಾಗಬೇಕಾಗಿರಲಿಲ್ಲ. ಇರಲಿ ಬಿಡಿ. 'ಆಸನಬಂಧನ'ರಿಗೆ ಇದು ಸಲ್ಲಬೇಕಾದದ್ದೆ!

ನಾನು ಈ ವಿಷಯವನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದಕ್ಕೆ ಮುಖ್ಯ ಕಾರಣ, ಪ್ರಭು ದೇಹವನ್ನು ಶಿವಾಧೀನಗೊಳಿಸುತ್ತಿರುವ ಮೋಡಿಯ ಸ್ವರೂಪವನ್ನು ತಿಳಿದುಕೊಳ್ಳುವ ಕುತೂಹಲವನ್ನು ತಡೆದುಕೊಳ್ಳಲಾಗದ್ದಕ್ಕೆ. ಬಸವ ವಚನದಲ್ಲಿ ಮುಖ್ಯ ಒತ್ತಿರುವುದು 'ಉಳ್ಳವರು ಶಿವಾಲಯವ ಮಾಡಿಹರು, ನಾನೇನು ಮಾಡುವೆ ಬಡವನಯ್ಯಾ' ಮತ್ತು 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬಲ್ಲಿ. ಅಲ್ಲಮನ ವಚನಗಳ ಗತ್ತಿನ ಒತ್ತಿರುವುದು ದೇಹಾಂಗಗಳನ್ನು ಶಿವಪೂಜೆಯ ವಿವಿಧ ಕೈಂಕರ್ಯಕ್ಕೆ ತೊಡಗಿಸುತ್ತಿರುವ ಭಂಗಿಯಲ್ಲಿ. ಅದರಲ್ಲಿಯೂ 'ಸರವೆ ಸಿಂಹಾಸನವಾಗಿದ್ದಿತ್ತಯ್ಯಾ' ಎಂಬ ಉಜ್ವಲ ತಾತ್ವಿಕ ನೆಲೆಯಲ್ಲಿ. ನಾಲಗೆಯನ್ನು ಗಂಟೆಯಾಗಿಸಿದ ಪ್ರಭು ಸರವನ್ನು ಸಿಂಹಾಸನವಾಗಿಸುತ್ತಿರುವುದರಲ್ಲಿ ಆಶ್ಚರ್ಯವಿಲ್ಲ. 'ಸರ'ದ ಅರ್ಥ ಪ್ರಭುವಿನ ವಚನವಿಸ್ತಾರದಲ್ಲಿ ಪುಂಖಾನುಪುಂಖವಾಗಿರುವುದನ್ನು ನಾವು ಮುಂದೆ

ನೋಡಬಹುದು. ಬಸವ ವಚನದ 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂಬುದು ಪ್ರಭುವಿನ ಈ ಮಾತುಗಳ ವಾಚ್ಯ ರೂಪ ಎಂಬುದನ್ನು ಯಾರೂ ಗಮನಿಸಬಹುದಾಗಿದೆ. ಅಲ್ಲಮನ ವಚನಗಳು ಮೇಲುನೋಟಕ್ಕೆ ಸಮಾಜಮುಖಿಯಲ್ಲ ಎಂಬುದು ನಿಜ. ಆದರೆ, ಆತ್ಮಶೋಧನೆಗೆ ಸಾಮಾಜಿಕ ನೆಲೆಯ ನಂಟು-ಗಂಟುಗಳಿಲ್ಲ ಎಂದು ತಿಳಿಯುವುದು ಹೇಗೆ? ಇದರ ವಿವರವಾದ ಚರ್ಚೆ ಇಲ್ಲಿ ಅನಗತ್ಯ.

ಆದರೆ ದೇಹ ಮತ್ತು ಆತ್ಮಗಳ ಒಡನಾಟ ಮತ್ತು ಮೀರುವ ಬಗೆಯನ್ನು ಕುರಿತು ನಾವು ಇನ್ನೊಂದು ವಿಷಯ ಪ್ರಸ್ತಾಪಿಸುವ ಅಗತ್ಯ ಇಲ್ಲಿದೆ. ದೇಹಕ್ಕೆ ಅದರದ್ದೇ ಆದ ಇತಿಮಿತಿಗಳಿವೆ. ಆತ್ಮಕ್ಕೆ ಇದನ್ನು ಮೀರಿ ನಿಲ್ಲುವ ಗುಣವಿದೆ. ಇದನ್ನು ಪ್ರಭುವಿನ ಇನ್ನೊಂದು ಧ್ವನಿಪೂರ್ಣ ವಚನದ ಮೂಲಕ ಸ್ಪಷ್ಟಮಾಡಿಕೊಳ್ಳಬಹುದು.

ಪೃಥ್ವಿಕುಲಮಂಟಪದ ಮೇಲೆ ಪಾದಶಿಲೆ ಬಿಗಿದು,
ತಳಕಂಭ ಕಳಸದ ಮೇಲೆ ಕೆದರುಗಲ್ಲು –
ಒಂದು ಮಠಕ್ಕೆ ಒಂಬತ್ತು ತುಂಬಿಯ ಆಳಾಪ.
ಬಗೆಯ ಬಣ್ಣದ ಮೇಲೆ ಹಿರಿದಪ್ಪ ಸಂಯೋಗ!
ಅಂಗಜನ ಪಡೆ ಕೋಟಿ, ಮುಂಡವೆದ್ದು ಕುಣಿವಲ್ಲಿ,
ರಣವುಂಡ ಭೂಮಿಯನು ಮೀರಿದನು ಗುಹೇಶ್ವರಾ.

ದೇಹವನ್ನು ದೇವಾಲಯವಾಗಿಸುವುದರ ಅನಿವಾರ್ಯತೆಯನ್ನು ಕುರಿತು ಈ ವಚನ ಪ್ರಸ್ತಾಪಿಸುತ್ತದೆ. ಮಾನವದೇಹವನ್ನು ಪ್ರಭು 'ಪೃಥ್ವಿಕುಲಮಂಟಪ'ವೆಂದು ವ್ಯಾಖ್ಯಾನಿಸುತ್ತಿದ್ದಾನೆ. ಅನುಮಾನವಿಲ್ಲ, ಸರಿಯಾದ ಕಲ್ಪನೆ. ಆದರೆ, ಈ ಮಂಟಪದ ಸುತ್ತ ಘೇರಾಯಿಸಿರುವ ಉಪಟಳ ಕೋಟಲೆಗಳನ್ನು ಯಥಾಯೋಗ್ಯ ಕಟ್ಟಿಕೊಡುವುದನ್ನು ಮರೆಯುತ್ತಿಲ್ಲ. ಹಿಂದಿನ ವಚನಗಳಲ್ಲಿ ದೇವರ ಆವಾಸಸ್ಥಾನವಾಗಲು ಯೋಗ್ಯವಿರುವ ದೇಹದ ವರ್ಣನೆಯಿತ್ತು. ಆದರೆ, ಇಲ್ಲಿ ಅದಕ್ಕೆ ವಿರುದ್ಧ ಚಿತ್ರಣವಿದೆ. ಒಂದು ಮಠಕ್ಕೆ (ದೇಹಕ್ಕೆ) ಒಂಬತ್ತು ತುಂಬಿಗಳ ಆಳಾಪವಿದೆ. ಇದು ದೇಹಕ್ಕಿರುವ ನವದ್ವಾರಗಳ ಚಿತ್ರಣವಿರಬಹುದು. ಅವುಗಳ ಒಡನಾಟದಲ್ಲಿ ಶರೀರ ಪಡುತ್ತಿರುವ ಪಾಡು ಕಡಿಮೆಯೇನಲ್ಲ. ಬಗೆಯ (ಮನಸ್ಸಿನ) ಬಣ್ಣದ ಮೇಲೆ ವೈವಿಧ್ಯಮಯ ರಂಜನೆಯಿಂದ ಕೂಡಿರುವ ಪಂಚೇಂದ್ರಿಯಗಳ ಸಂಯೋಗ(ಸಮ್ಮಿಲನ)ವಿದೆ. ಇವುಗಳ ಜತೆಗೆ ಮನ್ಮಥಶಸ್ತ್ರಸಜ್ಜಿತ ಕೋಟಿ ಸೈನ್ಯದ ದಾಳಿಯಿದೆ. ಈ ಎಲ್ಲ ಆಸೆ ಆಕಾಂಕ್ಷೆಗಳ ಮೋಹಕ್ಕೆ ಬಲಿಯಾದ ಶರೀರ ಸಹಜವಾಗಿಯೇ ವಿವೇಕ(ತಲೆ)ವನ್ನು ಕಳೆದುಕೊಂಡು ಹುಚ್ಚಾಗುತ್ತದೆ. ಪರಿಣಾಮವಾಗಿ ಮಾನವ ಬದುಕು ಬರಿಯ ಮುಂಡವೆದ್ದು ಕುಣಿದಂತೆ ಕಾಣಿಸದೆ ಬೇರೇನಾಗಲು ಸಾಧ್ಯ? ಇಂಥ ಉಪಟಳಕ್ಕೆ ಬಲಿಯಾದ ಶರೀರಕ್ಕೆ ಶಾಂತಿ ನೆಮ್ಮದಿಗಳ ಆರ್ಜನೆ ಹೇಗೆ? ನನಗೆ ತಿಳಿದಂತೆ ಬಸವನಿಗಿಂತ ಅಲ್ಲಮ ತೋರಿಸುವ ದಾರಿಯೊಂದೇ ಈಗ ಉಳಿದಿರುವುದು. ಬೇರೆಯವರು ಹೇಗಿದ್ದಾರೆ?

ಏನು ಮಾಡುತ್ತಿದ್ದಾರೆ? ಎಂದು ತಿಳಿದುಕೊಳ್ಳುವ ಚಪಲಕ್ಕಿಂತ ನಾವು ನಮ್ಮನ್ನು, ನಮ್ಮ ಎಲ್ಲವನ್ನೂ ನಾವು ಸರಿಯೆಂದು ತಿಳಿದು ದೊಡ್ಡದಕ್ಕೆ ಅಧೀನಗೊಳಿಸಿ ಅಲ್ಲಿಯೇ ನೆಲಸುವುದು ಅಥವಾ ಬೆರಸಿ ಭೇದಗೆಡುವುದು. ಅಂದರೆ, ಈ ಬಾಹ್ಯ ಉಪಟಳದ 'ರಣವುಂಡ ಭೂಮಿಯನು ಮೀರಿ' ಬೆಳೆಯುವುದು.

ಪರತತ್ವದಲ್ಲಿ ತದ್ಗತವಾದ ಬಳಿಕ ಭೇದಭಾವದ ಪ್ರಶ್ನೆಯೇ ಉಳಿಯುವುದಿಲ್ಲ. ಎಲ್ಲಕ್ಕಿಂತ ಬಹಳ ದೊಡ್ಡ ಪದವಿಯೆಂದರೆ ತನ್ನನ್ನು ತಾನೇ ಇಲ್ಲಗೈದುಕೊಳ್ಳುವ ಮಾನಸಿಕ ಹದ. 'ಅರಿವು ಸಯವಾಗಿ ಮರಹು ನಷ್ಟವಾದ ಬಳಿಕ ತಾನಾರೆಂಬ ವಿಚಾರವೇಕೆ?' ಅರಿವೇ ತಾನಾಗಿ ಪರಿಣಾಮಗೊಂಡ ಮೇಲೆ ತನ್ನ ಮುನ್ನಿನ ಸ್ಥಿತಿಯ ಬಗ್ಗೆ ಯಾವ ಚಿಂತೆಯೂ ಉಳಿದಿರುವುದಿಲ್ಲ. ಸಕಲದರ ಸಂಕೇತವಾದ ಗುಹೇಶ್ವರನ 'ಬೆರಸಿ ಭೇದಗೆಟ್ಟ ಬಳಿಕ' ಮತ್ತೆ ಸಂಗ ಮಾಡಬೇಕೆಂಬ ತವಕವೂ ಉಳಿಯುವುದಿಲ್ಲ. ಇದೇ ಅದ್ವಯ ಸ್ಥಿತಿ.

ಈ ತಿಳಿವಳಿಕೆ ಇದ್ದೂ ಪ್ರಭುವಿಗೆ ತೃಪ್ತಿಯಿಲ್ಲ. ತೆರೆದ ಮನಸ್ಸಿನಿಂದ ಅಕ್ಕಪಕ್ಕ ನೋಡುವ ಆತನಿಗೆ ಚಿತ್ರವಿಚಿತ್ರಗಳು ಎದುರಾಗುತ್ತವೆ. ತಿಳಿಯದಿದ್ದರೂ ತಿಳಿದವರಂತೆ ಮಾತಾಡುವ ಭಕ್ತವೇಷದ ಮಂದಿಯನ್ನು ಕಂಡಾಗ ಅವನಿಗೆ ಮೈ ಉರಿಯುತ್ತದೆ.

> ಬರಿಯ ನಚ್ಚಿನ ಮಚ್ಚಿನ ಭಕ್ತರು,
> ಲಿಂಗವ ಮುಟ್ಟಿಯೂ ಮುಟ್ಟದ ಒಳಲೊಟ್ಟಿಗಳು,
> ನೆರೆದು ಗಳಹುತ್ತಿಪ್ಪರು,
> ತಮತಮಗೆ ಅನುಭಾವವ ನುಡಿವರು.
> ಅನುಭಾವದ ಆಯತವನರಿಯದಿರ್ದರೆ ಹಿಂದಣ ಅನುಭಾವಿಗಳು?
> ಗುಹೇಶ್ವರಲಿಂಗದ ಸುಖವನು ಮುಟ್ಟಿದರೆ,
> ಮರಳಿ ಭವಕಲ್ಪಿತವೆಲ್ಲಿಯದೊ?

ಈ ವಚನದ ಕೆಳಗಡೆಯಿಂದ ಮೂರನೆಯ ಸಾಲನ್ನು ಗಮನಿಸಬೇಕು. ಅಪರೂಪಕ್ಕೊಮ್ಮೆ ಪ್ರಭು ತನ್ನ ಹಿರಿಯರ ಪರವಾಗಿ ಮಾತನಾಡುತ್ತಿದ್ದಾನೆ. ಹಿಂದಣ ತತ್ವಜ್ಞಾನಿಗಳ ವಿಷಯಕ್ಕೆ ಅಸಹನೆಯ ಜತೆಗೆ ಅನುಕಂಪವೂ ಇದೆ. ಅಸಹನೆ ಯಾಕೆಂದರೆ, ತಾವು ಕಂಡು ಉಂಡ ಅನುಭವ ಸತ್ಯವನ್ನು ಸಾಮಾನ್ಯೀಕರಣ ಅಥವಾ ಸಾಮಾಜೀಕರಣಗೊಳಿಸುವಲ್ಲಿ ಕೃತಕ ದಾರಿ ಹಿಡಿದದ್ದಕ್ಕೆ. ಅನುಕಂಪ ಯಾಕೆಂದರೆ, ನಿಸ್ಸೀಮ ತಪವನಾಚರಿಸಿ ಅದ್ಭುತಗಳನ್ನು ಆವಿಷ್ಕರಿಸಿದ್ದಕ್ಕೆ.

ಆಧ್ಯಾತ್ಮಿಕ ಸಂಶೋಧನೆಯ ಇತಿಹಾಸದ ದೃಷ್ಟಿಯಿಂದ ಅಲ್ಲಮಪೂರ್ವಯುಗ ವಿಶ್ವದಲ್ಲಿಯೇ ಅತ್ಯಪೂರ್ವ. ಉಪನಿಷತ್ ಋಷಿಗಳು, ಬುದ್ಧ, ಮಹಾವೀರ, ಚಾರ್ವಾಕರೇ ಮುಂತಾದ ಮಹಾ ಮಹಾ ಸಿದ್ಧಪುರುಷರು ಆಗಿಹೋಗಿದ್ದರು. ಭಾಷೆ, ಗಣಿತ, ಆಯುರ್ವೇದ, ಕಾವ್ಯ, ವ್ಯಾಕರಣ, ಮೀಮಾಂಸಾದಿ ಶಾಸ್ತ್ರ ಕ್ಷೇತ್ರಗಳು ಬಹಳ ಮಹತ್ವದ ಕೊಡುಗೆಗಳನ್ನು

ಕೊಟ್ಟಿದ್ದವು. ಈ ಎಲ್ಲದರ ರಸವುಂಡೇ ಅಲ್ಲಮ 'ಪ್ರಭುದೇವ'ನಾದದ್ದು. ಪ್ರಭುವಿಗೆ ಈ ಅರಿವು ಯಾವಾಗಲೂ ಇದ್ದೇ ಇದೆ. ಹಾಗಿಲ್ಲದಿದ್ದಲ್ಲಿ 'ಅನುಭಾವದ ಆಯತವನ್ನರಿಯದಿರ್ದರೆ ಹಿಂದಣ ಅನುಭಾವಿಗಳು' ಎಂದು ತುಂಬಿಬಂದ ಹೃದಯದಿಂದ ಪ್ರಭು ಹೀಗೆ ಉದ್ಗರಿಸಲಾಗುತ್ತಿದ್ದನೆ? ಪ್ರಭುವಿನ ಸಮಸ್ಯೆಯಿರುವುದು ವಚನದ ನಾಲ್ಕನೆಯ ಸಾಲಿನಲ್ಲಿ. 'ತಮತಮಗೆ ಅನುಭಾವವ ನುಡಿವರು' ಒಂದು ವೇಳೆ ತಮ್ಮ ತಮ್ಮಲ್ಲಿಯೇ ಆಡಿಕೊಳ್ಳುತ್ತಿರುವ ಮಾತು ನಿಜವಾದ ಅನುಭಾವವಾಗಿದ್ದರೂ ಅವನು ಇಷ್ಟು ಹಿಂಸೆಪಟ್ಟುಕೊಳ್ಳುತ್ತಿರಲಿಲ್ಲ. ಹಿಂದಿನಿಂದಲೂ ಇದೇ ತೋರಿಕೆಯೆ ನಡೆಯುತ್ತ ಬಂದಿದೆ. ಈಗಲೂ ಅದೇ ಮುಂದುವರಿದಿದೆ ಎಂದುಕೊಂಡು ಸಹಿಸುತ್ತಿದ್ದನೇನೋ. ಆದರೆ ಇಲ್ಲಿಯ ಶರಣರು –

> ಬರಿಯ ನಚ್ಚಿನ ಮಚ್ಚಿನ ಭಕ್ತರು,
> ಲಿಂಗವ ಮುಟ್ಟಿಯೂ ಮುಟ್ಟದ ಒಳಲೊಟ್ಟಿಗಳು,
> ನೆರೆದು ಗಳಹುತ್ತಿಪ್ಪರು.

ಮನುಷ್ಯನ ಇಂಥ ಗಳಿಗೆಗಳನ್ನು ನೆನಸಿಕೊಂಡರೇ ಹೆದರಿಕೆಯಾಗುತ್ತದೆ. ನಮ್ಮ ಎಲ್ಲ ಬಗೆಯ ದುಃಖ ದಾರಿದ್ರ್ಯಗಳಿಗೆ ಮೂಲವಾಗಿರುವ ಇಂಥ ಬೂಟಾಟಿಕೆಯ ಪ್ರವೃತ್ತಿಯನ್ನು ವಿರೋಧಿಸುವುದಕ್ಕಾಗಿಯೇ ತನ್ನ ಅನೇಕ ವಚನಗಳನ್ನು ಪ್ರಭು ಮೀಸಲಿಟ್ಟಿದ್ದಾನೆ. ಇದು ಬರಿಯ ಆತ್ಮಘಾತುಕ ವಿಷಯವಲ್ಲ, ಲೋಕವನ್ನೂ ದಾರಿತಪ್ಪಿಸುವ ವಿಷಯ. ಪ್ರಭುವಿನಲ್ಲಿ ಅದ್ವೈತವೆಂದರೆ ಒಳಹೊರಗುಗಳನ್ನು ಒಂದಾಗಿಸುವುದು. ನಾನು, ನೀನು ಎಲ್ಲ ಬ್ರಹ್ಮ ಎಂಬ ತಿಳಿವಳಿಕೆಯ ಸತ್ಯದರ್ಶನವಲ್ಲ. 'ತಿಳಿವಳಿಕೆ' 'ನಡವಳಿಕೆ'ಗಳಾಗಿ ನೇರ್ಪುಗೊಳ್ಳಬೇಕು. ನಡೆನುಡಿಗಳು ಹತ್ತು ಜನ ಕೂಡಿ ನಿರ್ಣಯ ಮಾಡಿ ಮೈಮೇಲೆ ಹೇರಿಕೊಂಡಂಥವಲ್ಲ. ಅದೊಂದು ಪರಿಣಾಮ ಕ್ರಿಯೆ. ತೋರಿಕೆಯ, ಹೇರಿಕೆಯ, ಹೇಳಿಕೆಯ, ಕೇಳಿಕೆಯ – ಈ ಯಾವುದೂ ಇದಲ್ಲ. ಬೀಜ ಮೊಳೆಯುವಂತೆ, ಮೊಳೆ ಬೆಳೆಯುವಂತೆ, ಬೆಳೆ ಹೂವಾಗಿ, ಮಿಡಿಯಾಗಿ, ಕಾಯಾಗಿ, ಹಣ್ಣಾಗಿ ಫಲಿಸುವ ಈ ವೃತ್ತ ನೈಸರ್ಗಿಕ ಪ್ರವೃತ್ತಿ ಅರ್ಥಾತ್ ಶೂನ್ಯ. ಎಲ್ಲಿ ಮೊದಲಾಯಿತೊ ಅಲ್ಲೇ ಕೊನೆಯಾಗುವುದು. ಆದರೆ ಈ ಮೊದಲು ಕೊನೆಗಳ ನಡುವೆ ಒಂದು ವಿರಾಟ್ ಚಲನೆಯಿದೆ. ಇದು ವಸ್ತುಗತವಾದುದು. ತನ್ನಲ್ಲಿಯೇ ಇರುವ ಆದರ ದರ್ಶನವೇ ನಿಜದರ್ಶನ. ಈ ದರ್ಶನವೇ ಪರಿಣಾಮ. ಪರಿಣಾಮಗೊಂಡಾನಂತರ ಹಿಂದಿನ ಸ್ಥಿತಿಯ ಬಗ್ಗೆ ಭಾವಗಳ ತಾಕಲಾಟವಿರುವುದಿಲ್ಲ. ನೆನಪು ಮಾತುಗಳೆಲ್ಲವೂ ಸೀಮಿತ ನೆಲೆಯಲ್ಲಿ ನಿಲ್ಲುತ್ತವೆ. ಅಲ್ಲಲ್ಲಿಯ ಕ್ರಿಯೆ ಅಲ್ಲಲ್ಲಿಗೇ ಸೀಮಿತ.

ಈ 'ಅನುಭಾವದ ಆಯತವನರಿಯದಿರ್ದರೆ ನಮ್ಮ ಹಿಂದಣ ಅನುಭಾವಿಗಳು' ಎಂದು ಹೇಳುವಾಗ ಪ್ರಭುವಿಗೆ ಈ ಬರಿಯ ನಚ್ಚಿನ ಮಚ್ಚಿನ ಭಕ್ತರ ಒಳಲೊಟ್ಟಿ ಜೀವನಕ್ರಮದ ಬಗ್ಗೆ ಮರುಕವಿದೆ. ಯಾಕೆಂದರೆ, ಇದು ಮಾಯೆಯ ಆವರಣವನ್ನೂ ಮೀರಿದ ಪ್ರಪಾತ. ಆಡಂಬರವನ್ನೂ ಮೀರಿದ ಘೋರ.

□

# ಸಂಕ್ರಾಂತಿ: ಸಂಸ್ಕೃತಿ ಮತ್ತು ಕಾವ್ಯ

ಡಾ. ರಾಗೌ

**1**

ನಮ್ಮ ಸಂಸ್ಕೃತಿಯನ್ನು ರೂಪಿಸುವಲ್ಲಿ ಹಬ್ಬಗಳೂ ಅಧಿಕ ಪಾತ್ರವನ್ನು ವಹಿಸುತ್ತಿವೆ. ಇಂತಹ ಅನೇಕ ಹಬ್ಬಗಳನ್ನು ಜನರು ಸಡಗರ ಸಂಭ್ರಮಗಳಿಂದ ಆಚರಿಸುತ್ತ ಬಂದಿದ್ದಾರೆ. ಸ್ಥಳೀಯವೋ ರಾಜ್ಯ ರಾಷ್ಟ್ರಮಟ್ಟದವೋ ಅವು ಯಾವುವೇ ಇರಲಿ ಜನ ಉತ್ಸಾಹದ ಬಣ್ಣ ಬಳಿಯುತ್ತಾರೆ; ಮನ ಮುದಗೊಳ್ಳುವಂತೆ ಮಾಡುತ್ತಾರೆ. ಈ ಹಬ್ಬಗಳ ಆಚರಣೆಗೆ ಒಂದು ಕಡೆ ಧಾರ್ಮಿಕ ಶ್ರದ್ಧೆಯೂ, ಮತ್ತೊಂದು ಕಡೆ ಮನೋರಂಜನೆಯೂ ಕಾರಣವಾಗಿರುವಂತೆ ತೋರುವುದು. ಇವುಗಳಿಂದ ಜನ ಸಂತೋಷ, ನೆಮ್ಮದಿ, ಆತ್ಮತೃಪ್ತಿಗಳನ್ನು ಪಡೆಯುವಲ್ಲಿ ಸಫಲರಾಗುತ್ತಾರೆ. ಬದುಕಿನಲ್ಲಿ ಏಕತಾನತೆಯೊಂದು ಬೇಸರದ ವಿಷಯ, ಇದನ್ನು ಮುರಿದು ವೈವಿಧ್ಯತೆ ತರುವ ಸಲುವಾಗಿ ಹಬ್ಬಗಳ ಪ್ರವೇಶ. ಪ್ರತಿವರ್ಷ ಪಾರಂಪರಿಕವಾಗಿ ಆಚರಿಸುತ್ತ ಬಂದಿರುವ ಹಬ್ಬಗಳಲ್ಲಿ ಸಂಕ್ರಾಂತಿಯೂ ಒಂದು. ಬೇರಾವ ಹಬ್ಬಕ್ಕೂ ಇರದ ಒಂದು ವೈಶಿಷ್ಟ್ಯ ಸಂಕ್ರಾಂತಿಗಿದೆ. ಪ್ರಕೃತಿಯಲ್ಲಿ ನಡೆಯುವ ವಿದ್ಯಮಾನವೊಂದನ್ನು ಹಬ್ಬವಾಗಿ ಆಚರಿಸುತ್ತಿರುವುದು ಇದೊಂದೇ. ಅದರಲ್ಲೂ ಹೊಸ ವರ್ಷದ ಆರಂಭದ ದಿನಗಳಲ್ಲಿ ಇದು ಬಂದಿರುವುದು ಒಂದು ವಿಶೇಷ.

'ಸಂಕ್ರಾಂತಿ' ಎಂಬುದಕ್ಕೆ ಸಂಧಿಕಾಲ, ಸೂರ್ಯಪಥ ಬದಲಾವಣೆ ಎಂದೆಲ್ಲ ಅರ್ಥಗಳಿವೆ. ಇದನ್ನು ಮಕರ ಸಂಕ್ರಾಂತಿ, ಮಕರ ಸಂಕ್ರಮಣ, ಉತ್ತರಾಯಣ ಪುಣ್ಯಕಾಲ, ಪೊಂಗಲ್ ಎಂಬೆಲ್ಲ ಹೆಸರುಗಳಿಂದ ಕರೆಯುತ್ತೇವೆ. ಸೂರ್ಯನು ಮಕರರಾಶಿಯನ್ನು ಪ್ರವೇಶಿಸುವ ದಿನ ಮತ್ತು ಅಂದು ಆಚರಿಸುವ ಹಬ್ಬವೇ ಇದು. ಪ್ರಾಯಶಃ ಜನವರಿ 14ನೆಯ ದಿನಾಂಕದಂದು ಬರುವ ಹಬ್ಬ. ಆದರೆ ಈ ದಿವಸ ಕೆಲವೊಮ್ಮೆ ವ್ಯತ್ಯಾಸವಾಗಬಹುದು.

ಸೂರ್ಯನ ಒಂದು ಪರಿಭ್ರಮಣೆಗೆ ಎರಡು ಅಯನಗಳಿರುತ್ತವೆ. ಡಿಸೆಂಬರ್ 22ರಿಂದ ಜೂನ್ 21ರವರೆಗಿನ ಅವಧಿಯನ್ನು ಉತ್ತರಾಯಣವೆನ್ನುತ್ತೇವೆ; ಸೂರ್ಯ ಇಲ್ಲಿ ಉತ್ತರಾಭಿಮುಖವಾಗಿ ಚಲಿಸುತ್ತಾನೆ. ಜೂನ್ 21ರಿಂದ ಡಿಸೆಂಬರ್ 22ರವರೆಗಿನ ಅವಧಿಯನ್ನು ದಕ್ಷಿಣಾಯನವೆನ್ನುತ್ತೇವೆ; ಸೂರ್ಯ ಇಲ್ಲಿ ದಕ್ಷಿಣಾಭಿಮುಖಿಯಾಗಿ ಚಲಿಸುತ್ತಾನೆ. ಸೂರ್ಯನ ಸಂಕ್ರಾಂತಿ ಬಿಂದುಗಳು ಮಂದಗತಿಯಿಂದ ಸರಿಯುತ್ತಿವೆ

ಎಂಬುದಾಗಿ ಹೇಳುತ್ತಾರೆ.

ಭೂಮಿಯನ್ನು ಸುತ್ತುವಂತೆ ಕಾಣುವ ಸೂರ್ಯ ಮಕರ ಸಂಕ್ರಾಂತಿ ಬಿಂದು ತಲುಪಿದಾಗ ಉತ್ತರಾಯಣ ಆರಂಭವಾಗುತ್ತದೆ. ಮಕರ, ಕುಂಭ, ಮೀನ, ಮೇಷ, ವೃಷಭ ಮತ್ತು ಮಿಥುನ – ಈ ಆರು ರಾಶಿಗಳಲ್ಲಿ ಸೂರ್ಯ ಉತ್ತರದ ಕಡೆಗೆ ಚಲಿಸುವುದೇ 'ಉತ್ತರಾಯಣ'. ಇದು ಶಿಶಿರ, ವಸಂತ, ಗ್ರೀಷ್ಮ – ಈ ಮೂರು ಋತುಗಳ ಕಾಲವೇ ಆಗಿದೆ. ಪುಷ್ಯಮಾಸದಲ್ಲಿ ಮಕರ ಸಂಕ್ರಮಣದ ದಿವಸ ಉತ್ತರಾಯಣ ಆರಂಭ ಎಂದು ನಂಬಿಕೆ.

ಉತ್ತರಾಯಣ ಪುಣ್ಯಕಾಲವನ್ನು ಒಂದು ಧಾರ್ಮಿಕ ವಿಧಿಯನ್ನಾಗಿಯೂ ಆಚರಿಸಲಾಗುತ್ತದೆ. ನದಿಗಳಲ್ಲಿ ಅಂದು ಪವಿತ್ರ ಸ್ನಾನ ಮಾಡುವುದು ಇದಕ್ಕೆ ಉದಾಹರಣೆ. ಈ ಕಾಲದಲ್ಲಿ ಪಿತೃತರ್ಪಣ, ದಾನಾದಿಗಳನ್ನು ಮಾಡಿದರೆ ಪುಣ್ಯ ಫಲ ದೊರೆಯುತ್ತದೆ ಎಂಬುದು ಸಾಮಾನ್ಯ ನಂಬಿಕೆ. ಸೂರ್ಯ ಮಕರ ರಾಶಿಯಲ್ಲಿರುವಾಗ ಮಾಘಮಾಸದಲ್ಲಿ ಸೂರ್ಯೋದಯ ಕಾಲಕ್ಕೆ ಸ್ನಾನ ಮಾಡುವುದರಿಂದ ಪಾಪಗಳು ಪರಿಹಾರವಾಗುತ್ತವೆಯೆಂದು ಹೇಳುತ್ತಾರೆ. ಈ ದಿನದಲ್ಲಿ ಎಳ್ಳು ದಾನಕ್ಕೆ ವಿಶೇಷ ಪ್ರಾಶಸ್ತ್ಯ. ಈ ಕಾಲದಲ್ಲಿ ಮಕ್ಕಳ ಮೇಲೆ ಎಳ್ಳು, ಎಲಚಿಹಣ್ಣು, ನಾಣ್ಯಗಳನ್ನು ಸುರಿಯುವುದರಿಂದ ಅವರ ದೋಷನಿವಾರಣೆ ಅಥವಾ ಪೀಡಾ ಪರಿಹಾರವಾಗುತ್ತದೆ ಎಂದು ನಂಬಲಾಗುತ್ತದೆ. ಇದು ಶುಭಕಾರ್ಯಗಳಿಗೆ ಒಳ್ಳೆಯದೆಂಬ ನಂಬಿಕೆ ಮಹಾಭಾರತದ ಕಾಲದಿಂದಲೂ ನಡೆದು ಬಂದಿದೆ. ಇಚ್ಛಾಮರಣಿಯಾದ ಭೀಷ್ಮ ಪ್ರಾಣೋತ್ಕ್ರಮಣಕ್ಕಾಗಿ ಉತ್ತರಾಯಣ ಕಾಲವನ್ನೇ ಕಾಯುತ್ತಿದ್ದನೆಂಬ ಸಂಗತಿ ಇದಕ್ಕೆ ಸ್ಪಷ್ಟ ಉದಾಹರಣೆ.

ಸೂರ್ಯನು ಮಕರರಾಶಿಯನ್ನು ಪ್ರವೇಶಿಸುವ ದಿನದಂದು ಸೂರ್ಯನಿಗೆ ಪೊಂಗಲಿನ ನೈವೇದ್ಯವಿಟ್ಟು ಪೂಜಿಸುವ ಹಬ್ಬವಾಗಿಯೂ ಸಂಕ್ರಾಂತಿಯನ್ನು ಆಚರಿಸುತ್ತಾರೆ. ಇದರಿಂದಲೇ ಇದಕ್ಕೆ 'ಪೊಂಗಲ್' ಹಬ್ಬವೆಂಬ ಹೆಸರು ಬಂದಿರುವುದು. ಅಕ್ಕಿ, ಹೆಸರುಬೇಳೆ, ಬೆಲ್ಲ, ತುಪ್ಪ ಮೊದಲಾದವುಗಳಿಂದ ತಯಾರಿಸುವ ಖಾದ್ಯವೇ 'ಪೊಂಗಲ್'; ಇದರಲ್ಲಿ ಖಾರಾಪೊಂಗಲ್ ಕೂಡ ಇದೆ. ಈ 'ಪೊಂಗಲ'ನ್ನು 'ಹುಗ್ಗಿ' ಎಂದೂ ಕರೆಯುತ್ತಾರೆ. ಆದ ಕಾರಣ ಇದು 'ಪೊಂಗಲ್' ಹಬ್ಬವಾಗಿರುವಂತೆಯೇ 'ಹುಗ್ಗಿ' ಹಬ್ಬವೂ ಆಗಿದೆ. ಹೀಗೆ ಸಂಕ್ರಾಂತಿಗೆ ಹಲವು ಹೆಸರುಗಳಿರುವ ಹಾಗೆ ಹಲವು ಮುಖಗಳೂ ಇರುವುದನ್ನು ಕಾಣಬಹುದು.

## 2

ಸಂಕ್ರಾಂತಿ ಜನಪದರ ಹಬ್ಬವೂ ಹೌದು, ಶಿಷ್ಟರ ಹಬ್ಬವೂ ಹೌದು. ಇದಕ್ಕೆ ಆಚರಣೆಗಳಲ್ಲಿ ವ್ಯತ್ಯಾಸವಿರುವುದು ಕಾರಣ. ವ್ಯವಸಾಯಪ್ರಧಾನವಾದ ನಮ್ಮ ಸಮಾಜದಲ್ಲಿ ಬೇಸಾಯದ ಒಂದು ವಾರ್ಷಿಕ ತಿರುವಾಗಿ ಬರುವ ಹಬ್ಬವಿದು. ಬೆಳೆಯೆಲ್ಲ ಹೆಚ್ಚುಕಡಿಮೆ ಕಟಾವಾಗಿ ಸುಗ್ಗಿಗೆ ಕಾಲಿಡುವ ಸಂದರ್ಭವಾಗಿ ಈ ಹಬ್ಬವಿದೆ. ಈ ಹಿನ್ನೆಲೆಯಲ್ಲಿ ಇದು

ಗಂಡಸರ ಹಬ್ಬವೆಂದೂ, ದನಗಳ ಹಬ್ಬವೆಂದೂ ಕರೆಯಲಾಗುವುದು. ಸಂಕ್ರಾಂತಿ ಹಬ್ಬದಲ್ಲಿ ಗಂಡಸರದೇ ಸಡಗರ. "ಗಂಡಸರಿಗ್ಯಾಕೆ ಗೌರಿ ದುಃಖ, ಹೆಂಗಸರಿಗ್ಯಾಕೆ ಸಂಕ್ರಾಂತಿ ದುಃಖ" ಎಂಬ ಗಾದೆಯೇ ಇದನ್ನು ಸ್ಪಷ್ಟಪಡಿಸುವುದು. ಹೆಂಗಸರಿಗೂ ಗೌರಿಹಬ್ಬಕ್ಕೂ ಯಾವ ಸಂಬಂಧವಿದೆಯೋ ಅದೇ ಬಗೆಯ ಸಂಬಂಧ ಗಂಡಸರಿಗೂ ಸಂಕ್ರಾಂತಿ ಹಬ್ಬಕ್ಕೂ ಇದೆ ಎಂಬುದು ಇದರ ಅರ್ಥ. ವ್ಯವಸಾಯಪ್ರಾಧಾನ್ಯ ಹಿನ್ನೆಲೆಯಲ್ಲಿ ಪುರುಷರಿಗೆ ಏನು ಪಾತ್ರವಿದೆಯೋ, ಅದೇ ರೀತಿ ದನಗಳ ಪಾತ್ರವೂ ಇದೆ. ದೀಪಾವಳಿಯವರೆಗೆ ಬೇಸಾಯಕ್ಕೆ ದನಗಳನ್ನು ಎಡೆಬಿಡದೆ ದುಡಿಸಿಕೊಂಡ ರೈತರು, ದೀಪಾವಳಿಯಿಂದ ದನಗಳನ್ನು ಮೇಯಿಸಿ ತಯಾರು ಮಾಡಲು ತೊಡಗುವರು. ಇದು ಸಂಕ್ರಾಂತಿಯಂದು ದನಗಳನ್ನು ಮೆರೆಸಿ, ಗೌರವಿಸಿ, ಪೂಜಿಸುವುದರಲ್ಲಿ ಮುಕ್ತಾಯಗೊಳ್ಳುವುದು. ಈ ಸಂದರ್ಭದಲ್ಲಿ ದನಗಳನ್ನು ಕಿಚ್ಚು ಹಾಯಿಸುವುದರಿಂದ ಈ ಹಬ್ಬವನ್ನು 'ಕಿಚ್ಚು ಹಾಯಿಸುವ' ಹಬ್ಬವೆಂದೂ ಕರೆಯುವುದು ವಾಡಿಕೆಯಲ್ಲಿದೆ.

ಸಂಕ್ರಾಂತಿಯ ಮಹತ್ವವನ್ನು ಕುರಿತು ಗಾದೆಗಳಲ್ಲಿ ಹಲವಾರು ಅಭಿಪ್ರಾಯಗಳು ವ್ಯಕ್ತವಾಗಿವೆ. ವಾತಾವರಣ ಬದಲಾವಣೆಗೆ ಸಂಬಂಧಿಸಿದ್ದು ಇಂಥವುಗಳಲ್ಲಿ ಒಂದು. ಚಳಿಗಾಲ ಬೇಸಿಗೆಯ ಕಾಲವಾಗಿ ಪರಿವರ್ತಿತವಾಗುವ ಒಂದು ಬಿಂದುವಿನಲ್ಲಿ ಈ ಹಬ್ಬ ಬರುತ್ತದೆ. "ಸಂಕ್ರಾಂತಿಗೆ ಶಂಖದ ತೋರ ಚಳಿ ಹೋಗಿ ಸಾಸಿವೆಯ ತೋರ ಬಿಸಿಲು" ಎಂಬ ಗಾದೆಯನ್ನೆ ಗಮನಿಸಿ. ಇದರಲ್ಲಿ ಚಳಿ ಎಷ್ಟು ಕಡಿಮೆಯಾಯಿತು, ಬಿಸಿಲು ಎಷ್ಟು ಹೆಚ್ಚಾಯಿತು ಎಂಬುದರ ವಿವರಣೆಯಿದೆ. ಬದಲಾವಣೆಯನ್ನು ಸೂಚಿಸುವ ಸಲುವಾಗಿ ಈ ಗಾದೆ ಬಂದಿರುವುದು ಸ್ಪಷ್ಟ.

ಪ್ರಕೃತಿಯಲ್ಲಾಗುವ ಈ ವ್ಯತ್ಯಾಸದ ಅನುಭವವನ್ನು ಮುಷ್ಟಿಗ್ರಾಹ್ಯವಾಗಿ ಹಿಡಿದುಕೊಡಲು 'ಶಂಕದ ತೋರ', 'ಸಾಸಿವೆಯ ತೋರ' ಮಾತುಗಳು ಬಂದಿರುವಂತೆ ತೋರುತ್ತವೆ. ಇಂಥದೇ ಇನ್ನೊಂದು ಗಾದೆ "ಸಂಕ್ರಾಂತಿ ಹಬ್ಬಕ್ಕೆ ಸಂತುಷ್ಟಿ ಊಟ" ಎಂಬುದು. ಹೊಸ ಬೆಳೆಯ ಮತ್ತು ಸುಗ್ಗಿ ಆರಂಭದ ಹಿನ್ನೆಲೆಯಲ್ಲಿ ಈ ಗಾದೆ ಇದೆ. ಸಂಕ್ರಾಂತಿಗೆ ಸಾಲ ತೆಗೆದುಕೊಂಡವನ ಪರಿಸ್ಥಿತಿಯನ್ನು ಹೇಳಲೆಂದೇ 'ಸಂಕ್ರಾಂತಿ ಕಡ ಜೀವ ಹೋದ್ರೂ ಬಿಡ' ಎಂಬ ಗಾದೆ ಹುಟ್ಟಿಕೊಂಡಿರುವಂತೆ ಕಾಣುತ್ತದೆ. ಹೀಗೆ ಇನ್ನೂ ಅನೇಕ ಗಾದೆಗಳು ಸಂಕ್ರಾಂತಿ ಹಬ್ಬದ ಮಹಿಮೆಯನ್ನೂ ಪಾತ್ರವನ್ನೂ ಅನಾವರಣಮಾಡುತ್ತವೆ.

ಜನರಿಗೆ ಹಬ್ಬದ ಆಚರಣೆ ಮುಖ್ಯವಾದುದು. ಭಾರತೀಯರ ಪ್ರಕಾರ ವರ್ಷದ ಮೊದಲನೆಯ ಹಬ್ಬ ಯುಗಾದಿಯಾದರೆ, ಕಡೆಯ ಹಬ್ಬ ಸಂಕ್ರಾಂತಿಯಾಗುತ್ತದೆ. ಆದರೆ ಕ್ರಿಶ್ಚಿಯನ್ ಕ್ಯಾಲೆಂಡರಿನ ಪ್ರಕಾರ ಸಂಕ್ರಾಂತಿ ವರ್ಷದ ಮೊದಲ ಹಬ್ಬವಾಗುವುದು. ಯುಗಾದಿಯಲ್ಲಿ ಬೇಸಾಯದ ಆರಂಭವನ್ನು ಕಂಡರೆ, ಸಂಕ್ರಾಂತಿಯಲ್ಲಿ ಬೇಸಾಯದ ಫಲವಾಗಿ

ಬಂದ ಬೆಳೆಯ ಒಕ್ಕಣೆಯ ಆರಂಭವನ್ನು ಕಾಣುತ್ತೇವೆ. ಹಾಗೆ ನೋಡಿದರೆ ರೈತರಿಗೆ ಸುಗ್ಗಿ ಹಬ್ಬವೂ ಇದಾಗುತ್ತದೆ. ವಾಸ್ತವವಾಗಿ ಈ ಹಬ್ಬ ಸೂರ್ಯ ಮಕರರಾಶಿಗೆ ಪ್ರವೇಶ ಮಾಡುವ ಸಂಕ್ರಾಂತಿಯ ಹಿಂದಿನ ದಿನದಿಂದಲೇ ಆರಂಭವಾಗುತ್ತದೆ. ಕೆಲವು ಕಡೆ ಈ ದಿನವನ್ನು 'ಭೋಗಿ' ದಿನವೆಂದು ಕರೆಯುತ್ತಾರೆ. ಇಂದು ಸುಮಂಗಲೆಯರು ದೈನಂದಿನ ಕೆಲವು ವಸ್ತುಗಳನ್ನಿರಿಸಿ ಬಾಗಿನಗಳನ್ನು ಕೊಡುವರು. ಧನುರ್ಮಾಸದ ಕಡೆಯ ದಿನವಿದು. ಈ ದಿನ ದೇವರಿಗೆ ನೈವೇದ್ಯವಾಗಿ ಹುಗ್ಗಿ-ಗೊಜ್ಜು, ಸಜ್ಜೆಯ ರೊಟ್ಟಿ-ಬೆಣ್ಣೆ, ವಡೆ-ಪಾಯಸಗಳನ್ನು ಮಾಡುವುದುಂಟು. ಇನ್ನು ಕೆಲವು ಕಡೆ, ಅದರಲ್ಲೂ ಮುಖ್ಯವಾಗಿ ಹಳ್ಳಿಗಳಲ್ಲಿ ಈ ದಿನವನ್ನು 'ಪತ್ರೆ ಮುಡಿಸುವ ದಿನ' ಎಂದು ಕರೆಯುವರು.

ಈ ದಿನದಂದು ರೈತರು ಒಕ್ಕಣೆಯಾದ ಅಥವಾ ಒಕ್ಕಣೆಯಾಗದ ಮೆದೆಗಳಿಗೆ ಪತ್ರೆ ಮುಡಿಸುವ ಕಾರ್ಯಕ್ರಮ ಕೈಗೊಳ್ಳುವರು. ಇದರಲ್ಲಿ ಮಾವಿನ ಸೊಪ್ಪು, ಉತ್ತರಾಣಿ ಮತ್ತು ಲಕ್ಕಿ ಪತ್ರೆ ಅಥವಾ ಬಿಲ್ವಪತ್ರೆಗಳಿರುತ್ತವೆ. ಇವನ್ನು ಪ್ರತಿ ಮೆದೆಗೂ ಮೂರು ಕಡೆ ಮುಡಿಸುತ್ತಾರೆ. ಇದರ ಜೊತೆಗೆ ಇದೇ ಸಂದರ್ಭದಲ್ಲಿ ಮೇಟಿಪೂಜೆಯನ್ನೂ ಕೈಗೊಳ್ಳುವರು. ಮೇಟಿಗೆ ರಾಗಿ ತೆನೆಯನ್ನು ಸಿಕ್ಕಿಸಿ, ಅವರೆ ಹೂವು ಮತ್ತು ಪತ್ರೆಗಳನ್ನು ಮುಡಿಸಿ ಪೂಜೆ ಮಾಡಲಾಗುವುದು. ಇಷ್ಟು ಮಾಡಿದ ಮೇಲೆ ಪತ್ರೆಗಳನ್ನು ಮನೆಗೂ ತಂದು ಮೂರು ಕಡೆಗಳಲ್ಲಿ ಮುಡಿಸುವುದೂ ಇದೆ. ಅದರಲ್ಲಿಯೂ ಬತ್ತದ ಕಣಜಗಳಿಗೆ, ಪೆಟ್ಟಿಗೆಗಳಿಗೆ ಪತ್ರೆ ಮುಡಿಸುವುದು ಕೆಲವು ಕಡೆ ಮುಖ್ಯವಾದುದು. ಹೀಗೆ ಮಾಡುವುದರಿಂದ ದವಸಧಾನ್ಯ ಇಮ್ಮಡಿಯಾಗುತ್ತದೆ ಎಂಬ ನಂಬಿಕೆ ಇರುವುದನ್ನು ಗಮನಿಸಬೇಕು.

ಸಂಕ್ರಾಂತಿಯ ಹಬ್ಬ ನಮ್ಮ ಹಳ್ಳಿಯ ಜನರಿಗೆ ಎಲ್ಲಿಲ್ಲದ ಸಂಭ್ರಮವನ್ನು ತರುವುದು. ಅಂದು ಬೆಳಗ್ಗೆ ಎದ್ದು ಎಲ್ಲರೂ ಸ್ನಾನಮಾಡಿ ಹೊಸ ಬಟ್ಟೆ ಧರಿಸುವರು. ಹಳ್ಳಿಯವರು ಮುಖ್ಯವಾಗಿ ಹೊಸ ಬಟ್ಟೆ ಧರಿಸುವುದು ಹಬ್ಬ ಹರಿದಿನಗಳಲ್ಲೇ. ಕೆಲವು ಕಡೆ ಬೆಳಗ್ಗೆಯಿಂದ ಸಾಯಂಕಾಲದವರೆಗೆ 'ಬತ್ತದ ದಾನ' ಕಾರ್ಯಕ್ರಮ ನಡೆಯುತ್ತದೆ. ವರ್ತನೆಯವರಿಗೆ, ಹಡದೆಯವರಿಗೆ ಮತ್ತು ಇತರರಿಗೆ ಬೇರೆ ಬೇರೆ ಪ್ರಮಾಣದಲ್ಲಿ ಬತ್ತವನ್ನು ದಾನ ಮಾಡಲಾಗುವುದು. ಹೀಗೆ ಮಾಡುವಾಗ ಬತ್ತಕ್ಕೆ ಹಸಿ ಅವರೆಕಾಯಿ, ಕುಂಬಳಕಾಯಿ ಚೂರು, ಗೆಣಸಿನ ಚೂರುಗಳನ್ನು ಬೆರೆಸುತ್ತಾರೆ. ಈ ಹಬ್ಬದ ಹೊತ್ತಿಗೆ ಹೊಸ ಬತ್ತ ಕೂಡ ಬಂದಿರುತ್ತದೆ. ಹೊಸ ಬತ್ತವನ್ನು ಕೊಳಗದಲ್ಲಿ ತುಂಬಿಟ್ಟು ಬತ್ತದ ಕಣಜ ಹೆಚ್ಚಲಿ ಎಂಬುದಾಗಿ ಪೂಜೆ ಮಾಡುವುದುಂಟು. ಹೊಸ ಬೆಳೆ ಬಂದ ಸಂಕೇತವಾಗಿ ಇಂದು ಹೊಸ ಬತ್ತದ ಅಕ್ಕಿಯ ಅನ್ನವನ್ನು ಮಾಡಿ ನೈವೇದ್ಯಕ್ಕೆ ಇಡುವ ಪದ್ಧತಿಯೂ ಚಾಲ್ತಿಯಲ್ಲಿದೆ. ಇಡೀ ದಿನ ರೈತರಿಗೆ ಉತ್ಸವದ ಹಾಗೂ ಉತ್ಸಾಹದ ದಿನವಾಗಿ ಮಾರ್ಪಡುವುದು ಸಹಜವಾಗಿದೆ.

## 3

ಈ ಹಬ್ಬದ ದಿನ ದನಗಳನ್ನು ಮೀಯಿಸಿ ಮನೆಗೆ ಹೊಡೆದುಕೊಂಡು ಬಂದಮೇಲೆ, ಅವುಗಳನ್ನು ಬಗೆಬಗೆಯಲ್ಲಿ ಶೃಂಗರಿಸಲು ಸಿದ್ಧತೆ ಮಾಡಲಾಗುವುದು. ದನಗಳ ಕೊಂಬುಗಳನ್ನು ಹೆರೆಸಿ ನಯಗೊಳಿಸಿದ ಮೇಲೆ, ಅವಕ್ಕೆ ನೀಲಿ ಅಥವಾ ಗೋಪಿ ಬಣ್ಣವನ್ನು ಬಳಿಯಲಾಗುವುದು. ಗುನ್ನಂಪಟ್ಟೆಗಳನ್ನು ಹದವಾಗಿ ಕತ್ತರಿಸಿ ಕೊಂಬುಗಳಿಗೆ ಕಲಾತ್ಮಕವಾಗಿ ಅಂಟಿಸಲಾಗುವುದು. ಕೊಂಬಿನ ತುದಿಗೆ ನಿಂಬೆಹಣ್ಣನ್ನು ಸಿಕ್ಕಿಸಲಾಗುವುದು. ಕತ್ತಿನ ಕರಿಹುರಿಗೆ ಶಂಖ, ಗೆಜ್ಜೆಗಳನ್ನು ಅಳವಡಿಸಲಾಗುವುದು. ಹೊಸದಾಗಿ ತಂದ ಹಗ್ಗಕ್ಕೆ ಗಗ್ಗರಗಳನ್ನು ಜೋಡಿಸಲಾಗುವುದು. ಮೇಯಿಸಿದ ಹೋರಿಗಳಿದ್ದರೆ ಅವಕ್ಕೆ ಗೌಸುಗಳನ್ನು ಹೊದಿಸಿ, ಕೊರಳಿಗೆ ಹೂವಿನ ಹಾರಗಳನ್ನು ಹಾಕುತ್ತಿದ್ದುದುಂಟು. ಕೆಲವೊಮ್ಮೆ ಮೆರವಣಿಗೆ ಮಾಡುತ್ತಿದ್ದುದೂ ಇದೆ. ಕಿಚ್ಚುಹಾಯುವಲ್ಲಿ ಮೊದಲನೆಯವರಾಗಲು ಅಥವಾ ಎರಡನೆಯವರಾಗಲು ಬಯಸಿದರೆ ಅಂತಹ ಸಂದರ್ಭಗಳಲ್ಲಿ ಹಿಂದೆ ಸ್ಪರ್ಧೆಗಳು ನಡೆಯುತ್ತಿದ್ದುವು.

ಇಷ್ಟೆಲ್ಲ ಆಗುವ ಹೊತ್ತಿಗೆ ಸಂಜೆ ಸಮೀಪಿಸುತ್ತದೆ. ಕಿಚ್ಚು ಹಾಯಿಸುವುದಕ್ಕೆ ಎಲ್ಲರೂ ಸಿದ್ಧತೆ ಮಾಡಿಕೊಳ್ಳುವರು. ಸಾಮಾನ್ಯವಾಗಿ ಪಶ್ಚಿಮ ದಿಕ್ಕಿನಲ್ಲಿ ನಡೆಸುವುದು ಪದ್ಧತಿ. ರಸ್ತೆಯಲ್ಲಿ ಅಡ್ಡಲಾಗಿ ಉದ್ದಕ್ಕೂ ಹುಲ್ಲು ಜೋಡಿಸಲಾಗುವುದು. ಊರಿನ ಎಲ್ಲರ ಮೆದೆಗಳಿಂದಲೂ ಹುಲ್ಲು ತಂದು ಹಾಕುವುದು ರೂಢಿ.

ಆಮೇಲೆ ಊರಿನ ಎಲ್ಲ ಜಾನುವಾರುಗಳನ್ನು ಕಿಚ್ಚುಹಾಯಿಸುವ ಪ್ರದೇಶಕ್ಕೆ ಹೊಡೆದುಕೊಂಡು ಬರಲಾಗುವುದು. ಇದಕ್ಕೂ ಸ್ವಲ್ಪ ಹಿಂದೆ ಆ ಪ್ರದೇಶದಲ್ಲಿ 'ಸಂಕ್ರಾಂತಮ್ಮ' ಎಂಬ ದೇವತೆಯನ್ನು ಮಣ್ಣಿಂದ ತಿದ್ದಲಾಗುವುದು. ಅದಕ್ಕೆ ತಯಾರಿಸಿದ 'ಪೊಂಗಲ್'ನ್ನು ನೈವೇದ್ಯ ಮಾಡಿ ಪೂಜೆ ನೆರವೇರಿಸಿದ ಮೇಲೆ, ಆ 'ಪೊಂಗಲ್' ಅನ್ನವನ್ನು ಎಲ್ಲ ದನಗಳ ಮೇಲೆ 'ಪೊಂಗಲೋ' ಎಂದು ಹೇಳುತ್ತಾ ಎರಚಲಾಗುವುದು. ಇದಾದ ಸ್ವಲ್ಪ ಕಾಲದಲ್ಲೇ ಹುಲ್ಲಿಗೆ ಬೆಂಕಿ ಹಚ್ಚಲಾಗುವುದು. ಬೆಂಕಿ ಉರಿಯುತ್ತಿದ್ದಂತೆ ಎಲ್ಲರೂ ದನಗಳನ್ನು ಓಡಿಸಿಕೊಂಡು ಕಿಚ್ಚುಹಾಯುವರು. ಮನೆಗೆ ಬಂದ ದನಕರುಗಳನ್ನು ಮನೆಯ ಹೊರಗೆ ನಿಲ್ಲಿಸಿ ಪೂಜೆ ಸಲ್ಲಿಸಲಾಗುವುದು. ಹೆಂಗಸರು ಬಂದ ದನಗಳ ಪಾದ ತೊಳೆದು, ಕುಂಕುಮ ಇಟ್ಟು, ಹೂವು ಮುಡಿಸಿ ಆರತಿ ಬೆಳಗುವ ಪದ್ಧತಿ ಬಹಳ ಕಾಲದಿಂದ ನಡೆದುಕೊಂಡು ಬಂದದ್ದು. ಆಮೇಲೆ ದನಗಳನ್ನು ಮನೆಗೆ ತಂದುಕಟ್ಟಿ, ಕಿಚ್ಚಿನ ಬೂದಿಯನ್ನು ಅವುಗಳ ಮೈಮೇಲೆಲ್ಲ ಸವರುವರು. ಹೊಸ ಬೆಳೆಯ ಪೊಂಗಲ್ ಮತ್ತಿತರ ವಿಶೇಷ ಊಟದ ವ್ಯವಸ್ಥೆಯಲ್ಲಿ ಸಂಕ್ರಾಂತಿ ಹಬ್ಬ ಮುಗಿಯುವುದು.

ಬದುಕಿನ ವಿವಿಧ ಹಂತಗಳಲ್ಲಿ ತಮಗೆ ಸಹಾಯಕವಾಗಿ ನಿಲ್ಲುವ ಜಾನುವಾರುಗಳ ಬಗೆಗೆ ಮನುಷ್ಯ ತೋರುವ ಕೃತಜ್ಞತೆಯ ಪರಿ ಇದು. ಮಾನವ ತನ್ನ ಸಮಾಧಾನಕ್ಕಾಗಿ

ಮಾಡುವ ಹಬ್ಬ ಇದಾದರೂ, ಪ್ರಕೃತಿಯ ಮೂಕ ಸಹಕಾರಕ್ಕೆ ಸಲ್ಲಿಸುವ ಗೌರವವೆಂದು ಭಾವಿಸುವುದು ಸೂಕ್ತ.

**4**

ಈವರೆಗೆ ನಮ್ಮ ಹಳ್ಳಿಯವರು ಆಚರಿಸುವ ಸಂಕ್ರಾಂತಿ ಹಬ್ಬದ ರೀತಿಯನ್ನು ನೋಡಿದೆವು. ಈಗ ಶಿಷ್ಟರು ಅಥವಾ ನಾಗರಿಕರು ಆಚರಿಸುವ ಈ ಹಬ್ಬದ ವಿಧಾನವನ್ನು ನೋಡೋಣ. ಹಳ್ಳಿಗರ ಹಬ್ಬದಲ್ಲಿರುವ ವೈಭವ ಮತ್ತು ವೈವಿಧ್ಯತೆಗಳು ನಾಗರಿಕರ ಸಂದರ್ಭದಲ್ಲಿ ಇಲ್ಲವೆಂಬುದನ್ನು ಮೊದಲಿಗೆ ಹೇಳಬೇಕು. ಅದರಲ್ಲಿಯೂ ಗ್ರಾಮೀಣ ವಾಸಿಗಳ ಜಾನುವಾರು ಸಂಕ್ರಾಂತಿಯಂತು ನಾಗರಿಕರಲ್ಲಿ ಇರಲು ಸಾಧ್ಯವಿಲ್ಲ. ಆದ್ದರಿಂದ ಇವರದು ಹೆಚ್ಚು ನಾಜೂಕಾದ ಹಬ್ಬ. ಹಳ್ಳಿಯವರು ಪ್ರಕೃತಿಗೆ ಹತ್ತಿರದವರು; ಆದರಿಂದ ಅವರದು ಪ್ರಕೃತಿಪರವಾದ ದೃಷ್ಟಿ. ಆದರೆ ನಗರದವರು ಪ್ರಕೃತಿಗೆ ಅಷ್ಟು ಹತ್ತಿರದವರಲ್ಲ ; ಆದರಿಂದಲೇ ಅವರದು ಈ ಹಬ್ಬದಲ್ಲಿ ಭಿನ್ನಮಾರ್ಗ. ಅಂದರೆ ನಾಗರಿಕರದು ಎಳ್ಳಿನ ಹಬ್ಬ. ಸಂಕ್ರಾಂತಿಗೆ 'ಎಳ್ಳು ಬೀರುವ' ಹಬ್ಬ ಎಂದು ಹೆಸರು ಬಂದಿರುವುದು ಶಿಷ್ಟರಿಂದಲೇ ಎಂದು ತೋರುವುದು. ಏಕೆಂದರೆ, ಹಳ್ಳಿಯಲ್ಲಿ ಈ ಬಗೆಯ ಆಚರಣೆ ಇಲ್ಲ; ಇದ್ದರೆ ಅದು ಇತ್ತೀಚೆಗಾದ ಬದಲಾವಣೆ ಮಾತ್ರ. ಗ್ರಾಮ-ನಗರಗಳ ಸಂಪರ್ಕ ಹೆಚ್ಚುತ್ತಿದ್ದಂತೆ 'ಎಳ್ಳು ಬೀರುವ' ಈ ಆಚರಣೆ ಸಾರ್ವತ್ರಿಕವಾಗುತ್ತಿರುವಂತೆ ಕಂಡುಬರುತ್ತದೆ. "ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡು" ಎಂಬ ಗಾದೆಯನ್ನು ನಾವೆಲ್ಲ ಕೇಳಿದ್ದೇವೆ. ಇದೊಂದು ನಾಗರಿಕ ಗಾದೆಯೇ ಇರಬೇಕು. ಆದರೂ ಸಂಕ್ರಾಂತಿ ಹಬ್ಬದ ಈ ಮುಖದ ಆಚರಣೆಯನ್ನು ತುಂಬ ಪರಿಣಾಮಕಾರಿಯಾಗಿ ನಿವೇದಿಸುತ್ತದೆ ಪ್ರಸ್ತುತ ಗಾದೆ.

ಎಳ್ಳುಬೀರಲು ಅನುಕೂಲವಾಗುವಂತೆ ಹೆಂಗಸರು ಹಬ್ಬ ಇನ್ನೂ ಹಲವಾರು ದಿವಸಗಳು ಇರುವಂತೆಯೇ ಸಿದ್ಧತೆ ನಡೆಸುವರು. ಈಗಂತು 'ಸಿದ್ಧ ಸರಕುಗಳ' ಕಾಲ. ಎಳ್ಳುಬೀರಲು ಬೇಕಾಗುವ ಸಕಲ ಸಾಮಗ್ರಿಗಳೂ ಸಿದ್ಧ ಪೊಟ್ಟಣಗಳಲ್ಲಿ ಅಂಗಡಿಗಳಲ್ಲಿ ದೊರೆಯುತ್ತವೆ. ಈ ಆಚರಣೆಯಲ್ಲಿ ಎಳ್ಳುಬೆಲ್ಲಗಳ ಜೊತೆಗೆ, ಸಕ್ಕರೆ ಅಚ್ಚು ಮತ್ತು ಕಡಲೆಕಾಯಿ ಹೋಳುಗಳನ್ನು ಬೆರೆಸಲಾಗುವುದು. ಕೆಲವೊಮ್ಮೆ ಸಣ್ಣಸಣ್ಣ ಪೆಪ್ಪರ್‌ಮಿಂಟ್ ಮತ್ತು ಕಲ್ಯಾಣಸೇವೆಗಳನ್ನೂ ಸೇರಿಸಲಾಗುವುದು.

ಸಂಕ್ರಾಂತಿ ಹಬ್ಬದಂದು ಹೆಣ್ಣುಮಕ್ಕಳು ತಮಗೆ ಬೇಕಾದವರ ಮನೆಗೆ ಹೋಗಿ ಎಳ್ಳುಬೆಲ್ಲವನ್ನು ವಿನಿಮಯ ಮಾಡಿಕೊಳ್ಳುವ ಪದ್ಧತಿ ನಾಗರಿಕ ಸಮುದಾಯದಲ್ಲಿ ಬಹಳ ಕಾಲದಿಂದ ನಡೆದುಕೊಂಡು ಬಂದಿದೆ. ಹೀಗೆ ಎಳ್ಳುಬೀರುವಾಗ ಕೆಲಸಾರಿ ಕಿತ್ತಲೆಹಣ್ಣು, ಬಾಳೆಹಣ್ಣು, ಕಬ್ಬಿನ ತುಂಡು, ಬೊಂಬೆ, ಭರಣಿ, ಎಲಚಿಹಣ್ಣು – ಇವುಗಳನ್ನೂ ಕೊಡುವುದುಂಟು. ಹಬ್ಬದೂಟದಲ್ಲಿ ಎಳ್ಳು-ಬೆಲ್ಲದ ತಿಂಡಿ ತಿನಿಸುಗಳಿಗೆ ಪ್ರಾಶಸ್ತ್ಯ ಹೆಚ್ಚು. ಒಟ್ಟಿನಲ್ಲಿ ಎಳ್ಳುಬೀರುವ ಸಂಪ್ರದಾಯ ಒಂದು ಸಂತೋಷದ ಹಾಗೂ ಸಂಭ್ರಮದ ಪ್ರಕ್ರಿಯೆ;

ಹಾಗೆಯೇ ಮಾನವ ಸೌಹಾರ್ದದ ಸಂಕೇತ ಕೂಡ ಆಗಿದೆ.

ಸಂಕ್ರಾಂತಿಯ ಮಾರನೆಯ ದಿವಸ 'ಕರಿ ಎರೆಯುವ' ಸಂಪ್ರದಾಯ ಕೆಲಕಡೆ ಇದೆ. ಇದನ್ನು ಪರ್ವಕಾಲದ ಕರಿ ಎಂದು ಕರೆಯುತ್ತಾರೆ. ಇದನ್ನು ಮುಖ್ಯವಾಗಿ ಮಕ್ಕಳಿದ್ದವರ ಮನೆಯಲ್ಲಿ ಆಚರಿಸುತ್ತಾರೆ. ಮಕ್ಕಳನ್ನು ಹಸೆಯ ಮೇಲೆ ಕುಳ್ಳಿರಿಸಿ ಕಬ್ಬು, ಕಡಲೆಕಾಯಿ, ಮೊದಲಾದವುಗಳನ್ನು ಎರೆದು ಆರತಿ ಮಾಡುವ ಪದ್ಧತಿಯೇ ಇದು. ಇದನ್ನು ತುಂಬ ಸಂಭ್ರಮದಿಂದ ನಡೆಸಲಾಗುವುದು. ಇದನ್ನೆ ಕೆಲವು ಕಡೆ ಹಬ್ಬದ ಸಂಜೆಯಲ್ಲಿಯೇ ಮಾಡುವ ಪರಿಕ್ರಮವಿದೆ. ಇಲ್ಲಿ ಬಳಸುವ ಪದಾರ್ಥಗಳು ಸ್ವಲ್ಪ ಬೇರೆಯಾಗಿವೆ. ಮಕ್ಕಳನ್ನು ಮಣೆಯ ಮೇಲೆ ಕುಳ್ಳಿರಿಸಿ ಬೆಳ್ಳಿಲೋಟದಲ್ಲಿ ಚಿಲ್ಲರೆ ಕಾಸು, ಎಲಚಿ ಹಣ್ಣುಗಳನ್ನು ತಲೆಯ ಮೇಲೆ ಸುರಿಯುತ್ತಾರಂತೆ. ಇದನ್ನು ಮೂರು ಬಾರಿ ಮಾಡುವ ಕ್ರಮವಿದೆ. ಆಮೇಲೆ ಆರತಿ ಮಾಡುವ ಪದ್ಧತಿ ಯಥಾ ರೀತಿಯಲ್ಲಿದೆ. ಹೀಗೆ ಆಚರಿಸಲು ಕಾರಣ ಆಯಸ್ಸು ಹೆಚ್ಚುತ್ತದೆ ಎಂಬ ಜನರ ನಂಬಿಕೆ. ಸಂಕ್ರಾಂತಿಯ ಈ ನಾಗರಿಕ ವೈಶಿಷ್ಟ್ಯಗಳು ಕ್ರಮೇಣ ಗ್ರಾಮೀಣರನ್ನು ಆಕರ್ಷಿಸುತ್ತಿವೆ.

## 5

ಹೊಸ ಬೆಳೆಯೊಡನೆ ಆಗಮಿಸಿದ ಸಂಕ್ರಾಂತಿ ಸುಗ್ಗಿಯ ಕಾಲವನ್ನು ಉದ್ಘಾಟಿಸುತ್ತದೆ ಎಂದು ಹೇಳಬಹುದು. ಇದು ರೈತನ ಜೀವನದ ಹೊಸ ಉಲ್ಲಾಸದ, ಹೊಸ ಆಶೋತ್ತರಗಳ ಆರಂಭವೂ ಹೌದು. ಕಣ ಮಾಡಿ, ಮೇಟಿ ನೆಟ್ಟು, ಬೆಳೆ ಕೊಯ್ದು, ಮೆದೆ ಹಾಕಿ, ಬತ್ತ ಬಡಿದು, ಹಂತಿ ಕಟ್ಟಿ, ಹುಲ್ಲು ತುಳಿಸಿ, ರಾಶಿ ತೆಗೆದುಕೊಂಡು ಹೋಗುವವರೆಗೆ ಒಂದು ಪೂರ್ಣ ಪ್ರಮಾಣದ ಅವಿಚ್ಛಿನ್ನ ಕ್ರಿಯೆ ರೈತನಿಗೆ. ಇಡೀ ವರ್ಷದ ದುಡಿಮೆಗೆ ಫಲ ಕಾಣುವ ತವಕ ಅವನಿಗೆ. ಇದು ರೈತರಿಗೆಲ್ಲ ಹಿಗ್ಗು ತರುವ ಕಾಲ ; ಹಾಗೆಯೇ ಅವರು ದಾನ ಕೊಡುವ ಕಾಲ ಕೂಡ. ಈ ಎಲ್ಲ ಕ್ರಿಯೆಯಲ್ಲೂ ರೈತ ಪ್ರೀತಿಯಿಂದ, ಭಕ್ತಿಯಿಂದ ತನ್ನನ್ನು ತೊಡಗಿಸಿಕೊಂಡಿರುವುದನ್ನು ನೋಡುತ್ತೇವೆ. ಸುಗ್ಗಿಯ ಸಮಸ್ತ ಮೂಲವೂ ರಾಶಿಯಲ್ಲಿರುತ್ತದೆ. 'ರಾಶಿಪೂಜೆ' ಅವನ ಜೀವನದಲ್ಲಿ ಮರೆಯಲಾರದ ಘಟ್ಟ.

ದವಸವನ್ನು ಹಸನುಗೊಳಿಸಿ ರಾಶಿಹಾಕಿದ ಮೇಲೆ ಪೂಜೆ ಸಲ್ಲಿಸುವುದು ಸಂಪ್ರದಾಯ. ಶುದ್ಧೀಕರಿಸಿದ ಬೂದಿಯನ್ನು ರಾಶಿಯ ಸುತ್ತ ಮೂರು ಗೆರೆಗಳಿರುವ ಹಾಗೆ ಬಿಟ್ಟುಕೊಂಡು ಬರುತ್ತಾರೆ. ಅನಂತರ ಪ್ರತಿ ದಿಕ್ಕಿನ ಕಡೆಯಿಂದ ಪ್ರತಿ ಗೆರೆಗೆ ಮೇಲ್ಮುಖವಾಗಿರುವಂತೆ ಮೂರು ನಾಮದ ರೀತಿಯಲ್ಲಿ ಮತ್ತೆ ಬೂದಿಯನ್ನು ಬಿಡುತ್ತಾರೆ. ಈ ಮೂರರ ಸಂಖ್ಯೆ ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿದ್ದು, ಮಾಂತ್ರಿಕ ಸಂಖ್ಯೆಯಾಗಿದೆ. ಅನಂತರ ಕಾಯಿಕಡ್ಡಿ ಕರ್ಪೂರಗಳಿಂದ ರಾಶಿಯನ್ನು ಬೆಳಗಿ ಪೂಜೆ ಮಾಡುತ್ತಾರೆ. ಇದಾದ ಮೇಲೆ ರಾಶಿಯನ್ನು ಕೊಳಗದಿಂದ ಅಳೆಯಲು ಆರಂಭಿಸಲಾಗುತ್ತದೆ. ಮೊದಲನೆಯ ಅಳತೆಯನ್ನು 'ಒಂದು' ಎನ್ನದೆ

'ಹೆಚ್ಚಲಿ' ಎಂದು ಹೇಳುವುದು ವಾಡಿಕೆ. ಅಮಂಗಳ ನಿವಾರಣೆ ಮತ್ತು ಅಭಿವೃದ್ಧಿಯ ಸಂಕೇತಗಳೆರಡೂ ಈ ಆಶಯದಲ್ಲಿವೆ. ಹೀಗೆ ಅಳೆದು ಚೀಲದಲ್ಲಿ ತುಂಬಿ ಮೂಟೆಕಟ್ಟಿ ಗಾಡಿಗಳಲ್ಲಿ ಮನೆಗೆ ಸಾಗಿಸುವುದರಲ್ಲಿ ಈ ಕ್ರಿಯೆ ಮುಗಿಯುತ್ತದೆ. ಇದನ್ನು ಗುರುತಿಸುವ ಜನಪದ ಗೀತೆಯೊಂದು ಹೀಗೆ ಹೇಳುತ್ತದೆ :

ಹನ್ನೆರಡೆತ್ತಿನ ಬಾರಿ ಹೊನ್ನ ಮೇಟೀ ಕಂಬ
ಬಾಸಿಂಗ್ದ ಕೊಳಗ ಬಲಗೈಯ – ಕಂದಯ್ಯ
ರಾಶಿ ಅಳೆಯೋದೆ ಬೆಳಗಾಯ್ತು

ಮಳೆ ಚೆನ್ನಾಗಿ ಆಗಿ ಬೆಳೆ ಸಮೃದ್ಧವಾಗಿ ಬರುತ್ತಿದ್ದ ಕಾಲದ ಚಿತ್ರವಿದು. ಮಳೆಯನ್ನೆ ನಂಬಿ ಬದುಕುತ್ತಿದ್ದ ಅಂದಿನ ಜನರ ಶ್ರಮ ಮತ್ತು ಉಲ್ಲಾಸಗಳೆರಡೂ ಈ ಪದ್ಯದ ಭಾವದ ಹಿನ್ನೆಲೆಯಲ್ಲಿವೆ. ವಾರ್ಷಿಕ ಬೇಸಾಯಚಕ್ರದಲ್ಲಿ ರಾಶಿಪೂಜೆಯೇ ಕಡೆಯದು. ಸುಗ್ಗಿ ಇದರ ಪ್ರತೀಕವಷ್ಟೆ. ರಾಶಿ ಒಕ್ಕಲಿಗನ ಸಂಪತ್ತನ್ನು ತೋರಿಸುತ್ತದೆ. ಒಂದು ಕಾಲಕ್ಕೆ ಹೆಣ್ಣು ಕೊಡುವವರು ರಾಶಿ ಕಣಜಗಳಿವೆಯೇ ಎಂಬುದನ್ನು ವಿಚಾರಿಸಿ ಕೊಡುತ್ತಿದ್ದರಂತೆ. ರಾಶಿ ದಿವಸದ ಉತ್ತರ ಕರ್ನಾಟಕದ ಒಂದು ಸಂಪ್ರದಾಯವನ್ನು ಇಲ್ಲಿ ಹೇಳಬಹುದು. ಅಂದು ಅವರಿಗೆ ರಾಶಿಬುತ್ತಿಯ ದಿನವೂ ಆಗಿದೆ. ಒಕ್ಕಲಿಗನು ಬೆಳೆಯನ್ನು ಮನೆಗೆ ತರುವುದರೊಳಗೆ ಮೂರು ಚರಗಗಳನ್ನು ಆಚರಿಸುತ್ತಾನಂತೆ. ಜೋಕುಮಾರನ ಅಳಕ ಅಂಬಲಿ ಮೊದಲನೆಯದು; ಶೀಗೆ ಹುಣ್ಣಿಮೆಯಲ್ಲಿ ಬನದೂಟ ಮಾಡಿ ನೆರವೇರಿಸುವುದು ಎರಡನೆಯದು ; ರಾಶಿ ಬುತ್ತಿಯ ಕಾಲದಲ್ಲಿ ಚೆಲ್ಲುವ ಚರಗ ಕೊನೆಯದು. ಭೂಮಿತಾಯಿಗೂ, ಕಣದಲ್ಲಿಯ ಸಾಲು ಶರಣರಿಗೂ ಎಡೆಮಾಡಿ ಹುಲುಸುಕೊಡಿರೆಂದು ಬೇಡುತ್ತ ಕಡೆಯ ಚರಗವನ್ನು ನೆರವೇರಿಸುತ್ತಾರಂತೆ. ಚರಗ ಚೆಲ್ಲುವ ಉದ್ದೇಶದಲ್ಲಿ ಬೆಳೆ ಫಲವತ್ತಾಗಿ ರಾಶಿ ಸಮೃದ್ಧವಾಗಲೆಂಬ ಆಶಯವಿದೆ.

## 6

ಸಂಕ್ರಾಂತಿಯಂದು ಕಾಲೂರಿದ ಸುಗ್ಗಿಯ ಆಚರಣೆ ನಾಡಿನ ಎಲ್ಲ ಕಡೆ ಇರುವಂಥದು. ಪ್ರಕೃತಿ ಜೀವನದಲ್ಲೂ ಒಂದು ಸ್ಪಷ್ಟ ಪರಿವರ್ತನೆ ಅಂಕುರ. ಮರಗಿಡಗಳು ತಮ್ಮ ಹಣ್ಣೆಲೆಗಳನ್ನು ಉದುರಿಸಿ, ಚಿಗುರೊಡೆಯುವ ಕಾಲವದು. ಅಂತೆಯೇ ಮನುಷ್ಯ ಜೀವನದಲ್ಲಿ ಅದರಲ್ಲೂ ಬೇಸಾಯಗಾರರ ಬಾಳಿನಲ್ಲಿ ನವಜೀವನೋತ್ಸಾಹ. ಸುಗ್ಗಿಗೆ ಹಿಗ್ಗೇ ಮೂಲವಾಗಿರುವುದು. ಇದು ಸುಗ್ಗಿಯ ಸಂಪ್ರದಾಯಗಳಲ್ಲೂ ಸುಗ್ಗಿಯ ಹಾಡುಗಳಲ್ಲೂ ವ್ಯಕ್ತ. ಹಂತಿಯ ಹಾಡುಗಳು ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧವಾಗಿವೆ. ಹಂತಿಕಟ್ಟುವ, ತುಳಿಸುವ ಸಿದ್ಧತೆಯನ್ನು ಕುರಿತು ಈ ಹಾಡುಗಳಲ್ಲಿ ಬಿಂಬಿಸಲಾಗಿದೆ. ಇದಕ್ಕೆ ಒಂದೆರಡು ಉದಾಹರಣೆಗಳು ಇಲ್ಲಿವೆ :

ಮೂಡಲ ಹೋರೀಗೆ ಮುರಗೀಯ ಕೋಡನಾಸು
ಸಣಗೆಜ್ಜೆ ಕೊರಳ ಸರಪಳಿಯ - ಕಟಿಕೊಂಡು
ಸವನಾಗಿ ಹಂತಿ ತುಳಿದಾನೊ

ಹಂತಿಯ ಕಟ್ಟವನ ಹೊಸ ಹುರುಪನು ನೋಡೊ
ಹಂತಿಯ ಧೂಳ ಮೈಧೂಳೊ - ಹದಿನಾರು
ಹಂತಿ ಎತ್ತಿನಾ ಹಣಿ ಧೂಳೊ

ಬದುಕನ್ನು ಆನಂದದ ಕಡೆಗೆ ತೆಗೆದುಕೊಂಡು ಹೋಗಬೇಕೆಂಬುದು ಸುಗ್ಗಿಯ ಸಂದೇಶವಾಗಿರುವಂತೆ ತೋರುವುದು. ಆದಕಾರಣ ಅದಕ್ಕೆ ಸಂಬಂಧಿಸಿದ ಪ್ರತಿಕ್ರಿಯೆಯಲ್ಲೂ ಸಂತೋಷ ಕಾಣಲು ರೈತ ಜನ ಮುಂದಾಗುವರು. ಹಂತಿಗೆ ಕಟ್ಟುವ ಎತ್ತಿನ ಸಿಂಗಾರವೂ ಈ ಮೂಲದಿಂದಲೇ ಬಂದುದು. ದನಗಳ ಶೃಂಗಾರಕ್ಕೆ ರೈತ ಕೊಡುವ ಆದ್ಯತೆಯನ್ನು ಸಂಕ್ರಾಂತಿಯೇ ಸಾರಿಹೇಳುತ್ತದೆ. ಹಂತಿ ಕಟ್ಟುವ ಮತ್ತು ಹಂತಿ ಹೊಡೆಯುವ ಸುಗ್ಗಿಯ ಚಟುವಟಿಕೆಯಲ್ಲಿ ಅವನ ಜೀವನ ತೃಪ್ತಿಯನ್ನೆ ಕಾಣುತ್ತೇವೆ. ಈ ಹಾಡುಗಳು ಹೇಳುವುದು ಇದನ್ನೇ. ಕಣತುಂಬ ರಾಶಿಯನ್ನು ನೋಡಬೇಕೆಂಬುದು ರೈತನಿಗೆ ಸಹಜವಾಗಿಯೇ ಬರುವ ಆಶೆ. ಅದರಲ್ಲಿ ತನ್ನ ಪಾಲು ಇರುವಂತೆಯೇ ಇತರರ ಪಾಲೂ ಇದೆ ಎಂಬ ನಂಬಿಕೆ. ಅದಕ್ಕಾಗಿಯೇ ದಾಸೋಹ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದನ್ನು ನೋಡುತ್ತೇವೆ :

ಮೂತಾಳ ಕೂರಿಗೆಗೆ ಯಾತರದು ಹಂಗಿಲ್ಲ
ಭೂತಾಯಿ ಬೆಳೆಯೆ ಒಕ್ಕಲಿಗ ಜಗದೊಳಗೆ
ಕೋತುಳ್ಳ ಮೇಳಿ ಬಲಗೊಂಡು

ಒಂದು ತಾಳದ ಬೆಳೆಯ ಬಂದವರಿಗಿಲ್ಲೆನ್ನೆ
ಮುಂದು ಕೊಡುಗೈಯು ಒಕ್ಕಲಿಗ ನಾಡೊಳಗೆ
ಹೊಂದಿ ದಾಸೋಹ ಶಿವಮತಕೆ

ರಾಶಿ ಗಾಳಿಯು ಬೀಸಿ ಸೂಸಿ ಹರಿಯಿತು ಕಣವು
ಕೂಸ ಕೋಳೂರ ಕಡೆಗಾಳಿ – ಬೀಸಿಂದು
ಮೀಸಲೀ ರಾಶಿ ಜಂಗಮಕೆ

ರೈತ ಅನ್ನದಾತ ಎಂಬ ಕಲ್ಪನೆಯನ್ನು ಇವು ಚೆನ್ನಾಗಿ ಮುಂದಿಡುತ್ತವೆ. ಹಂಗಿಲ್ಲದ ಅವನ ಒಕ್ಕಲುತನದ ಬಗ್ಗೆ ಕೂಡ ಇಲ್ಲಿ ಹಾಡಿಕೊಂಡಿದ್ದಾನೆ. ಹಾಗೆಯೇ ಅವನ 'ಕೊಡುಗೈಯ ವ್ಯಕ್ತಿತ್ವ' ಕೂಡ ವ್ಯಕ್ತ. ಗಳಿಕೆಯ ಹಂಚಿಕೆಯಲ್ಲಿ ರೈತ ತಾಳುವ ಈ ನಿಲುವು ಅತ್ಯಂತ ಸ್ಮರಣೀಯವಾದುದು. ಇದಕ್ಕೆ ಮುಖ್ಯವಾಗಿ "ನಮ್ಮದೆನ್ನುವ ಬದುಕು ಸೊಮ್ಮು ಶಿವನದೊ ಕಾಣಿಕೆ ಹುಮ್ಮಸವು ಬೇಡ ರೈತನಿಗೆ" ಕಾರಣವಾಗಿದೆ.

ಹೀಗೆ ಜನಜೀವನದಲ್ಲಿ ಸಂಕ್ರಾಂತಿ, ರಾಶಿ ಮತ್ತು ಸುಗ್ಗಿಗಳು ಬದಲಾವಣೆಯನ್ನೂ ಬೆಳಕನ್ನೂ ತಂದಿವೆ. ಇವುಗಳಲ್ಲಿ ಪ್ರಕೃತಿಯ ಪಾತ್ರವನ್ನೂ ತನ್ನ ಪಾತ್ರವನ್ನೂ ಗುರುತಿಸಿಕೊಳ್ಳುವಲ್ಲಿ ಮಾನವ ಯಶಸ್ವಿಯಾಗಿದ್ದಾನೆ. 'ಸಂಕ್ರಾಂತಿ' ಎಂಬುದಕ್ಕೆ 'ಕ್ರಾಂತಿ' ಮತ್ತು 'ಕಾಂತಿ' ಎಂಬ ಎರಡು ಅರ್ಥಗಳಿರುವುದು ಸಹಜ; 'ರಾಶಿ' ಸಮೃದ್ಧಿಯ ಸಂಕೇತ; ಹಾಗೆಯೇ 'ಸುಗ್ಗಿ' ಆನಂದದ ಪ್ರತೀಕ. ಹೀಗಾಗಿ ಪರಿವರ್ತನೆಯಲ್ಲಿ ಪ್ರಕಾಶಮಾನತೆ, ಸಮೃದ್ಧತೆ ಮತ್ತು ಆನಂದ ತನ್ಮಯತೆಗಳು ಉಂಟಾಗಿ, ನವ ಜೀವನಕ್ಕೆ ಬಾಗಿಲು ತೆರೆಯುತ್ತವೆ.

## 7

ಇಲ್ಲಿಯವರೆಗೆ ಸಂಕ್ರಾಂತಿ ಕುರಿತಂತೆ ಸಮುದಾಯದಲ್ಲಿ ಹಾಸುಹೊಕ್ಕಾಗಿರುವ ಆಚರಣೆಗಳನ್ನು ಮತ್ತು ಹಾಡುಗಳನ್ನು ಪರಿಶೀಲಿಸಿದೆವು. ಈಗ ನಮ್ಮ ಆಧುನಿಕ ಲೇಖಕರು ಈ ಬಗ್ಗೆ ಏನು ಹೇಳುತ್ತಾರೆ ಎಂಬುದರ ಕಡೆಗೆ ಬರೋಣ. ಕನ್ನಡದ ಹಲವಾರು ಕವಿಗಳು ಸಂಕ್ರಾಂತಿ ಕುರಿತಂತೆ ಪದ್ಯಗಳನ್ನು ಬರೆದಿದ್ದಾರೆ. ಇವರಲ್ಲಿ ಕೆಲವರಿಗೆ ಸಂಕ್ರಾಂತಿ ಹಬ್ಬವೇ ನೇರವಾಗಿ ವಸ್ತುವಾಗಿದ್ದರೆ, ಇನ್ನು ಕೆಲವರು 'ಸಂಕ್ರಾಂತಿ', 'ಸಂಕ್ರಮಣ' ಪದಗಳ ಸಂಕೇತಗಳ ಮೇಲೆ ಏನೆಲ್ಲಾ ಹೇಳಲು ಹೊರಡುತ್ತಾರೆ.

ನಮಗಿಲ್ಲಿ ಮುಖ್ಯವಾಗಿರುವುದು ಸಂಕ್ರಾಂತಿ ಬಗ್ಗೆ ಕವಿಹೃದಯ ಹೇಗೆ ಮಿಡಿದಿದೆ, ಸ್ಪಂದಿಸಿದೆ ಎಂಬುದು ಮಾತ್ರ. ನಮ್ಮ ಹಿರಿಯ ಲೇಖಕರಾದ ಮಾಸ್ತಿಯವರು 'ಸಂಕ್ರಾಂತಿ' ಎಂಬೊಂದು ಕವನ ಸಂಕಲನವನ್ನೆ ಪ್ರಕಟಿಸಿದ್ದಾರೆ. ಅದರಲ್ಲಿನ ಅದೇ ಹೆಸರಿನ ಕವನ ದೀರ್ಘವಾಗಿದ್ದು, ಸಂಕ್ರಾಂತಿ ಹಬ್ಬದ ವಿವಿಧ ಮಜಲುಗಳನ್ನು ಬಹು ಚೆನ್ನಾಗಿ ಚಿತ್ರಿಸಿದೆ. ಕವನದ ಆರಂಭದಲ್ಲಿ ಈ ಮಾತುಗಳಿವೆ :

ವರುಷವೆಲ್ಲ ಬಸಿರಲಿ ಬೆಳಸಿದ ಬೆಳೆ
    ತುಂಬಿರೆ ಉಡಿಯಲ್ಲಿ;
ಹೆರಳ ಕಪ್ಪು ಬೆಳಗುವ ಹೂವಾಗಿ
    ಅರಲಿರೆ ಮುಡಿಯಲ್ಲಿ;
ಮೂಡಲು ಬಡಗಲ ಮೂಲೆಯ ಗಾಳಿಯ
    ಸೋಂಕಿಗಂಜಿ ಬೆರೆತ
ಗಿಡಮರಬಳ್ಳಿಯ ಒಡಲಲಿ ಪ್ರಕೃತಿ.
    ಸಾಕೀ ಎದೆ ಕೊರೆತ,
ಮರಳಿ ಬರನೆ ಚೈತ್ರಾನಿಲ, ಬಾರವೆ
    ಅಂದಿನ ಸುಖ ಶಾಂತಿ,
ಎಂದು ಸುಯ್ಯುತಿರೆ; ತಾಯ ಸಂತಯಿಸೆ
    ಬಂದಿದೆ ಸಂಕ್ರಾಂತಿ.

ಸಂಕ್ರಾಂತಿ ಬರುವಾಗಲೆ ಬೆಳೆಯ ಸಿರಿಯನ್ನು ತಂದ ಬಗೆಯನ್ನು ವರ್ಣಿಸುತ್ತಲೆ, ಚಳಿಯ

ಎದೆಕೊರೆತವನ್ನು ಪ್ರಸ್ತಾಪಿಸುತ್ತದೆ ಕವನ. ಚೈತ್ರದ ಆಗಮನದ ಅಭಿಲಾಷೆಯನ್ನು ಸಹ ಕವನ ಹೊತ್ತಿದೆ. ಮುಂದೆ ಜನ, ನೆಲ ಮತ್ತು ಬಾನುಗಳಲ್ಲಿ ಅಪೂರ್ವ ನವಕಾಂತಿಯೊಂದು ಉದಯವಾದುದನ್ನು ಕವಿ ಹೇಳುತ್ತಾರೆ. ಏರಿಳಿತಗಳಿದ್ದರೂ ಸಂಕ್ರಾಂತಿ ಒಳಿತನ್ನೆ ತರುತ್ತದೆ ಎಂಬ ಭಾವವನ್ನು ಹೊಮ್ಮಿಸುತ್ತಾರೆ ಕವಿ ಈ ಸಾಲುಗಳಲ್ಲಿ :

ಹಿಂಗಡೆ ಚಳಿ, ನಿಡಿದಿರುಳು, ಹಿಮಂತ;
    ಮುಂದಿಹುದು ವಸಂತ.
ಸಾವು ಹುಟ್ಟು, ಸುಖಬೇನೆ ಸಂಸ್ಕೃತಿಯ
ಕಡಲಿನ ಅಶಾಂತ
ಅಂತ್ಯ ವಿರಹಿತ ತರಂಗದೇರಿಳಿತ
ಇಳಿತದ ಮಗ್ಗುಲಲೆ
ಏರು ಇದೆ ಕಣಾ: ಮನ ಸಮ ಇರಲಿ;
    ಎದೆ ಹಿಗ್ಗಿರಲಿ;
ಹಚ್ಚಡವಿರೆ ಚಳಿ ಭೋಗದ ವಸ್ತು
ಬೇಡ ವೃಥಾ ಚಿಂತೆ.
ನೋಡು ಬಾಳೊಳಿಹ ಒಳಿತು ಸಂತಸವ
    ಎಂದಿದೆ ಸಂಕ್ರಾಂತಿ.

ಮಾಸ್ತಿಯವರು ಸಂಸ್ಕೃತಿಯನ್ನು ಬಲ್ಲವರು; ಜೀವನದ ವೈಪರೀತ್ಯಗಳನ್ನು ತಿಳಿದವರು. ಬದುಕಿನ ಬೇಕು ಬೇಡಗಳಿಗೆ ಸ್ಪಂದಿಸುವ ರೀತಿಯನ್ನು ಮೇಲಿನ ಮಾತುಗಳಲ್ಲಿ ಹೇಳಿದ್ದಾರೆ. ಸಂಕ್ರಾಂತಿ ಸಮನ್ವಯ ಗುಣಕ್ಕೂ ಹೆಸರಾಗಿದೆ. ಈ ಕಾರಣದಿಂದಲೇ "ಇಳಿತದ ಮಗ್ಗುಲಲೆ ಏರು ಇದೆ ಕಣಾ; ಮನ ಸಮ ಇರಲಿ" ಎಂಬ ಸಂದೇಶವನ್ನು ಕೊಡುವಂತೆ ಬರೆಯಲಾಗಿದೆ. ಎದೆಯ ಹಿಗ್ಗು ಯಾವ ಕಾರಣಕ್ಕೂ ತಪ್ಪದಂತೆ ಇರಿಸಿಕೊಳ್ಳುವುದೂ ಮುಖ್ಯ; ಸಂಕ್ರಾಂತಿಯ ಆಶಯವಾದರೂ ಇದೇ. ಇಷ್ಟು ಹೇಳಿದ ಕವಿ ಮಾಸ್ತಿಯವರು ಎಳ್ಳುಬೀರುವ ಸಂಪ್ರದಾಯದ ವರ್ಣನೆಗೆ ಬರುತ್ತಾರೆ:

ಬಣ್ಣದ ರೇಶಿಮೆ ಚಿನ್ನದ ಕಾಗಿನ
    ಸೇಲೆಗಳನು ಉಟ್ಟು,
ಅಂದಿಗೆ ಕಂಕಣ ಬಂದಿ ಬಾವಲಿ
    ಓಲೆ ಮೂಗುಬಟ್ಟು
ಕಂಠಿಕೆ ಜಡೆಬಿಲ್ಲೆಯಲಂಕರಣದ
    ಹರದೆಯರಳೆ ಮಗುವ
ಎದೆಗಳಿಗಪ್ಪಿ, ಕಂಕುಳಲಿರುಕಿ
    ತಮ್ಮಾ ನಗೆಯುಗುವ

ಮೊಗದಲಿ ನೆರೆಹೊರೆ ಮನೆಗಳ ಸಾರಿ
ಎಳ್ಳುಬೆಲ್ಲ, ಅಂತೇ
ಬಗೆಯ ಹರ್ಷವನು, ಬೀರುತ ನಡೆಯೆ
ಬೆಳಗಿದೆ ಸಂಕ್ರಾಂತಿ.

ಸಂಕ್ರಾಂತಿಯ ಮುಖ್ಯ ವೈಶಿಷ್ಟ್ಯವಾದ ಎಳ್ಳುಬೀರುವ ಆಚರಣೆಗೆ ಇಲ್ಲಿ ಅಭಿವ್ಯಕ್ತಿ ನೀಡಲಾಗಿದೆ. ಹೆಂಗಳೆಯರು ನಾನಾ ಆಭರಣಗಳಿಂದ ಶೋಭಿತರಾಗಿ ನೆರೆಹೊರೆಯ ಮನೆಯವರಿಗೆ ಎಳ್ಳುಬೀರುವ ದೃಶ್ಯ ಚಿತ್ರವತ್ತಾಗಿ ಬಂದಿದೆ. ಎಳ್ಳುಬೆಲ್ಲವ ಬೀರುವುದರ ಜೊತೆಗೆ ಮನಸ್ಸಿನ ಸಂತೋಷವನ್ನೂ ಸಂಕ್ರಾಂತಿ ಹಂಚಿದೆ ಎಂಬ ಕವಿಯ ಅಭಿಪ್ರಾಯ ಯಥೋಚಿತವಾಗಿದೆ. ಮಾಸ್ತಿಯವರು ಸಂಕ್ರಾಂತಿಯ ನಾಗರಿಕ ಆಚರಣೆಗೆ ಪ್ರತಿಕ್ರಿಯಿಸಿರುವಂತೆಯೇ, ಹಳ್ಳಿಯ ಸಂಕ್ರಾಂತಿ ಸಂಪ್ರದಾಯಕ್ಕೂ ಮನ್ನಣೆ ಕೊಡುವುದನ್ನು ಮರೆತಿಲ್ಲ. ಕಿಚ್ಚುಹಾಯಿಸುವ ಸಂಪ್ರದಾಯವನ್ನು ತಮ್ಮ ಕವಿತೆಯಲ್ಲಿ ಹೀಗೆ ಹೇಳಿದ್ದಾರೆ:

ದನಗಳ ಮಾಳಕೆ ಬಿಡದೆಯೆ ಕೋಡಿಗೆ
ಬಣ್ಣಬಳಿದು, ಹೊಚ್ಚ
ಕುಚ್ಚು ವಸ್ತ್ರವನು ಕಟ್ಟಿ, ಒಕ್ಕಲು
ಮುಚ್ಚಂಜೆಗೆ ಕಿಚ್ಚ
ಅವನು ಹಾಯಿಸಿದೆ; ತರುಣರು ಛಲದಲಿ
ಬೆಲೆ ತೊಡವಿನ ದನವ
ತಡೆದು, ಸಿಂಗರವ ಸುಲಿದು, ತೋಳೆತ್ತಿ
ಮೆರೆದರು ಕಲಿತನವ.

ದನಗಳ ಕೊಂಬಿಗೆ ಬಣ್ಣಬಳಿದು, ಕುಚ್ಚು ಕಟ್ಟಿ, ಮುಚ್ಚಂಜೆಗೆ ಕಿಚ್ಚುಹಾಯಿಸುವ ಚಿತ್ರ ಈ ಸಾಲುಗಳಲ್ಲಿ ಮನಂಬುಗುವಂತೆ ಬಂದಿದೆ. ಹಾಗೆಯೇ ತರುಣರು ಹೋರಿಗಳನ್ನು ಶೃಂಗರಿಸಿ ಮೆರೆಯುವ ಸಂಗತಿಗೆ ಕೂಡ ಕವನ ಮಾತುಕೊಟ್ಟಿದೆ. ಹೀಗೆ ಸಂಕ್ರಾಂತಿ ಹಬ್ಬದ ವಿವಿಧ ಲಕ್ಷಣಗಳನ್ನು ಬರೆಹದಲ್ಲಿ ಮೂಡಿಸಿದ ಕವಿ ಮಾಸ್ತಿಯವರು, ಅದಕ್ಕೆ ಅನುಗುಣವಾದ ಮುಕ್ತಾಯವನ್ನು ಹಾಡುತ್ತಾರೆ:

ಈ ಮನ ಬನ ಮನೆ ನಾಡಲಿ ಒಳಿತನು
ಸೊರೆದಿಹ ಸಂಕ್ರಾಂತಿ
ಸಾರು ಲೋಕದಲ್ಲೆಡೆಯನು; ನಿನ್ನಯ
ಸುಖ ಶೀತಲ ಕಾಂತಿ
ಮಾನವನನ್ವಯವನು ಕಾಡುತಲಿಹ
ಬೇನೆ ಭಯ ಭ್ರಾಂತಿ
ಸಾವು ಶಂಕೆ ಕಷ್ಟಕೆ ಆದನಿತು
ನೀಡಲಿ ವಿಶ್ರಾಂತಿ.

ಇಲ್ಲಮೆ ಕಳ್ತಲು ಸಾವುಗಳಿಂದ
ಜಗವನು, ಸನ್ಮಂತ್ರಿ,
ಇರವಿನ ಬೆಳಕಿನ ಅಮೃತದ ಪದಕೆ
ನಡೆಯಿಸು ಸಂಕ್ರಾಂತಿ.

ಸಂಕ್ರಾಂತಿಯ ಮುಖ್ಯ ತತ್ತ್ವವನ್ನು ಮಾಸ್ತಿಯವರು ಇದರಲ್ಲಿ ಪ್ರತಿಪಾದಿಸಿದ್ದಾರೆ. ನಾಡಿನಲ್ಲಿ ಒಳಿತನು ಸಾರುವ ಹಬ್ಬ ಸಂಕ್ರಾಂತಿ. ಮಾನವನನ್ನು ಕಾಡುತ್ತ ಬಂದಿರುವ ಭಯ, ಭ್ರಾಂತಿ, ಬೇನೆ, ಸಾವು, ಶಂಕೆ, ಕಷ್ಟಗಳು ತೊಲಗಬೇಕೆಂಬುದು ಅದರ ಹೆಬ್ಬಯಕೆ; ಜಗತ್ತನ್ನು ಕತ್ತಲಿನಿಂದ ಬೆಳಕಿನೆಡೆಗೆ ನಡೆಸುವಂಥದೇ ಸಂಕ್ರಾಂತಿ. ಈ ಅಭಿಪ್ರಾಯದಲ್ಲಿ ಕವಿಯ ಮನೋವೈಶಾಲ್ಯ ಮತ್ತು ಮೌಲ್ಯನಿಷ್ಠೆಗಳು ಮಡುಗಟ್ಟಿವೆ. ಮಾಸ್ತಿಯವರ ಈ 'ಸಂಕ್ರಾಂತಿ' ಪದ್ಯ ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಒಂದು ದಾಖಲೆಯಾಗಿದೆ. ಕವಿಯ ಉನ್ನತ ನಿಲುವೂ ಜನಪರವಾದ ದೃಷ್ಟಿಯೂ ಇದರಲ್ಲಿ ವ್ಯಕ್ತವಾಗಿದೆ.

ನಮ್ಮ ಇನ್ನೊಬ್ಬ ಹಿರಿಯ ಕವಿಗಳಾದ ಪು.ತಿ. ನರಸಿಂಹಾಚಾರ್ ಅವರ 'ಮಕರ ಸಂಕ್ರಾಂತಿಯ ದಿನ' ಎಂಬ ಕವಿತೆಯನ್ನಿಲ್ಲಿ ನೆನಪು ಮಾಡಬೇಕು. ಸಂಕ್ರಾಂತಿಯ ವಸ್ತು ವಿವರವನ್ನೇನು ಇದು ಕೊಡುವುದಿಲ್ಲ. ಅದರ ಪರಿಣಾಮವಷ್ಟೇ ಇಲ್ಲಿ ಮುಖ್ಯ. ಅದರಲ್ಲೂ ಕವಿಯ ವೈಯಕ್ತಿಕ ನೆಲೆಯಲ್ಲಿ ಅನುಭವ ಮಾಡಿದ ರೀತಿ ಇದರ ಅಭಿವ್ಯಕ್ತಿ. ಆ ದಿನದ ಒಂದು ರಸಾನುಭವದ ಕ್ಷಣಗಳನ್ನು ಪದ್ಯದಲ್ಲಿ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ ಪು.ತಿ.ನ ಅವರು. ಅದರ ಕೆಲವು ಸಾಲುಗಳನ್ನು ಇಲ್ಲಿ ಕೊಡುವುದು ಸೂಕ್ತ:

ದಿನದ ಗೋಲ ಶುಭ್ರ ನೀಲ
ಇದನು ಕಾಣುವುದಕು ಮೇಲ
ಕಾಣೆ ನಾನು ಈ ಜೀವದಿ.

ಕೃಪೆಗೈದಿರಲೆನ್ನ ಪ್ರಕೃತಿ
ಊಣೆಯ ತುಸುವಿಲ್ಲವೆನೆ
ತುಂಬಿ ತುಳುಕಿ ಪ್ರಾಣದ್ಯುತಿ
ಬೆರೆದಿಹುದೀ ಹೊಂಬಿಸಿಲೊಳು
ಸ್ವರಕೆ ಸ್ವರವ ಜೋಡಿಸುವೊಲು.
ಕರುಗಳುಣಿಸುವಂತೆ ಧೇನು
ಆಗಸೆ ತೆಂಗು ಮಾವುಗಳನು
ಉಣಿಸುತಿರುವ ಬಿಸಿಲು ನನ್ನ
ಕಂಗಳಿಗೂ ಸೊರೆಬಿಡುತಿದೆ.

ಈ ಕವಿತೆಯಲ್ಲಿ ಬಿಂಬಿತವಾಗಿರುವುದು ಪುತಿನ ಅವರ ರಸನಿಷ್ಠವಾದ ಒಲವು. ಅವರ ಈ ರೋಮಾಂಚನಕ್ಕೆ ಕಾರಣವಾಗಿರುವುದು ಆ ದಿನದ 'ಶುಭ್ರನೀಲ' ಮತ್ತು 'ಹೊಂಬಿಸಿಲು'.

ಪ್ರಕೃತಿ ಕವಿಗೆ ಕೃಪಾರೂಪಿ. ನೀಲಿಮೆಯಷ್ಟೇ ಸಾಕು ಜೀವನದ ಸಾರ್ಥಕತೆಗೆ. ಅಂದಿನ ಪ್ರಕೃತಿ ಅವರಿಗೆ ಪ್ರಾಣಜ್ಯೋತಿ; ಬಿಸಿಲು ಸೂರೆಬಿಡುತ್ತಿರುವ ಧೇನು. ಈ ಬಗೆಯ ಕಲ್ಪನೆ ಪುತಿನ ಅವರ ಭಾವುಕ ಲೋಕವನ್ನು ತೆರೆಯುತ್ತದೆ. ಮಕರ ಸಂಕ್ರಾಂತಿಯ ದಿನದ ಎರಡೇ ಎರಡು ವಿಷಯಗಳು ಹೇಗೆ ಕವಿಯ ಜಿಜ್ಞಾಸೆಗೆ ಕಾರಣವಾದವು ಎಂಬುದನ್ನು ಇಲ್ಲಿ ನೋಡುತ್ತೇವೆ. ಅಂದಿನ ಪ್ರಾಕೃತಿಕ ಪಾವಿತ್ರ್ಯವನ್ನು ಹೇಳುವುದೂ ಕವಿತೆಯ ಉದ್ದೇಶದಲ್ಲಿರುವಂತಿದೆ.

ಕನ್ನಡದ ಹಿರಿಯ ಕವಿಗಳಲ್ಲಿ ಚೆನ್ನವೀರ ಕಣವಿಯವರೂ ಒಬ್ಬರು. ಅವರ 'ಸಂಕ್ರಮಣ' ಕವಿತೆ ಈ ಸಂದರ್ಭದಲ್ಲಿ ಅಗತ್ಯವಾಗಿ ಗಮನಿಸಲೇಬೇಕಾದಂಥದು. ಇದೊಂದು ಗೀತರೂಪಕ. ಬೇರೆ ಬೇರೆ ಪಾತ್ರಗಳು ಆಡುವ ಸಂಭಾಷಣೆಯ ಮುಖೇನ ಕೃತಿ ಬೆಳೆಯುತ್ತ ಹೋಗುತ್ತದೆ. ಹೀಗಾಗಿ ಕವನ ಕೃತಿಗೆ ಹಲವು ಹಂತಗಳಿದ್ದಂತಾಯಿತು. ಅವುಗಳ ಸನ್ನಿವೇಶಗಳೂ ಬೇರೆಬೇರೆಯಾಗಿವೆ. ಸಂಕ್ರಾಂತಿಯ ವಸ್ತು, ಭಾವನೆ, ಆಶಯ, ಪರಿಣಾಮಗಳೆಲ್ಲ ಕವನದಲ್ಲಿ ಮೇಳವಿಸಿವೆ. ಮೊದಲಿಗೆ ನಿವೇದಕ ಮತ್ತು ಭೂಮಿ ಹಾಡಿಕೊಂಡು ಬರುತ್ತಾರೆ:

ನಿವೇದಕ : ವಾರಕೊಮ್ಮೆ ಮಾಸದಂಥ ಹಾಸಭಾಸ ಪೃಥಿವಿಗೆ
ರಾಶಿಯಿಂದ ರಾಶಿಯೆಡೆಗೆ ಹೊರಟ ಸೂರ್ಯ ಮೈತ್ರಿಗೆ.
ತನ್ನ ಅಕ್ಷದೊಡನೆ ಸುತ್ತಿ ಭೂಮಿ ಸೂರ್ಯನತ್ತಲು
ಹಗಲು-ಇರುಳು ಅದೇ ಕಾರ್ಯ, ಅದೇ ಬೆಳಕು - ಕತ್ತಲು.

ಭೂಮಿ : ಮಾರ್ಗಶೀರ್ಷ ಮಾರ್ಗದಲ್ಲಿ ಮೈಲಿಗಲ್ಲು ದಾಟಿತು
ಪೌಷ್ಯದ ಹೊಸ ವೇಷದಲ್ಲಿ ಬೇರೆ ತಿರುವು ಮೀಟಿತು.
ವಿಷುವದಿಂದ ದೂರ ದೂರ ದಕ್ಷಿಣಕೆ ಅಯನವು,
ಸುಕರವಾಗಿ ಮಕರದೆಡೆಗೆ ಹೊರಳೆ ದೇವನಯನವು.

ನಿವೇದಕ : ಇಳೆಯು ತಲೆಯ ಬಾಗಿಸುತ್ತ ಬಂತು ರವಿಯ ಕೆಲದಲಿ
ಒಲಿದು ಒಲಿಯೆ ಬೇರೆ ಹೊಳಪು, ಬೇರೆ ಭಾವ ನೆಲದಲಿ.
ದಾಕ್ಷಿಣ್ಯದ ಮೂಕ ಪ್ರಶ್ನೆ ಉತ್ತರಕ್ಕೆ ಕಾಡಿತು:
ಉತ್ತರಾಯಣಕ್ಕೆ ತಿರುಗಿ ಸಂಕ್ರಮಣವೆ ಮೂಡಿತು.

ಸಂಕ್ರಾಂತಿಯ ಭೌಗೋಳಿಕ ಮಹತ್ವವನ್ನು ಕವಿ ಕಣವಿ ಇಲ್ಲಿ ಬಂಧುರವಾಗಿ ಚಿತ್ರಿಸಿದ್ದಾರೆ. ಭೂಮಿಯ ಪರಿಭ್ರಮಣೆ, ಸೂರ್ಯನ ಪಥಸಂಚಲನ, ಪುಷ್ಯಮಾಸದಲ್ಲಿ ಮಕರ ಸಂಕ್ರಾಂತಿಯ ಆಗಮನ, ಉತ್ತರಾಯಣದ ಕಾಲ ಮೊದಲಾದ ವಿಷಯಗಳನ್ನು ಅತ್ಯಂತ ಹಾರ್ದಿಕ ಭಾಷೆಯಲ್ಲಿ ರಚಿಸಿಕೊಡಲಾಗಿದೆ. ವಿಷಯ ಸ್ಪಷ್ಟನೆಯೊಡನೆ ಗೀತ ಮಾಧುರ್ಯವೂ ಸೇರಿ ಕೇಳಿದವರಿಗೆ ಆಸ್ವಾದ್ಯವಾಗುವಂತೆ ಮಾಡಲಾಗಿದೆ. ಎರಡನೆಯ ದೃಶ್ಯ ಸುಗ್ಗಿಯ ಕುಣಿತದ ಹರ್ಷಧ್ವನಿಯನ್ನು ಪ್ರಕಟಿಸುವಂಥದು.

ರೈತ 1 : ಆಹಾ! ಚಳಿಯು ಕಳೆದುಹೋಯ್ತು
ಬಿಸಿಲಿಗೆಲ್ಲ ಬನ್ನಿರೋ.

ರೈತ 2 : ಗೋದಿ ಬೆಳೆಸಿ ತಿನ್ನಿರೋ
ರೈತ 1 : ಕಂಬಳಿಯನು ತೆಗೆದು ಇಟ್ಟು,
ಮುಗಿಲಿಗೆ ಕೈ ಮುಗಿಯಿರೋ
ರೈತ 2 : ಹಗಲಿಗೆ ಮೈ ತೆರೆಯಿರೋ
ರೈತ 1, 2 : ಆಹಾ! ಚಳಿಯು ಕಳೆದುಹೋಯ್ತು
ಬಿಸಿಲಿಗೆಲ್ಲ ಬನ್ನಿರೋ.
ರೈತ 3 : ಸುಗ್ಗಿಯನ್ನು ಮುಗಿಸಿ ನಾವು
ಬಂದೆವಣ್ಣ ಬಯಲಿಗೆ -
ರೈತ 4 : ಒಟ್ಟಿ ಮೇವು ಬಣಿವೆಗೆ.
ರೈತ 3 : ಗೋದಿ ತಿರುಗಿ ಹುಗ್ಗಿಯಾಯ್ತು
ಕುಸುಬೆ ಬಂತು ಕೊಯಿಲಿಗೆ -
ರೈತ 4 : ಹಸಿವು ಹಬ್ಬ-ಹುಣಿವೆಗೆ.

ಇದೊಂದು ಸುಗ್ಗಿಯ ಹಾಡಿನ ರೀತಿಯದು. ಸಂಕ್ರಮಣಕ್ಕೆ ಅಂಟಿಕೊಂಡೇ ಬರುವ ಸುಗ್ಗಿಯ ಸಂಪ್ರದಾಯವನ್ನು ಗುರುತಿಸುವಂಥದು. ಇದರಲ್ಲಿ ರೈತರ ಪಾತ್ರಗಳನ್ನು ಬಳಸಿಕೊಂಡಿರುವ ವಸ್ತು ಮತ್ತು ಸಂದರ್ಭಕ್ಕೆ ಅನುಗುಣವಾಗಿಯೇ ಇದೆ. ಚಳಿ ಬಿಡುತ್ತಿರುವ ಮತ್ತು ಸುಗ್ಗಿ ಮುಗಿಯುತ್ತಿರುವ ಸೂಚನೆಗಳು ಪದ್ಯದಲ್ಲಿವೆ. ಹಬ್ಬದಲ್ಲಿ ಮಾಡುವ ಹುಗ್ಗಿಯ ಉಲ್ಲೇಖವೂ ಕವನದಲ್ಲಿದೆ. ಕವನದ ಮುಖ್ಯ ಆಶಯ ಕುಣಿತ ಮತ್ತು ಹರ್ಷ. ಒಟ್ಟಿನಲ್ಲಿ ಸುಗ್ಗಿಯ ಸಂಭ್ರಮಕ್ಕೆ ಕವಿತೆಯ ಅಭಿವ್ಯಕ್ತಿ. ಇನ್ನೊಂದು ದೃಶ್ಯದಲ್ಲಿ ಕವಿಯನ್ನೇ ಒಂದು ಪಾತ್ರ ಮಾಡಿ, ಅವನೇ ಹಾಡಿಕೊಳ್ಳುವಂತೆ ಚಿತ್ರಿಸಲಾಗಿದೆ:

ಮೂಡ ಗಾಳಿ ಎಡವುತಿರೆ
ಪಡುವ ಗಾಳಿ ತಡವುತಿರೆ
ಕುಳಿರು ಕುಳಿತು ನಡುಗುತಿರೆ
ನೋಡಿದ ರವಿಯು;

ಬಿಸಿಲು ಕಾಸಿ ಬೆಚ್ಚಗಿರೆ
ಗಿಡದ ತೊಗಟೆ ಬಿಚ್ಚುತಿರೆ
ಕುಡಿಯು ಮುಡಿಗೆ ಚಾಚುತಿರೆ
ಹಾಡಿದ ಕವಿಯು.

ಹಿಂದೆ ಹೋದ ಎಳ್ಳವಸೆ
ಹಿಂಗಾರಿಯು ತುಂಬಿ ದಿಸೆ
ಸೀಗೆಗುಂಡ ಆ ಉಣಿಸೆ
ಈಗಲು ರುಚಿಯು;

ಬನದ ಹುಣಿವೆ ತುಂಬಲಿದೆ
ಬನಶಂಕರಿ ಹಂಬಲಿದೆ

ಸಂಕ್ರಾಂತಿಯ ನಂಬಲಿದೆ
    ಇಂದಿನ ಶುಚಿಯು.

ಅಗಲಿದವರು ಕೂಡಿಕೊಂಡು
ತಮತಮಗೇ ಹಾಡಿಕೊಂಡು
ಬಂಧು ಬಳಗ ನೋಡಿಕೊಂಡು
    ಸಾಗಲಿ ಬದುಕು.

ದಕ್ಷಿಣದಿಂದುತ್ತರಕ್ಕೆ
ಪೂರ್ವದಿಂದ ಪಶ್ಚಿಮಕ್ಕೆ
ಸಂಕ್ರಮಣವು ಹಾಸು-ಹೊಕ್ಕು
    ಮೂಡಲಿ ಬೆಳಕು.

ಸಂಕ್ರಾಂತಿಯ ಭಾವ ಮತ್ತು ಪರಿಣಾಮವನ್ನು ಅತ್ಯಂತ ಭಾವಪೂರ್ಣವಾಗಿ ಕೊಡಲಾಗಿದೆ. ಒಟ್ಟು ರೂಪಕದ ಸಂದರ್ಭದಲ್ಲಿ ಕವಿ ಮಧ್ಯೆ ಪ್ರವೇಶಿಸಿ ವ್ಯಾಖ್ಯಾನ ನೀಡುತ್ತಿರುವಂತಿದೆ. ಆದರೆ 'ಕವಿ' ಇಲ್ಲಿ ಒಂದು ಪಾತ್ರವೂ ಆಗಿರುವುದರಿಂದ ಸಂಕ್ರಮಣದ ಸಂದೇಶವನ್ನು ಬಿತ್ತಲು ಅವನನ್ನು ಬಳಸಿಕೊಂಡಿರುವುದು ಸ್ಪಷ್ಟ. ಸಂಕ್ರಮಣದಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಗಾಳಿ ಬೀಸುವ ದಿಕ್ಕು, ಚಳಿ, ಉದುರುತ್ತಿರುವ ಎಲೆ, ಚಿಗುರೊಡೆಯುತ್ತಿರುವ ಮರ, ಸಂಕ್ರಾಂತಿಯ ನಂಬಿಕೆ ಮೊದಲಾದ ನೋಟಗಳಿವೆ. ಜೊತೆಗೆ, ಮಾನವ ಸೌಹಾರ್ದದ ಸುಖ ಸಂತೋಷದ ಕನಸನ್ನು ಕೂಡ ಕವನ ಹೊತ್ತಿದೆ. ಕೊನೆಯಲ್ಲಿ ಎಳ್ಳು-ಬೆಲ್ಲ ಬೀರುವ ಸವಿಯ ಸಂಭ್ರಮದೊಡನೆ ಕವಿತೆ ಸಮಾಪ್ತಿಗೊಳ್ಳುವುದು. ಇದೂ ಕೂಡ ಹೆಂಗಸರು-ಗಂಡಸರ ಸಂಭಾಷಣೆಯ ಮೂಲಕ ನೆರವೇರುವುದನ್ನು ನೋಡುತ್ತೇವೆ:

ಹೆಂಗಸರು : ಹಳ್ಳೀಗೆ ದಿಳ್ಳೀಗೆ ಬಳ್ಳಿ ಬಳ್ಳೀಯಾಗಿ
    ನೇಹದ ನೆಂಟನು ಸುರಿದವರು
ಹಸುರೀಗೆ ಕುಸುರೀಗೆ ಹಲವಾರು ಹೆಸರಿsಗೆ
    ಪ್ರೀತಿsಯ ಮಳೆಯನು ಕರೆದವರು.
ಎಳ್ಳು-ಬೆಲ್ಲಾ ಕೊಳ್ಳಿ, ಒಳ್ಳೊಳ್ಳೆ ಮಾತಾಡಿ
    ಸುಳ್ಳಿsಗೆ ಸೊಟರಿsಗೆ ಕಿವಿಗೊಡದೆ.
ಕಳ್ಳು-ಬಳ್ಳೀಗೊಗೆದ ಹೂವಾಗಿ ಬಾಳೋಣ
    ಜಳ್ಳsನು ಗಾಳಿಗೆ ತೂರೋಣ.

ಗಂಡಸರು : ತಮಿಳಿನ ಪೊಂಗಲ, ನಾಡಿsಗೆ ಮಂಗಲ
    ಹಾಲುs ಬೆಲ್ಲದಕ್ಕಿ ಪಾಯಸವು,
ಸಕ್ಕದವಾದರು ಸಂಕ್ರಾಂತಿ ಕನ್ನಡ-
    ಹತ್ತು ದೀನಸಿನಡಿಗೆ ಹೊಸ ರುಚಿಯು.

ಬಾಲ್ಯದ ಚಿಗುಳೀಯ, ಹರೆಯದ ಮರೆಯದ
ಒನಪು ಒಯ್ಯಾರದ ಸಂಗತಿಯ
ನೆನೆಯುತ ನಲಿಯೋಣ, ಹೊಸತೆಲ್ಲ ಕಲಿಯೋಣ
ಸಂಸಾರದೊಗಟನ್ನು ಒಡೆಯೋಣ.

ಸಂಕ್ರಾಂತಿ ಹಬ್ಬದ ಎಳ್ಳುಬೀರುವ ನಗರ ಸಂಪ್ರದಾಯವನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಅದೇ ಆಶಯ ಇಲ್ಲಿಯೂ ಮುಖ್ಯ ವೇದಿಕೆಯಲ್ಲಿದೆ. ಸತ್ಯವಾದುದನ್ನು ಸ್ವೀಕರಿಸಿ ಅಸತ್ಯವಾದುದನ್ನು ನಿರಾಕರಿಸಿ, ಬದುಕಿನ ರಹಸ್ಯವನ್ನು ಭೇದಿಸುವತ್ತ ಕವಿ ಕರೆಕೊಡುತ್ತಾರೆ. ಸತ್ತ್ವವಿರುವುದು ಬದುಕಬೇಕು; ಪ್ರೀತಿ ಬದುಕಿನ ತತ್ತ್ವವಾಗಬೇಕು – ಇದು ಕವಿಯ ಹಂಬಲ. ಒಟ್ಟಾರೆ ಮಾನವೀಯವಾದುದರ ಕಡೆಗೆ ಕವಿ ಬೆಳಕು ಚೆಲ್ಲುತ್ತಾರೆ.

ಕವಿಯ ಈ ಭಾವ ಎಲ್ಲರ ಮನದಲ್ಲಿ ಮೂಡಲಿ. ಸಂಕ್ರಾಂತಿ ಒಸಗೆಯ ಸಾರಲಿ. ಮಾನವರ ನಡುವಣ ಕಂದರಗಳಲಿ ಸೌಹಾರ್ದದ ಸೇತುವೆಗಳೇಳಲಿ. ನಾಡು ಸಮೃದ್ಧಿಯತ್ತ ದಾಪುಗಾಲು ಹಾಕಲಿ. ಸಂಕ್ರಾಂತಿಯಂದು ಸೂರ್ಯನು ಉತ್ತರಕ್ಕೆ ಚಲಿಸುವಂತೆ, ನಾವು ನಮ್ಮ ಮುಂದಿರುವ ಸಮಸ್ಯೆಗಳಿಗೆ ಉತ್ತರ ಹುಡುಕುವತ್ತ ಚಲಿಸುವಂತಾಗಲಿ. ಸರ್ವರಿಗೂ ಸಂಕ್ರಾಂತಿಯು ಶುಭಗಳನ್ನೆ ತರಲಿ.

□

ಲೋಕದಲ್ಲಿ ಜಡವಸ್ತುಗಳಿಗಿಂತಲೂ ಪ್ರಾಣಿಗಳು ಶ್ರೇಷ್ಠ. ಅವುಗಳಲ್ಲಿ ಬುದ್ಧಿಯನ್ನು ಉಪಯೋಗಿಸುವ ಇರುವೆ, ನರಿ ಮೊದಲಾದುವುಗಳು ಉತ್ತಮ. ಬುದ್ಧಿಜೀವಿಗಳಲ್ಲಿ ಮಾನವ, ಮಾನವರಲ್ಲಿ ಒಳ್ಳೆಯವರು, ಒಳ್ಳೆಯವರಲ್ಲಿ ವಿದ್ಯಾವಂತರು, ವಿದ್ಯಾವಂತರಲ್ಲಿ ಪರಿಣತರು, ಪರಿಣತರಲ್ಲಿ ಆಚರಿಸುವವರು, ಆಚರಿಸುವವರಲ್ಲಿ ಬ್ರಹ್ಮಜ್ಞಾನಿಗಳು ಶ್ರೇಷ್ಠ.

**ಮನುಸ್ಮೃತಿ**

ಭಿಕ್ಷಾನ್ನವೇ ಆಹಾರ. ಆ ನೀರಸವಾದ ಆಹಾರವೂ ಒಂದು ಹೊತ್ತು. ಭೂಮಿಯೇ ಹಾಸಿಗೆ. ತನ್ನ ದೇಹದ ಅಂಗಾಂಗಗಳೇ ಸೇವಕರು. ನೂರು ಚೂರುಗಳಿಂದ ಕೂಡಿದ ಹಳೆಯ ಕಂತೆಯೇ ಬಟ್ಟೆ. ಅಯ್ಯೋ! ಹಾಗಾದರೂ ಮನಸ್ಸು ವಿಷಯಸುಖಗಳ ಆಸೆಯನ್ನು ಬಿಡುವುದಿಲ್ಲ.

**ವೈರಾಗ್ಯಶತಕ**

# ಅಲ್ಲಮಪ್ರಭುದೇವರ ವಚನಗಳ ಟೀಕು

ಡಾ. ಎಫ್.ಟಿ. ಹಳ್ಳಿಕೇರಿ

ಶರಣ ಪರಂಪರೆಯಲ್ಲಿ ಅಲ್ಲಮಪ್ರಭುದೇವನ ಹೆಸರು ಬಹು ದೊಡ್ಡದು. ಬಸವಣ್ಣನೊಡನೆ ಹೆಗಲಿಗೆ ಹೆಗಲು ಕೊಟ್ಟು ಅನುಭವಮಂಟಪದ ಅಧ್ಯಕ್ಷನಾಗಿ ವೈಚಾರಿಕ ಕ್ರಾಂತಿಗೆ ಒಂದು ನಿರ್ಣಾಯಕ ಸ್ವರೂಪ ಕೊಡುವಲ್ಲಿ ಈತ ವಹಿಸಿದ ಪಾತ್ರ ತುಂಬಾ ಮಹತ್ವದ್ದು. ಆದ್ದರಿಂದಲೇ ಈತನನ್ನು ಅನುಭಾವಿ, ವ್ಯೋಮಮೂರುತಿ ಎಂಬಿತ್ಯಾದಿಯಾಗಿ ಕರೆಯಲಾಗಿದೆ. ಇಂಥ ಮಹಾನುಭಾವನ ವ್ಯಕ್ತಿತ್ವ ಮತ್ತು ಕವಿತ್ವಕ್ಕೆ ಮಾರುಹೋದ ಕನ್ನಡದ ಅನೇಕ ಕವಿಗಳು ಈತನನ್ನು ಅಭ್ಯಸಿಸಿದ ವಿಧಾನ ಮೂರು ತೆರನಾಗಿದೆ: 1. ವಚನಗಳಲ್ಲಿ ಕಂಡುಬಂದ ಸೂಚನೆಗಳನ್ನಾಧರಿಸಿ ಅಲ್ಲಮನ ಜೀವನದ ಘಟನೆಗಳನ್ನು ಚಿತ್ರಿಸಿರುವುದು. ಉದಾ: ಹರಿಹರನ ಪ್ರಭುದೇವರ ರಗಳೆ, ಚಾಮರಸನ ಪ್ರಭುಲಿಂಗಲೀಲೆ, ಯಳಂದೂರು ಹರೀಶ್ವರನ ಪ್ರಭುದೇವರ ಪುರಾಣ, ರಾಚಪ್ಪಯ್ಯನ ಪ್ರಭುಚರಿತೆ ಇತ್ಯಾದಿ. 2. ಇತರ ಶರಣರ ವಚನಗಳೊಂದಿಗೆ ಪ್ರಭುದೇವರ ವಚನಗಳನ್ನು ಕ್ರಮಾನುಗತವಾಗಿ ಜೋಡಿಸಿ ಸಂಪಾದಿಸಿ ಸಂಕಲಿಸಿರುವುದು. ಉದಾ: ಮಹಲಿಂಗದೇವನ ಏಕೋತ್ತರ ಶತಸ್ಥಲ, ಶೂನ್ಯಸಂಪಾದನೆ ಇತ್ಯಾದಿ. 3. ಪ್ರಭುದೇವನ ವಚನಗಳಿಗೆ ಟೀಕೆ ಟಿಪ್ಪಣಿ ಮತ್ತು ವ್ಯಾಖ್ಯಾನಗಳನ್ನು ಬರೆದಿರುವುದು. ಉದಾ: ಮಹಾಲಿಂಗದೇವನ ಅಲ್ಲಮಪ್ರಭುವಿನ ಟೀಕಿನ ವಚನಗಳು, ಬಸವಣ್ಣನವರ ಟೀಕಿನ ವಚನಗಳು, ಕಲ್ಲುಮಠದ ಪ್ರಭುದೇವನ ಲಿಂಗಲೀಲಾವಿಲಾಸ ಚಾರಿತ್ರ ಇತ್ಯಾದಿ. ಇವುಗಳಲ್ಲಿ ಮೂರನೆಯ ವಿಧಾನಕ್ಕೆ ಸಂಬಂಧಪಟ್ಟವುಗಳಾಗಿವೆ, ಅಲ್ಲಮಪ್ರಭುದೇವರ ಟೀಕಿನ ವಚನಗಳು. ಈವರೆಗೆ ಮಹಲಿಂಗದೇವ, ಕುಮಾರ ಬಂಕನಾಥ, ಕಲ್ಲುಮಠದ ಪ್ರಭುದೇವ, ಸಿಂಗಳದ ಸಿದ್ಧಬಸವರಾಜ ಮತ್ತು ಚನ್ನವೀರಾಚಾರ್ಯ ಎಂಬ ಐವರು ಮಾತ್ರ ಅಲ್ಲಮನ ವಚನಗಳಿಗೆ ಟೀಕೆ ಬರೆದುದು ಗೊತ್ತಾಗುತ್ತದೆ.

## 1. ಕನ್ನಡದಲ್ಲಿ ಟೀಕಾ ಸಾಹಿತ್ಯ

ವಿಮರ್ಶಾ ವರ್ಗಕ್ಕೆ ಸೇರುವ ಟೀಕಾ ಸಾಹಿತ್ಯವು ಒಂದು ಕೃತಿಯ ಅರ್ಥ, ಭಾವ, ಉದ್ದೇಶ ಇತ್ಯಾದಿಗಳನ್ನು ತೆರೆದು ತೋರಿಸುವ ಒಂದು ವಿಶಿಷ್ಟ ಪ್ರಕಾರ. ಟೀಕು ಪದಕ್ಕೆ ಪರ್ಯಾಯವಾಗಿ ಟಿಪ್ಪಣಿ, ವ್ಯಾಖ್ಯಾನ, ಭಾಷ್ಯ, ವಿವರಣೆ, ತಾತ್ಪರ್ಯ ನಿರ್ಣಯ ಎಂದು ನಾನಾ ರೀತಿಯಲ್ಲಿ ಕರೆಯಲಾಗುತ್ತಿದೆ. ಕನ್ನಡದಲ್ಲಿ ಟೀಕು ಅಥವಾ ಟೀಕೆ ಎಂಬ ಪದಗಳೇ ಅಧಿಕವಾಗಿ ಬಳಕೆಗೊಂಡಿವೆ. ಸಾಹಿತ್ಯ ಮತ್ತು ಧರ್ಮಪ್ರಸಾರ ಈ ಸಾಹಿತ್ಯದ ಮುಖ್ಯ ಉದ್ದೇಶ.

ಈ ಉದ್ದೇಶಕ್ಕನುಗುಣವಾಗಿ ಕನ್ನಡದಲ್ಲಿ ಈ ಸಾಹಿತ್ಯ ಪ್ರಾಚೀನ ಕಾಲದಿಂದಲೂ ರಚನೆಗೊಳ್ಳುತ್ತ ಬಂದಿದೆ.[1] ಎಂ.ಎಂ. ಕಲಬುರ್ಗಿ ಅವರು ಹೇಳುವಂತೆ "ವೀರಶೈವರು ಸಾಹಿತ್ಯ ಕೃಷಿಗೆ ಕೈಹಾಕಿದ ಪ್ರಥಮದಲ್ಲಿ ಅಂದರೆ 12ನೆಯ ಶತಮಾನದಲ್ಲಿಯೇ ಸೃಜನಸಾಹಿತ್ಯವನ್ನು ಹಿಂಬಾಲಿಸಿ ಟೀಕಾಸಾಹಿತ್ಯವೂ ಹುಟ್ಟಿರುವ ಸಾಧ್ಯತೆಯಿದೆ. ಶರಣರ ವಚನಗಳನ್ನು, ಅದರಲ್ಲಿಯೂ ಬೆಡಗಿನ ವಚನಗಳನ್ನು ಸಾಮಾನ್ಯರಿಗೆ ಅರ್ಥೈಸಿಕೊಡುವ ಪ್ರಯತ್ನಗಳು ಅಂದೇ ನಡೆದಿರುವುದಕ್ಕೆ 'ಹತ್ತು ಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು ಮುಟ್ಟುವ ತೆರನನರಿಯದನ್ನಕ್ಕ' ಮೊದಲಾದ ವಚನಗಳು ಸೂಚನೆ ನೀಡುತ್ತವೆ. ಹೀಗೆ ವಚನಗಳಿಗೆ ಟೀಕೆ ಬರೆಯುವ ಸಂಪ್ರದಾಯ ಮುಂದುವರಿದಂತೆ, ತರುವಾಯದಲ್ಲಿ ವೀರಶೈವ ಕಾವ್ಯ, ಶಾಸ್ತ್ರಗಳಿಗೂ ಟೀಕೆ ಬರೆಯುವುದು ಬೆಳೆದುಬಂದಿತು. ಹೀಗಾಗಿ ವೀರಶೈವ ಟೀಕಾಸಾಹಿತ್ಯವನ್ನು ವಚನಟೀಕೆ, ಕಾವ್ಯಟೀಕೆ, ಶಾಸ್ತ್ರಟೀಕೆಯೆಂದು ವರ್ಗೀಕರಿಸಬಹುದು."[2] ಈ ಹಿನ್ನೆಲೆಯಲ್ಲಿ ಬಸವಣ್ಣನವರ ಟೀಕಿನ ವಚನ, ಪ್ರಭುದೇವರ ಟೀಕಿನ ವಚನ, ಬೆಡಗಿನ ವಚನ ಟೀಕೆ, ಸೃಷ್ಟಿಯ ವಚನಗಳ ಟೀಕು (ವಚನ ಟೀಕೆ), ರಾಜಶೇಖರ ವಿಳಾಸದ ವ್ಯಾಖ್ಯಾನ, ಗಣಭಾಷ್ಯ ರತ್ನಮಾಲೆ ಟೀಕು, ಭಾವಚಿಂತಾರತ್ನ ಟೀಕು, ಮನೋವಿಜಯ ವ್ಯಾಖ್ಯಾನ, ಶತಕತ್ರಯ ವ್ಯಾಖ್ಯಾನ (ಕಾವ್ಯಟೀಕೆ), ಪದಮಂತ್ರಗೋಪ್ಯ ಟೀಕು, ಕರಣಹಸಿಗೆ ಟೀಕು, ಮಿಶ್ರಾರ್ಪಣ ಟೀಕು, ಪಂಚಸ್ತೋತ್ರ ಟೀಕು, ಕೈವಲ್ಯಪದ್ಧತಿ ಟೀಕು (ಶಾಸ್ತ್ರಟೀಕೆ) ಹೀಗೆ ನೂರಾರು ಕೃತಿಗಳಿಗೆ ಟೀಕು ವ್ಯಾಖ್ಯಾನಗಳನ್ನು ಬರೆದುದರ ಪರಿಣಾಮ ಟೀಕಾಸಾಹಿತ್ಯ ಎಂಬ ಪರಂಪರೆಯೇ ಕನ್ನಡದಲ್ಲಿ ಬೆಳೆದುಬಂದಿದೆ. ಈ ಪರಂಪರೆಯಲ್ಲಿ ಪುಲಿಗೆರೆಯ ಮಹಾಲಿಂಗದೇವನು ಪ್ರಭುದೇವನ ವಚನಗಳಿಗೆ ಟೀಕೆ ಬರೆಯುವ ಮೂಲಕವೇ ವೀರಶೈವ ಟೀಕಾಸಾಹಿತ್ಯಕ್ಕೆ ಶ್ರೀಕಾರ ಹಾಕಿದ್ದಾನೆನ್ನಬಹುದು.

## 2. ಅಲ್ಲಮಪ್ರಭುವಿನ ಟೀಕಿನ ವಚನಗಳು

ಇಲ್ಲಿಯವರೆಗಿನ ಶೋಧದಿಂದ ಅಲ್ಲಮನ ವಚನಗಳ ಸಂಖ್ಯೆ 1645ಕ್ಕೆ ಏರಿದೆ. ಇವುಗಳಲ್ಲಿ 694 ವಚನಗಳನ್ನು ಷಟ್ಸ್ಥಲಾನುಕ್ರಮದಲ್ಲಿ ಜೋಡಿಸಲಾಗಿದೆ. ಈ ಷಟ್ಸ್ಥಲ ವಚನಗಳಿಗೆ ಮಹಾಲಿಂಗದೇವ ಮತ್ತು ಕುಮಾರ ಬಂಕನಾಥ ಎಂಬಿಬ್ಬರು ಟೀಕು ಬರೆದಿದ್ದಾರೆ. ಇನ್ನು ಕಲ್ಲುಮಠದ ಪ್ರಭುದೇವ, ಸಿಂಗಳದ ಸಿದ್ಧಬಸವರಾಜದೇವರು ಹಾಗೂ ಚನ್ನವೀರಾಚಾರ್ಯರು ಪ್ರಭುದೇವರ ಕೆಲವು ವಚನಗಳನ್ನು ವ್ಯಾಖ್ಯಾನಿಸಿದವರು. ಹೀಗೆ ಈ ಐವರು ಟೀಕಾಕಾರರ ಇತಿವೃತ್ತ, ವಿಚಾರ ಮತ್ತು ಅವರ ಟೀಕಾಕೃತಿಗಳ ವಿಶೇಷತೆಯನ್ನು ತಿಳಿದುಕೊಳ್ಳುವ ಪ್ರಯತ್ನ ಇಲ್ಲಿದೆ.

### 2.1 ಮಹಾಲಿಂಗದೇವ

ಈತ ತನ್ನ ಸ್ಥಳ, ಆರಾಧ್ಯದೈವ, ಗುರುಪರಂಪರೆ ಮುಂತಾದ ಕೆಲ ಸಂಗತಿಗಳನ್ನು ತನ್ನ ಕೃತಿಗಳಲ್ಲಿ ಹೇಳಿಕೊಂಡಿದ್ದಾನೆ. 'ಏಕೋತ್ತರ ಶತಸ್ಥಲ'ದ ಆರಂಭದಲ್ಲಿ ಬರುವ ಉಲ್ಲೇಖ

ಹೀಗಿದೆ: "ಸ್ವಸ್ತಿ ಸಮಸ್ತಭುವನಜನ ತಿಮಿರ ಹರಣ ಕಾರಣ ಸ್ವರೂಪರುಂ; ಭಕ್ತದೇಹಿಕದೇವರುಂ, ಭಕ್ತಿವತ್ಸಲರುಂ; ಸರ್ವಾಂಗ ಪ್ರಾಣಲಿಂಗ ಮೂರ್ತಿವಿಲಾಸರುಂ, ಪುಲಿಗೆರೆಯ ಪುರವರಾಧೀಶ್ವರರುಂ, ಅಪೂರ್ವ ಸ್ವಯಂಭು ಪ್ರಸನ್ನ ಚೆನ್ನ ದಕ್ಷಿಣ ಶ್ರೀ ಸೋಮನಾಥದೇವರ ದಿವ್ಯಶ್ರೀ ಪಾದಪದ್ಮಾರಾಧಕರುಂ ತ್ರಿಕಾಂಡನಿಷ್ಠರುಂ; ಋಗ್ಯಜುಸ್ಸಾಮಾಥರ್ವಣಾಂತರ್ಗತ ಪ್ರತಿಪಾದ್ಯ ಪ್ರಮುಖರುಂ; ಶ್ರುತಿಸ್ಮೃತಿ ಪುರಾಣಾಗಮಂ ಇತಿಹಾಸಾದಿ ನಾನಾ ಶಾಸ್ತ್ರಕೋವಿದರುಂ; ಪರಮವೀರಶೈವಾಗಮಾಚಾರ್ಯರುಂ; ಸಕಲಪ್ರಸಾದ ಪಂಚಾಕ್ಷರಿ ಮಂತ್ರಸಿದ್ಧರುಂ; ನಿತ್ಯಪರಿಪೂರ್ಣ ಸಚ್ಚಿದಾನಂದ ನಿರಂಜನ ಪರಂಜ್ಯೋತಿಸ್ವರೂಪರುಮಪ್ಪ ಪರಮ ಗುರುಮೂರ್ತಿ ಜಗದಾರಾಧ್ಯರುಮಪ್ಪ ಮಹಲಿಂಗದೇವನ...."[3] ಈ ಉದ್ಧರಣೆಯಿಂದ ಮಹಲಿಂಗದೇವನ ಸ್ಥಳ ದಕ್ಷಿಣ ಕಾಶಿಯೆಂದು ಹೆಸರಾದ ಪುಲಿಗೆರೆ ಅಂದರೆ ಇಂದಿನ ಲಕ್ಷ್ಮೇಶ್ವರ. ಅಲ್ಲಿನ ಸ್ವಯಂಭು ಸೋಮನಾಥ ಆತನ ಆರಾಧ್ಯದೈವ. ಅಲ್ಲದೇ ಆತ ವೇದಶಾಸ್ತ್ರಾಗಮಕೋವಿದ, ವೀರಶೈವಾಗಮಾಚಾರ್ಯನಾಗಿದ್ದು, ನಿರಂಜನಸ್ವರೂಪರಾದ ಮಹಾಸ್ವಾಮಿಯಾಗಿದ್ದನೆಂಬ ಸಂಗತಿಗಳು ತಿಳಿದುಬರುತ್ತವೆ.

ಇನ್ನೂ ಮುಂದುವರೆದು ಪರಶಿವನಿಂದ ಆರಂಭಿಸಿ ತನ್ನ ಪ್ರಶಿಷ್ಯನಾದ ಜಕ್ಕಣ್ಣನವರೆಗೆ 22 ಜನರ ಗುರುಪರಂಪರೆಯನ್ನು ಈತ ಹೇಳಿಕೊಂಡಿದ್ದಾನೆ. ಈ 22 ಜನರಲ್ಲಿ ಮಹಾಲಿಂಗದೇವ 20ನೆಯವನಾಗಿದ್ದಾನೆ. ಇಲ್ಲಿ ಉಲ್ಲೇಖಿತರಾದ ಗುರುಗಳಲ್ಲಿ ಬಸವಾದಿ ಶಿವಶರಣರ ಸಮಕಾಲೀನ ಒಬ್ಬ ವಚನಕಾರನಾದ ಉರಿಲಿಂಗ ಪೆದ್ದಣ್ಣ, ಹಾಗೆಯೇ ಮಹಾಲಿಂಗನ ತರುವಾಯ ಬರುವ ಕುಮಾರ ಬಂಕನಾಥ ಈತನ ಶಿಷ್ಯ. ಈ ಬಂಕನಾಥನ ದಿವ್ಯಜ್ಞಾನಾನಂದ ಕರಕಮಲದಲ್ಲಿ ಉದಯವಾದ ಶಿಷ್ಯನೇ ಜಕ್ಕಣ್ಣ. ಈತ ಭಕ್ತಿಭಂಡಾರಿಯಾಗಿದ್ದು ಪ್ರೌಢದೇವರಾಯನಲ್ಲಿ ನಿಷ್ಠಾವಂತ ಮಂತ್ರಿಯೂ ಆಗಿದ್ದ. ಹೀಗಾಗಿ ಈ ಮೂವರು ಪ್ರೌಢದೇವರಾಯನ ಆಳ್ವಿಕೆಯಲ್ಲಿದ್ದರೆಂದು ಹೇಳಲವಕಾಶವಿದೆ. ಆದ್ದರಿಂದ ಮಹಾಲಿಂಗದೇವನ ಕಾಲ ಕ್ರಿ.ಶ. ಸು. 1430. ಅಲ್ಲದೇ ಕುಮಾರ ಬಂಕನಾಥ ಮತ್ತು ಜಕ್ಕಣಾರ್ಯ ಈ ಉಭಯತರು ಮಹಾಲಿಂಗದೇವನಲ್ಲಿ ಅತ್ಯಂತ ಶ್ರದ್ಧಾಭಕ್ತಿಯಿಂದಿರುತ್ತಿದ್ದರೆಂಬ ಸಂಗತಿಗಳು ಗಮನಿಸುವಂಥವುಗಳಾಗಿವೆ. ಜಕ್ಕಣಾರ್ಯನ ಬಿನ್ನಹದ ಮೇರೆಗೆ ಮಹಾಲಿಂಗದೇವ ಏಕೋತ್ತರ ಶತಸ್ಥಲವನ್ನು ರಚಿಸಿದ್ದರೆ, ಈತನಿಂದ ಪ್ರೇರಿತನಾಗಿ ನೂರೊಂದು ಸ್ಥಲ ಕೃತಿಯನ್ನು ಜಕ್ಕಣಾರ್ಯ ಬರೆದಿರುವನು.

ವೀರಶೈವ ತತ್ವಸಿದ್ಧಾಂತದಲ್ಲಿ ಪರಿಣತನೂ, ವಚನಾಗಮವೇದ್ಯನೂ ಮತ್ತು ಶ್ರೇಷ್ಠ ಅನುಭಾವಿಯೂ ಆದ ಮಹಾಲಿಂಗದೇವ ಏಕೋತ್ತರ ಶತಸ್ಥಲ, ಸೂಕ್ಷ್ಮಮಿಶ್ರ ಷಟ್ಸ್ಥಲ ಹಾಗೂ ಪ್ರಭುದೇವರ ಷಟ್ಸ್ಥಲ ವಚನದ ಟೀಕೆ ಹೀಗೆ ಮೂರು ಕೃತಿಗಳನ್ನು ಸಂಕಲಿಸಿದ್ದಾನೆ. ಈ ದೃಷ್ಟಿಯಿಂದ ಸ್ಥಲಕಟ್ಟು ಸಾಹಿತ್ಯ ರಚನೆಗೆ ಈತ ಮೊದಲಿಗನಾದಂತೆ ಪ್ರಭುದೇವನ ವಚನಗಳಿಗೆ ಟೀಕೆ ಬರೆಯುವುದರ ಮೂಲಕ ವೀರಶೈವ ಟೀಕಾಸಾಹಿತ್ಯಕ್ಕೆ ಶ್ರೀಕಾರ

ಹಾಕಿದ್ದಾನೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅಷ್ಟೇ ಏಕೆ ಮಿಶ್ರಸ್ಥಲ ಅಂದರೆ 36 ಸ್ಥಲಗಳನ್ನು ಪ್ರಥಮ ಬಾರಿಗೆ ಸಂಯೋಜಿಸಿ ಕಾರ್ಯರೂಪಕ್ಕೆ ತಂದ ಶ್ರೇಯಸ್ಸೂ ಈತನಿಗೆ ಸಲ್ಲುತ್ತದೆ.

ಪ್ರಭುದೇವರ ಷಟ್‌ಸ್ಥಲಗಳಿಗೆ ಸಂಬಂಧಿಸಿದ 694 ವಚನಗಳಿಗೆ ಟೀಕು ಬರೆದ ಮಹಾಲಿಂಗದೇವ ಆರಂಭದಲ್ಲಿ ತನ್ನ ಸ್ಥಳ, ಆರಾಧ್ಯದೈವ, ಗುರುಪರಂಪರೆ ಇತ್ಯಾದಿ ವಿವರಗಳನ್ನು ಗದ್ಯದಲ್ಲಿ ಹೇಳಿಕೊಂಡಿದ್ದಾನೆ. ಈ ಭಾಗ ಏಕೋತ್ತರ ಶತಸ್ಥಲದಲ್ಲಿ ಉಲ್ಲೇಖವಾದ ರೀತಿಯಲ್ಲಿದೆ. ಕೊನೆಯಲ್ಲಿ ".....ಮಹಾಲಿಂಗದೇವರು ತಮ್ಮ ದಿವ್ಯಜ್ಞಾನಾನಂದ ಸಿದ್ಧವರಪ್ರಸನ್ನ ಪ್ರಸಾದವನು ನಿಜ ತಚ್ಛಿಷ್ಯ ಭಕ್ತಿಭಂಡಾರಿ ಜಕ್ಕಣಾರ್ಯಂಗೆ ಸತ್ಪ್ರೇಮಮಹಾನುಭಾವ ಸಂಬೋಧ ಸಂಬಂಧನಿರೂಪಣಕಾರಣಾರ್ಥಂ ವಿರಚಿತಮಪ್ಪ ಪ್ರಭುದೇವರ ಷಡುಸ್ಥಲದೊಳು ಐಕ್ಯವರ್ಗಂ ಷಷ್ಠಃ ಪರಿಚ್ಛೇದಃ ಸಮಾಪ್ತಃ"[4] ಎಂದಿದೆ. ಈ ಮಾತನ್ನು ಅವಲೋಕಿಸಿದರೆ ತನ್ನ ಪ್ರಶಿಷ್ಯನಾದ ಭಕ್ತಿಭಂಡಾರಿ ಜಕ್ಕಣಾರ್ಯನಿಗೆ ಈ ಕೃತಿಯನ್ನು ಪ್ರೀತಿಯಿಂದ ಬೋಧಿಸಿದನೆಂದು ಗೊತ್ತಾಗುತ್ತದೆ.

694 ವಚನಗಳನ್ನು ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಮಾಯಾವಿಲಾಸ ವಿಡಂಬನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಭಕ್ತಸ್ಥಲ, ಮಾಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ ಮತ್ತು ಐಕ್ಯಸ್ಥಲಗಳಲ್ಲಿ ವಿಂಗಡಿಸಿದ್ದಾನೆ. ಪ್ರಾಣಲಿಂಗಿ ಮತ್ತು ಶರಣಸ್ಥಲಗಳೆರಡರಲ್ಲಿ 300 ವಚನಗಳಿರುವುದು ವಿಶೇಷವಾಗಿದೆ. ಪ್ರತಿಯೊಂದು ಸ್ಥಲದ ಆರಂಭದಲ್ಲಿ ಸೂತ್ರ ನಿರ್ದೇಶನವನ್ನು ಹೇಳಿದ್ದಾನೆ. ಉದಾ: ಪಿಂಡಜ್ಞಾನಸ್ಥಲದ ಆರಂಭದಲ್ಲಿ ಬರುವ ಸೂತ್ರ ನಿರ್ದೇಶನ ಹೀಗಿದೆ: "ಇಂತಪ್ಪ ಮಹತ್ ಪಿಂಡಸ್ಥಲವು ತನ್ನ ಲೀಲೆಯಿಂ ತನ್ನೊಳಡಗಿದ ಸಕಳನಿಃಕಳಾತ್ಮ ತತ್ವಂಗಳನುಂಟುಮಾಡಿ ತೋರಬೇಕೆಂದು ಇಚ್ಛೈಸಲು ಅಲ್ಲಿ ಜ್ಞಾನೋದಯವಾಗಿತ್ತಾಗಿ ಮುಂದೆ ಪಿಂಡಜ್ಞಾನಸ್ಥಲವಾದುದು."[5] ಇಂಥ ಸೂತ್ರ ನಿರ್ದೇಶನಗಳು ಎಲ್ಲ ಸ್ಥಲಗಳ ಆದಿಯಲ್ಲಿ ಉಲ್ಲೇಖಗೊಂಡಿವೆ. ನಂತರದಲ್ಲಿ ವಚನ, ಆ ವಚನಕ್ಕೆ ಟೀಕುವನ್ನು ಮಹಾಲಿಂಗದೇವ ಬರೆದು ಅಳವಡಿಸಿದ್ದಾನೆ. ಕೆಲವು ವಚನಗಳಿಗೆ ತುಂಬಾ ವಿಸ್ತಾರವಾಗಿಯೂ, ಇನ್ನು ಕೆಲವು ವಚನಗಳಿಗೆ ಸಂಕ್ಷಿಪ್ತವಾಗಿಯೂ ಈತ ಟೀಕುಗಳನ್ನು ಬರೆದಿರುವನು. ನಿದರ್ಶನಕ್ಕಾಗಿ ಒಂದು ವಚನದ ಟೀಕುವನ್ನು ಈಗ ಪರಿಶೀಲಿಸಬಹುದು.

> ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದೊಡಾಗಲಿ
> ಮಹಾಪ್ರಸಾದವೆಂದೆನಯ್ಯ
> ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದೊಡಾಗಲಿ
> ಮಹಾಪ್ರಸಾದವೆಂದೆನಯ್ಯ
> ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದೊಡಾಗಲಿ
> ಮಹಾಪ್ರಸಾದವೆಂದೆನಯ್ಯ

ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದೊಡಾಗಲಿ
ಮಹಾಪ್ರಸಾದವೆಂದೆನಯ್ಯ
ಗುಹೇಶ್ವರ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು.

ಇದು ಅಲ್ಲಮನ ಜನಪ್ರಿಯ ವಚನ. ಇದಕ್ಕೆ ಮಹಾಲಿಂಗದೇವ ಬರೆದ ಟೀಕು ಹೀಗಿದೆ : "ಸಕಲ ಕರ್ಮಂಗಳಳಿದುಳಿದ ಶೇಷನೆಂಬ ಶಿಷ್ಯನು ಗುರುಕರುಣವ ಹಡದ ಪರಿ ಎಂತೆಂದೊಡೆ ಪ್ರಥಮದಲ್ಲಿ ತನ್ನ ತಾನೆಚ್ಚತ್ತು ಸಂಸಾರದ ಘಾತಿಯಲ್ಲಿ ಸಿಕ್ಕಿ ನೊಂದೆನಲ್ಲ ಎಂದು ಉಪತಾಪ ಹುಟ್ಟಿ ತನ್ನ ತಾ ಬೋಧಿಸಿಕೊಳ್ಳುತ್ತಿರಲು ಅದು – ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದೊಡಾಗಲಿ ಮಹಾಪ್ರಸಾದವೆಂದೆನಯ್ಯ ಎಂಬ ಶಬ್ದಕ್ಕರ್ಥ. ಆ ಗುರುಕರುಣವ ಪಡೆದ ಶಿಷ್ಯನು ದ್ವಿತೀಯದಲ್ಲಿ ಕರಣಂಗಳ ನಿವೃತ್ತಿಯ ಮಾಡಿ ಲಿಂಗಭಾವಭರಿತನಾಗಿರ್ದನೆಂಬುದೀಗ – ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದೊಡಾಗಲಿ ಮಹಾಪ್ರಸಾದವೆಂದೆನಯ್ಯ ಎಂಬ ಶಬ್ದಕ್ಕರ್ಥ. ತೃತೀಯದಲ್ಲಿ ಸರ್ವಾಂಗಲಿಂಗವಾಗಿ ಕೋಹಂಭಾವವಳಿದು ಸೋಹಂಭಾವವಳವಟ್ಟಿತ್ತೆಂಬುದೀಗ – ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದೊಡಾಗಲಿ ಮಹಾಪ್ರಸಾದವೆಂದೆನಯ್ಯ ಎಂಬ ಶಬ್ದಕ್ಕರ್ಥ. ಚತುರ್ಥದಲ್ಲಿ ಗುರುಶಿಷ್ಯ ಸಂಬಂಧವೆಂಬ ಭಿನ್ನಭಾವವಳಿದು ಸೋಹಂ ಭಾವವಡಗಿ ನಿರಹಂಭಾವಸ್ವರೂಪನಾಗಿ ಸೇವ್ಯಸ್ಥಲವನಿಂಬುಗೊಂಡಿದ್ದನೆಂಬುದೀಗ – ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದೊಡಾಗಲಿ ಮಹಾಪ್ರಸಾದವೆಂದೆನಯ್ಯ ಎಂಬ ಶಬ್ದಕ್ಕರ್ಥ. ಇಂತು ನಾಹಂಭಾವ ಕೋಹಂಭಾವ ಸೋಹಂಭಾವ ಶಿವೋಹಂಭಾವವೆಂಬ ಚತುರ್ವಿಧ ಭಾವವು ನಿರ್ಭಾವವನೆಯ್ದಿ ನಿಜದಲ್ಲಿ ನಿಂದು ಪರಮಕಾಷ್ಠೆಯಾಗಿದ್ದನೆಂಬುದೀಗ – ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನೆಂಬ ಶಬ್ದಕ್ಕರ್ಥ."[6]

ಮೇಲಿನ ವಚನ ಮತ್ತು ಟೀಕುವನ್ನು ಓದಿದಾಗ ಸರಳವಾದ ಒಂದು ವಚನಕ್ಕೆ ಮಹಾಲಿಂಗದೇವ ಗಹನವಾದ, ಸಾಂಕೇತಿಕವಾದ ಆಧ್ಯಾತ್ಮಿಕ ಅರ್ಥವನ್ನು ಕೊಟ್ಟಿದ್ದಾನೆನ್ನುವುದು ಸ್ಪಷ್ಟವಾಗುತ್ತದೆ. ಇದಕ್ಕೆ ಆತ ಬದುಕಿದ ಕಾಲವೇ ಕಾರಣ. ಪ್ರತಿಯೊಂದು ವಚನವನ್ನು ಟೀಕಾಕಾರರು ತಮ್ಮ ಪಾಂಡಿತ್ಯ ಪ್ರತಿಭೆಯನ್ನು ತೋರ್ಪಡಿಸುವುದಕ್ಕಾಗಿ ಗಂಭೀರವಾಗಿ ಅರ್ಥೈಸುತ್ತಿದ್ದರು. ಇದಕ್ಕೆ ಅನೇಕ ಟೀಕಿನ ವಚನಗಳು ಸಾಕ್ಷಿಯಾಗಿವೆ. ಬಹುಶಃ ಅಂದಿನರ್ಥ ಅಂದಿನವರಿಗೆ ಸರಿಯಾಗಿಯೇ ಕಂಡಿರಬಹುದು. ಅಂಥ ಅನೇಕ ಉದಾಹರಣೆಗಳನ್ನು ಈ ಸಂಕಲನದಲ್ಲಿ ಗುರುತಿಸಲು ಸಾಧ್ಯವಿದೆ. ಸರಳವಾದ ಅರ್ಥವನ್ನು ಕಾಣುವುದು ಈ ಸಂಕಲನದಲ್ಲಿ ಸಾಧ್ಯವಿಲ್ಲ ಎನ್ನುವಷ್ಟರಮಟ್ಟಿಗೆ ಮಹಾಲಿಂಗದೇವ ತಾತ್ವಿಕ ಹಿನ್ನೆಲೆಯಲ್ಲಿಯೇ ಪದಗಳನ್ನು ಬಳಸಿದ್ದಾನೆ. ಉದಾ: ಮರದೊಳಗಣ ಕಿಚ್ಚು ಎಂಬುದಕ್ಕೆ ಈತ ಕೊಡುವ ಅರ್ಥ 'ಕಾಷ್ಠದೊಳಗೆ

ಅಂತರ್ಗತವಾಗಿದ್ದ ಅಗ್ನಿ' (ವ.ಸಂ. 396). ಹೀಗೆ ಮಹಾಲಿಂಗದೇವನ ಕೃತಿ ಎಷ್ಟೇ ಗಹನವಾಗಿದ್ದರೂ ಅಲ್ಲಮನ ವಚನಗಳನ್ನು ಆಧ್ಯಾತ್ಮಿಕ ನೆಲೆಯಿಂದ ಅರ್ಥೈಸುವಲ್ಲಿ ತುಂಬ ನೆರವಿಗೆ ಬರುತ್ತದೆಂಬುದನ್ನು ಅಲ್ಲಗಳೆಯುವಂತಿಲ್ಲ. ಈತನು ನಾಲ್ಕು ಸಾಲಿನ ವಚನಕ್ಕೆ ಸುದೀರ್ಘವಾಗಿ ಅರ್ಥ ಹೇಳಿದರೆ, ಎಂಟು ಸಾಲು ಅಥವಾ ಅದಕ್ಕಿಂತ ಹೆಚ್ಚಿನ ಸಾಲುಗಳನ್ನೊಳಗೊಂಡ ವಚನಕ್ಕೆ ಮೂರೇ ಸಾಲಿನಲ್ಲಿ ಟೀಕೆ ಬರೆದಿದ್ದಾನೆ. ಅಲ್ಲದೇ ವಚನದ ಸಾಮಾನ್ಯವಾದ ವಾಚ್ಯಾರ್ಥ ಹೇಳದೇ ತಾತ್ವಿಕ ಹಿನ್ನೆಲೆಯಲ್ಲಿ ಅರ್ಥೈಸುವ ಪ್ರಯತ್ನ ಇಲ್ಲಿದೆ. ಒಟ್ಟಿನಲ್ಲಿ "ಪ್ರಭುದೇವರ ವಚನಗಳನ್ನು ಸಂಗ್ರಹಿಸಿದ ಮತ್ತು ಅವುಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಜೋಡಿಸಿ, ಅವಕ್ಕೆ ವ್ಯಾಖ್ಯಾನ ಬರೆದು ಅವು ಸುಲಭಗಮ್ಯವಾಗುವಂತೆ ಮಾಡಿದ ಕೀರ್ತಿ ಮೊದಲು ಮಹಾಲಿಂಗದೇವನಿಗೆ ಸಲ್ಲಬೇಕಾದುದು"[7] ಎಂದು ಎಲ್. ಬಸವರಾಜು ಅವರು ಅಭಿಪ್ರಾಯ ಪಟ್ಟಿರುವುದು ಸಮಂಜಸವಾಗಿದೆ.

ಇನ್ನು ಈ ಕೃತಿಯ ಪರಿಷ್ಕರಣೆ ಕುರಿತು ಎರಡು ಮಾತು. ಮಹಾಲಿಂಗದೇವನ ಈ ಕೃತಿಯನ್ನು ಮೊದಲು (1931) ಪರಿಷ್ಕರಿಸಿ ಪ್ರಕಟಿಸಿದವರು ಫ.ಗು. ಹಳಕಟ್ಟಿ. 55 ವರ್ಷಗಳ ತರುವಾಯ (1986) ಇಮ್ಮಡಿ ಶಿವಬಸವಸ್ವಾಮಿಗಳವರು ಮೂರು ಹಸ್ತಪ್ರತಿಗಳ ನೆರವಿನಿಂದ ಅಲ್ಲಮನ ವಚನಗಳ ಟೀಕಾಕೃತಿಯನ್ನು ಪರಿಷ್ಕರಿಸಿದ್ದಾರೆ. ಎಲ್. ಬಸವರಾಜು ಅವರು ಪರಿಷ್ಕರಿಸಿದ ವಚನಚಂದ್ರಿಕೆಯ ಪಾಠಾಂತರಗಳನ್ನು ಇಲ್ಲಿ ಸ್ವೀಕರಿಸಿದ್ದಾರೆ. ಅಲ್ಲದೇ ಅವರೇ ಮುನ್ನುಡಿಯಲ್ಲಿ ಈ ಸಂಪಾದನೆಯ ವೈಧಾನಿಕತೆ ಕುರಿತು ಹೀಗೆ ಹೇಳಿದ್ದಾರೆ : "ಇದು ಕೇವಲ 694 ವಚನಗಳಿಗೆ ಮಾತ್ರ ಸಂಬಂಧಿಸಿದ್ದು. ಮಹಾಲಿಂಗದೇವರು ಟೀಕಿಸಿದ ವಚನಗಳನ್ನೇ ಕಲ್ಲುಮಠದ ಪ್ರಭುದೇವರು ಟೀಕಿಸಿರುವೆಡೆ ತುಲನಾತ್ಮಕವಾಗಿ ಅಧ್ಯಯನ ಮಾಡಲು ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಆಯಾ ವಚನದ ಅಡಿಯಲ್ಲಿ ಕೊಟ್ಟಿದೆ. ಇನ್ನುಳಿದ ಕಲ್ಲುಮಠದ ಪ್ರಭುದೇವರ ಟೀಕಿನ ವಚನಗಳನ್ನು, ಸಿಂಗಳದ ಸಿದ್ಧಬಸವರಾಜದೇವರು ಹಾಗೂ ಚನ್ನವೀರಾರ್ಯರು (ಕ್ರಿ.ಶ. ಸು. 1600) ವ್ಯಾಖ್ಯಾನಿಸಿರುವ ವಚನಗಳನ್ನು ಅನುಕ್ರಮವಾಗಿ (40, 12, 51) 695 ರಿಂದ ಮುಂದುವರೆಸಿದೆ. ಈ ವಚನ ಕಾಣಬಂದರ್ಥ ಎಂದಷ್ಟೇ ಕಲ್ಲುಮಠದ ಪ್ರಭುದೇವರು ವ್ಯಾಖ್ಯಾನಿಸಿರುವ ವಚನವನ್ನು ಇಲ್ಲಿ ಕೈಬಿಟ್ಟಿದೆ. ಈ ಕೃತಿಯು ವಿದ್ವಜ್ಜನರಿಗೋಸ್ಕರವೇ ಸಂಸಿದ್ಧಪಡಿಸಿದ ಸಂಸ್ಕರಣವಲ್ಲವಾದ್ದರಿಂದ ಶಕಟರೇಫವನ್ನು ಬಿಡಲಾಗಿದೆ."[8]

## 2.2 ಕುಮಾರ ಬಂಕನಾಥ

ಮಹಾಲಿಂಗದೇವನ ಕರಕಮಲಸಂಜಾತನಾದ ಈತ ಒಬ್ಬ ಪ್ರಸಿದ್ಧ ಟೀಕಾಕಾರ. ವಿಂಶತಿಯಲ್ಲಿ ಮಹಾಲಿಂಗದೇವರು, ಏಕವಿಂಶತಿಯಲ್ಲಿ ಕುಮಾರ ಬಂಕನಾಥದೇವರು, ಆ ಕುಮಾರ ಬಂಕನಾಥದೇವರ ದಿವ್ಯಜ್ಞಾನಾನಂದ ಕರಕಮಲದಲ್ಲಿ ಉದಯವಾದ ತಚ್ಛಿಷ್ಯನು ಭಕ್ತಿಭಂಡಾರಿ ಜಕ್ಕಣ್ಣನು ಎಂಬ ಏಕೋತ್ತರ ಶತಸ್ಥಲದ ಉಲ್ಲೇಖದಿಂದ ಈ ಪರಂಪರೆಗೆ

ಚಾರಿತ್ರಿಕ ಮಹತ್ವವಿದೆ. ಹಾಗೆಯೇ "ಘನವೀರಶೈವಕ್ಕೆ ಮುಖ್ಯ ಇಪ್ಪತ್ತುವೊಂದನೆಯ ಗುರು ಸಾಂಪ್ರದಾಯಕ ಶ್ರೇಷ್ಠ ಸುಕುಮಾರಕನು ಬಂಕನಾಥ ಗುರುಬಸವನಜಯುಗಳವನು ಹೃದಯದೊಳು ನೆಲಗೊಳಿಸುತ"[9] ಎಂಬ ಅದೃಶ್ಯಕವಿಯ ಹೇಳಿಕೆಯೂ ಇದಕ್ಕೆ ಪುಷ್ಟಿಯನ್ನು ನೀಡುತ್ತದೆ.

ಬಂಕನಾಥನ ಕೃತಿಗಳಾವುವು ಎಂಬ ಬಗ್ಗೆ ವಿದ್ವಾಂಸರಲ್ಲಿ ಜಿಜ್ಞಾಸೆಯಿದೆ. ಬಂಕನಾಥ ಷಟ್ಸ್ಥಲೋಪದೇಶ, ಪ್ರಭುದೇವರ ಟೀಕಿನ ವಚನಗಳನ್ನು ಬರೆದಿದ್ದಾನೆಂಬುದು ಕವಿಚರಿತೆಕಾರರ ಅಭಿಪ್ರಾಯ. ಆದರೆ ಇವೆರಡು ಕೃತಿಗಳೂ ಒಂದೇ ಎಂದು ರಂ.ಶ್ರೀ. ಮುಗಳಿ ಅವರು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೇ ಪ್ರಭುವಿನ ಟೀಕಿನ ವಚನಗಳ ಕರ್ತೃವಿನ ಬಗೆಗೂ ಒಮ್ಮತದ ಅಭಿಪ್ರಾಯವಿಲ್ಲ. ಹೀಗಾಗಿ ಮಹಾಲಿಂಗದೇವ ಮತ್ತು ಬಂಕನಾಥನ ಕೃತಿಗಳಾವುವು ಎಂಬ ಬಗ್ಗೆ ಇನ್ನೂ ತೊಡಕುಗಳಿವೆ. ಈ ವಿಚಾರವಾಗಿ ಎಸ್. ಶಿವಾನಂದ ಅವರು ತಮ್ಮ ಮಹಾಪ್ರಬಂಧದಲ್ಲಿ ಸುದೀರ್ಘವಾಗಿ ಚರ್ಚಿಸಿರುವರು.[10] ಈ ಚರ್ಚೆಯಿಂದಾಗಿ ಇವರಿಬ್ಬರೂ ಪ್ರಭುವಿನ ವಚನಗಳಿಗೆ ಪ್ರತ್ಯೇಕವಾಗಿ ಟೀಕು ಬರೆದರೆಂದೂ, ಎರಡೂ ಕೃತಿಗಳಲ್ಲಿ ತುಂಬ ಸಾಮ್ಯತೆಗಳಿವೆಯೆಂದೂ ತಿಳಿದುಬರುತ್ತದೆ.

ಬಂಕನಾಥನ ಕೃತಿಯ ಹೆಸರು 'ಪ್ರಭುದೇವರ ಷಟ್‌ಸ್ಥಲ ಜ್ಞಾನ ಚಾರಿತ್ರ ವಚನದ ಟೀಕು'. ಈ ಕೃತಿಗೆ ಪರ್ಯಾಯವಾಗಿ ಷಟ್ಸ್ಥಲೋಪದೇಶ ಎಂದೂ ಕರೆಯಲಾಗುತ್ತಿದೆ. ಕೃತಿಯ ಆರಂಭದಲ್ಲಿ ಕವಿಯು "ಶ್ರೀ ಕುಮಾರ ಬಂಕನಾಥದೇವರ ದಿವ್ಯಜ್ಞಾನಾನಂದ ಕರಕಮಲದಲ್ಲಿ ಉದಯನಾದ ತತ್‌ಶಿಷ್ಯ ಭಕ್ತಿ ಭಂಡಾರಿ ಜಕ್ಕಣ್ಣನು ಆ ಶ್ರೀ ಗುರುರಾಯಂಗೆ ಬಿನ್ನಪಂಗೈಯ್ದು, ಎನ್ನ ಷಡಾಂಗವು ಲಿಂಗದಲ್ಲಿ ಲೀಯವಹ ಭೇದವ ನಿರೂಪವ ಕೊಟ್ಟು ಪಾಲಿಪುದೆಂದೆನೆ, ಆ ಶ್ರೀಗುರುಸ್ವಾಮಿ ತಮ್ಮ ಪರಮ ಜ್ಞಾನಾನುಭಾವ ಪ್ರಸನ್ನ ಪ್ರಕಾಶದಿಂದ ಶ್ರೀಷಟ್ಸ್ಥಲವನು ಶ್ರೀಮದಲ್ಲಮ ಶ್ರೀಪ್ರಭುದೇವರ ವಚನಂಗಳಿಂದ ಸಂಕಲ್ಪಿಸಿ ಸುಲಲಿತ ವಾಕ್ಯಾಮೃತವಾಗಿ ಆ ವಚನಗಳನ್ನು ಟೀಕೆ ಪರಮಾರ್ಥ ತತ್ವಬೋಧೆಯನು ನಿರೂಪಿಸಿದ ಭೇದವೆಂತಿರ್ದಿತೆಂದಡೆ ಪ್ರಥಮದಲ್ಲಿ ಪಿಂಡಸ್ಥಲ...."[11] ಎಂದು ಹೇಳಿಕೊಂಡಿದ್ದಾನೆ. ಈ ಹೇಳಿಕೆ ಬಂಕನಾಥನೇ ಈ ಕೃತಿಯ ಕರ್ತೃವೆಂಬುದಕ್ಕೆ ಪುಷ್ಟಿ ನೀಡುತ್ತದೆ.

ಅಲ್ಲದೇ ಈ ಕೃತಿಯನ್ನೊಳಗೊಂಡ ಒಂದು ಹಸ್ತಪ್ರತಿಯ ಆರಂಭದಲ್ಲಿ "ಓಂ ಸ್ವಸ್ತಿ ಸುಸಮಸ್ತ ಶ್ರೀಮನ್ನಿರಂಜನ ಶರಣ ಹೃತ್ಕಮಲ ಪರಂಜ್ಯೋತಿ ಶ್ರೀಮದಲ್ಲಮಪ್ರಭುದೇವರು ನಿರೂಪಿಸಿದ ಶ್ರೀಮನ್ಮಹಾ ಷಟ್ಸ್ಥಲ ವಚನಮಂ ಶ್ರೀ ಕುಮಾರ ಬಂಕನಾಥದೇವರು ತಮ್ಮ ಶಿಷ್ಯ ಶ್ರೀ ಭಕ್ತಿಭಂಡಾರಿ ಜಕ್ಕಣಾರ್ಯಂಗೆ ಸಟಿಪ್ಪಣವಾಗಿ ಬೋಧಿಸಿರುವುದನ್ನು ಬರೆಯುವುದಕ್ಕೆ ಚರಗುರು ಶಿವಾರ್ಚಕರ ಮೆಲ್ಲಡಿಗಳಂ ಬಲಗೊಳ್ವೆಂ"[12] ಎಂದು ಲಿಪಿಕಾರ ಹೇಳಿದ್ದಾನೆ. ಈ ಹಿನ್ನೆಲೆಯಲ್ಲಿ ಈ ಕೃತಿಯನ್ನು ಬಂಕನಾಥನೇ ರಚಿಸಿರುವನೆಂಬುದು ಖಚಿತವಾಗುತ್ತದೆ.

ಮಹಾಲಿಂಗದೇವನಂತೆ ಈತನೂ ಭಕ್ತಸ್ಥಲ (ವ.ಸಂ. 112), ಮಾಹೇಶ್ವರಸ್ಥಲ (ವ.ಸಂ. 44), ಪ್ರಸಾದಿಸ್ಥಲ (ವ.ಸಂ. 17), ಪ್ರಾಣಲಿಂಗಿಸ್ಥಲ (ವ.ಸಂ. 137), ಶರಣಸ್ಥಲ (ವ.ಸಂ. 295), ಐಕ್ಯಸ್ಥಲ (ವ.ಸಂ. 89) – ಹೀಗೆ ಆರು ಸ್ಥಲಗಳಲ್ಲಿ ಅಲ್ಲಮನ 694 ವಚನಗಳಿಗೆ ಟೀಕು ಬರೆದಿದ್ದಾನೆ. ಈ ಕೃತಿಯ ಮುಖ್ಯ ಲಕ್ಷಣಗಳನ್ನು ಎಸ್. ಶಿವಾನಂದ ಅವರು ಹೀಗೆ ಗುರುತಿಸಿದ್ದಾರೆ.[13] – 1. ಸ್ಥಲ ನಿರ್ದೇಶನ, ಆ ಸ್ಥಲಸಂಬಂಧಿಯಾದ ವಚನಗಳು, ಆ ವಚನಗಳ ಸಂಖ್ಯೆ ಪ್ರಸಾದಿಸ್ಥಲದಲ್ಲಿ ಎಲ್ಲಕ್ಕಿಂತ ಕಡಿಮೆಯಾಗಿದ್ದು, ಶರಣಸ್ಥಲದಲ್ಲಿ ಎಲ್ಲಕ್ಕಿಂತ ಹೆಚ್ಚಿದೆ. ಕಡಿಮೆ ವಚನಗಳ ಸಂಖ್ಯೆ 17, ಹೆಚ್ಚು ವಚನಗಳ ಸಂಖ್ಯೆ 295 ಆಗಿವೆ. 3. ಆಯಾ ವಚನಗಳಿಗೆ ಪ್ರತಿಪದದ ಟೀಕೆ ಇರುತ್ತದೆ. 4. ವಚನದ ಪ್ರತಿಯೊಂದು ವಾಕ್ಯಗಳನ್ನು ಎತ್ತಿಕೊಂಡು ಅರ್ಥವಿವರಣೆ ಮಾಡಿದ ಮೇಲೆ, ಆ ಅರ್ಥ ಹೇಳಿದ ವಚನದ ಸಾಲನ್ನು ಪುನಃ ಪೂರ್ತಿಯಾಗಿ ಕೊಟ್ಟು ಎಂಬುದೀಗ ಈ ಶಬ್ದಕರ್ಥ ಎಂಬಲ್ಲಿ ವಾಕ್ಯಾನ್ವಯದ ಕ್ರಿಯಾಪದ ಪೂರ್ತಿಯಾಗಿರುವುದು. 5. ಆಯಾ ವಚನದ ಇಡೀ ಭಾವವು ಯಾವ ಸ್ಥಲಕ್ಕೆ ಸಂಬಂಧಿಸಿರುತ್ತದೆಯೋ ಆ ಸ್ಥಲ ತತ್ವವನ್ನು ಪುನಃ ಪುನಃ ವಚನಗಳಿಗೆ ಟೀಕೆಯಲ್ಲಿ ಅಳವಡಿಸಿರುತ್ತದೆ. 6. ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳನ್ನು ಪ್ರಮಾಣವಾಗಿ ಕೊಟ್ಟಿರುವುದು. 7. ಪ್ರಭುದೇವನ ಬೆಡಗಿನ ವಚನಗಳಿಗೆ ಶಿವಾನುಭವದ ಹಿನ್ನೆಲೆಯಲ್ಲಿ ಟೀಕು ಬರೆದದ್ದು. ಉದಾ: ಒಂದು ವಚನವನ್ನು ನೋಡಬಹುದು.

> ಶಿಲೆಯೊಳಗಣ ಪಾವಕನಂತೆ
> ಪಾವಕನೊಳಗಣ ಪ್ರತಿಬಿಂಬದಂತೆ
> ಬೀಜದೊಳಗಣ ವೃಕ್ಷದಂತೆ
> ಶಬ್ದದೊಳಗಣ ನಿಶ್ಶಬ್ದದಂತೆ ಗುಹೇಶ್ವರಾ ನಿಮ್ಮ ಶರಣರ ಸಂಬಂಧ

ಪಿಂಡಸ್ಥಲಕ್ಕೆ ಸಂಬಂಧಿಸಿದ ಅಲ್ಲಮನ ಈ ವಚನಕ್ಕೆ ಬಂಕನಾಥನ ಟೀಕು ಹೀಗಿದೆ. ಶಿಲೆಯೊಳಗಿಪ್ಪ ಅಗ್ನಿ ಮೈದೋರದ ಹಾಂಗೆ ಪರಬ್ರಹ್ಮವು ಪಿಂಡಸ್ಥಲವಾಗಿದ್ದು ಕಾಣಿಸಬಾರದೆಂಬುದೀಗ ಶಿಲೆಯೊಳಗಣ ಪಾವಕನಂತೆ ಎಂಬ ಶಬ್ದಕರ್ಥ. ಆವುದಾದರೊಂದು ಪ್ರತಿಬಿಂಬವು ಉದಕದೊಳಗಿರ್ದು ಉದಕದ ಗುಣಧರ್ಮಕರ್ಮವ ಹೊದ್ದದ ಹಾಂಗೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಆ ಪಿಂಡದ ಗುಣಧರ್ಮ ಕರ್ಮವ ಹೊದ್ದದಿಪ್ಪುದೀಗ ಉದಕದೊಳಗಣ ಪ್ರತಿಬಿಂಬವೆಂಬ ಶದ್ದಕರ್ಥ. ಬೀಜದೊಳಗಣ ವೃಕ್ಷದ ಹಾಂಗೆ ಆ ಪರಬ್ರಹ್ಮವು ಪಿಂಡವಾಗಿರ್ದು ಪಿಂಡದ ಮಧ್ಯದಲ್ಲಿ ಗೂಢವಾಗಿದ್ದುದೀಗ ಬೀಜದೊಳಗಣ ವೃಕ್ಷದಂತೆ ಎಂಬ ಶಬ್ದಕರ್ಥ. ಶಬ್ದದೊಳಗಣ ನಿಶ್ಶಬ್ದವಿದ್ದುದನು ಭೇದಿಸಬಾರದ ಹಾಂಗೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಅಭೇದವಾಗಿಪ್ಪುದೆಂಬುದೀಗ ಶಬ್ದದೊಳಗಣ ನಿಶ್ಶಬ್ದದಂತೆ ಗುಹೇಶ್ವರ ನಿಮ್ಮ ಶರಣಸಂಬಂಧ ಎಂಬ ಶಬ್ದಕರ್ಥ.

ಈ ಟೀಕುವನ್ನು ಗಮನಿಸಿದಾಗ ಬಂಕನಾಥನ ಭಾಷೆ ನಡುಗನ್ನಡ. ಗದ್ಯದ ಹೃದ್ಯತೆ, ವಾಕ್ಯವಿನ್ಯಾಸ ವಿಶಿಷ್ಟವಾದುದು. ಅಂತೆ ಎಂಬ ಉಪಮಾವಾಚಕವನ್ನು ಹಾಂಗೆ ಎಂದು ಬಳಸಿದ್ದಾನೆ. ಹಾಗೆಯೇ ಪಿಂಡಸ್ಥವಾಗಿರ್ದು > ಹೊದ್ದದಿಪ್ಪುದೀಗ, ಕಾಣಿಸಬಾರದೆಂಬುದೀಗ > ಗೂಢವಾಗಿಪ್ಪುದೆಂಬುದೀಗ ಎಂಬಂಥ ಪರ್ಯಾಯ ಪದಗಳನ್ನು ಬಳಸಿರುವುದನ್ನು ನೋಡಿದರೆ ಬಂಕನಾಥನ ಶಬ್ದ ಭಂಡಾರ, ವಿದ್ವತ್ತು ಎದ್ದು ಕಾಣುತ್ತದೆ. ಟೀಕು ಎಂಬುದಕ್ಕೆ ಸಮನಾಗಿ ಅರ್ಥ, ಅನ್ವಯ, ದೃಷ್ಟ, ತಾತ್ಪರ್ಯ ಮತ್ತು ನಿರ್ವಚನ ಎಂಬ ವೈವಿಧ್ಯಪೂರ್ಣ ಪದಗಳನ್ನು ಇಲ್ಲಿ ಬಳಸಿಕೊಂಡಿದ್ದಾನೆ. ಕೆಲವು ಕಡೆ ಸಂಸ್ಕೃತ ಶ್ಲೋಕಗಳನ್ನು ಸಂದರ್ಭಾನುಸಾರ ಉಲ್ಲೇಖಿಸಲಾಗಿದೆ. ಆತ್ಮಾಕಾಶಮಯಂ ತಾವತ್ (ಭೂಮಿಯ ಕಠಿಣವನು ಆಕಾಶದ ಮೃದುವನು), ಪಿಂಡಬ್ರಹ್ಮಾಂಡಯೋರೈಕ್ಯಂ (ಭೂಮಿಯಾಕಾಶ ಒಂದೆ ಜೀವನದುದರ) – ಇಂಥಲ್ಲೆಲ್ಲ ಬಂಕನಾಥನು ಬಹುಶ್ರುತತ್ವವನ್ನು ಮೆರೆದಿದ್ದಾನೆ.

ಪ್ರಭುದೇವರ ವಚನಗಳಲ್ಲಿ ಬೆಡಗು ಎಂಬುದು ಕೇವಲ ಶಬ್ದಚಮತ್ಕೃತಿಯಾಗಿ ಬಳಕೆಯಾಗಿಲ್ಲ. ಬದಲಾಗಿ ಆಳವಾದ ದರ್ಶನವನ್ನು ಧ್ವನಿಪೂರ್ಣವಾಗಿ ಉಪಮೆಗಳ ಮೂಲಕ ಅಭಿವ್ಯಕ್ತಿಗೊಳಿಸಲು ವಚನಗಳನ್ನು ಬೆಡಗಿನ ರೂಪದಲ್ಲಿ ಅಲ್ಲಮ ರಚಿಸಿದ್ದಾನೆ. ಈ ಬೆಡಗಿನ ವಚನಗಳನ್ನು ಅರ್ಥೈಸಲು ಬಂಕನಾಥ ತನ್ನ ಪಾಂಡಿತ್ಯ ಮತ್ತು ಪ್ರತಿಭೆಗಳೆರಡನ್ನೂ ಚೆನ್ನಾಗಿ ಉಪಯೋಗಿಸಿಕೊಂಡಿರುವನು. ಇದಕ್ಕೆ ಕೆಲವು ನಿದರ್ಶನಗಳನ್ನು ನೋಡಬಹುದು. 'ತಲೆಯಿಲ್ಲದ ತಲೆಯಾತಂಗೆ ಕರುಳಿಲ್ಲದ ಒಡಲು ನೋಡಾ' ವಚನವೊಂದರ ಈ ಸಾಲಿಗೆ ಬಂಕನಾಥನು "ಜ್ಞಾನದ ತೂರ್ಯವೆಂಬ ವೃತ್ತಿಜ್ಞಾನವಳಿದು ಶುದ್ಧಜ್ಞಪ್ತಿಯೇ ತಲೆಯಿಲ್ಲದ ತಲೆ ಅಜ್ಞಪ್ತಿಯೇ ಸಿರಸ್ಸಾಗಿ ಪರಬ್ರಹ್ಮಕ್ಕೆ ಕರಣಾದಿಗಳೆಂಬ ಕರುಳಿಲ್ಲದ ಒಡಲಾಯಿತ್ತಾಗಿ ಕರುಳಿಲ್ಲದ ಒಡಲು" ಎಂದು ವ್ಯಾಖ್ಯಾನಿಸಿರುವನು. ಇಂಥ ಕಡೆಗಳಲ್ಲಿ ಅನುಭಾವದ ನೆಲೆಯಲ್ಲಿ ನಿಂತು ಬಂಕನಾಥನು ವಚನಗಳನ್ನು ಅರ್ಥೈಸಲು ಪ್ರಯತ್ನಿಸಿದ್ದಾನೆ. ಒಟ್ಟಿನಲ್ಲಿ ಎಸ್. ಶಿವಾನಂದ ಅವರು ಹೇಳುವಂತೆ "ಪ್ರಭುದೇವರ ಅತ್ಯಂತ ಜಟಿಲವಾದ ವಚನಗಳಿಗೆ ಬಂಕನಾಥ ಟೀಕೆ ಬರೆದಿರುವುದು, ಅದನ್ನು ವೀರಶೈವ ಷಟ್‌ಸ್ಥಲ ತತ್ವಗಳಲ್ಲಿ ನಿಯೋಜಿಸಿ, ಆ ವಚನಗಳಲ್ಲಿ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸಿರುವುದು, ವಚನಸಾಹಿತ್ಯ ಪ್ರಪಂಚದಲ್ಲಿಯೇ ಅವನಿಗೆ ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟಿವೆ. ಅವನ ಟೀಕೆ ಸಮಗ್ರವೂ, ಸ್ವಯಂಪೂರ್ಣವೂ, ಸರಳವೂ ಆಗಿದೆ. ಸುಲಲಿತವಾದ ವಾಕ್ಯಾಮೃತಗಳಲ್ಲಿ ವಚನಗಳಿಗೆ ಟೀಕೆ ಬರೆದುದಾಗಿ ಬಂಕನಾಥನೇ ಹೇಳಿರುವುದು ಅರ್ಥಪೂರ್ಣವಾಗಿದೆ. ನಡುಗನ್ನಡ ಸಾಮಾನ್ಯ ಗದ್ಯಶೈಲಿಗೆ ಇವನ ಟೀಕೆ ಉತ್ಕೃಷ್ಟ ನಿದರ್ಶನವಾಗಿದೆ."[14]

## 2.3 ಕಲ್ಲುಮಠದ ಪ್ರಭುದೇವ

ನೂರೊಂದು ವಿರಕ್ತರ ಸಮಕಾಲೀನನಾದ ಈತ ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿದ್ದವನು. ಹಂಪೆಯ ಕಲ್ಲುಮಠಕ್ಕೆ ಅಧಿಪತಿಯಾದ ಪ್ರಭುದೇವನ ಕೃತಿ

ಲಿಂಗಲೀಲಾವಿಲಾಸ ಚಾರಿತ್ರ.[15] ಇದು ವಚನಸಂಕಲನ ಕೃತಿಯೂ ಹೌದು, ವ್ಯಾಖ್ಯಾನ ಕೃತಿಯೂ ಹೌದು. ಹೀಗಾಗಿ ಈತ ಏಕಕಾಲಕ್ಕೆ ಸಂಕಲನಕಾರ ಮತ್ತು ವ್ಯಾಖ್ಯಾನಕಾರನಾಗಿ ಕಾರ್ಯ ನಿರ್ವಹಿಸಿದ್ದಾನೆ. 16 ಸ್ಥಲಗಳಲ್ಲಿ 36 ವಚನಕಾರರ 729 ವಚನಗಳನ್ನು ವ್ಯಾಖ್ಯಾನಿಸಿದ ಸಂಕಲನ ಇದಾಗಿದೆ. ಜೊತೆಗೆ 135 ಸಂಸ್ಕೃತ ಶ್ಲೋಕಗಳೂ ಇಲ್ಲಿ ಉಲ್ಲೇಖಗೊಂಡಿವೆ. ಈ ಸಂಕಲನದಲ್ಲಿ ಅಲ್ಲಮನ 106 ವಚನಗಳಿಗೆ ವ್ಯಾಖ್ಯಾನಿಸಲಾಗಿದೆ. ವೇದ ಉಪಮಾಣವಲ್ಲ, ಶಾಸ್ತ್ರ ಪ್ರಮಾಣವಲ್ಲ, ಶಬ್ದ ಪ್ರಮಾಣವಲ್ಲ ಕಾಣಿಭೋ ಅಂಗಸಂಗದ ಮಧ್ಯದಲ್ಲಿದ್ದು ಬೈಚಿಟ್ಟು ಬಳಸಿದ ಗುಹೇಶ್ವರ ನಿಮ್ಮ ಶರಣ – ಅಲ್ಲಮನ ಈ ವಚನಕ್ಕೆ ಕಲ್ಲುಮಠದ ಪ್ರಭುದೇವನ ವ್ಯಾಖ್ಯಾನ ಹೀಗಿದೆ:

> ವೇದಶಾಸ್ತ್ರ ಶಬ್ದಾದಿ ಪ್ರಮಾಣಂಗಳು ಲಿಂಗಾಂಗಸಂಬಂಧವನುಭಾವಕ್ಕೆ ಸಾಧನವಲ್ಲ. ಮತ್ತೆಂದೊಡೆ ಸರ್ವಾಂಗದೊಳಗೆ ಲಿಂಗಸಂಗ ನಿಕ್ಷೇಪ ಸಂಚವ ಮಾಡಿಕೊಂಡು, ಸಲಿಂಗವ ಭಿನ್ನವಿಡದೆ ಶರಣ ಜ್ಞಾನಕ್ರೀಯಿಂದ ಲಿಂಗಾಂಗಸಂಗದನುಭವ ತೀರಲನುಭವಿಸಿದನೆಂಬುದೀ ವಚನದ ತಾತ್ಪರ್ಯಾರ್ಥ.

ಮೇಲಿನ ವ್ಯಾಖ್ಯಾನವನ್ನು ಅವಲೋಕಿಸಿದರೆ ಕಲ್ಲುಮಠದ ಪ್ರಭುದೇವನ ಪಾಂಡಿತ್ಯ, ಪ್ರತಿಭೆ, ಶಾಸ್ತ್ರಜ್ಞಾನದ ವ್ಯಾಪ್ತಿ ನಮಗೆ ಮನದಟ್ಟಾಗುತ್ತದೆ. ವಿಶೇಷವಾಗಿ ಅಲ್ಲಮನ ವೀರಶೈವ ಸಿದ್ಧಾಂತವನ್ನು ನಿರೂಪಿಸುವ ಬೆಡಗಿನ ವಚನಗಳಿಗೆ ಪ್ರಾಶಸ್ತ್ಯ ನೀಡಿ ಅವುಗಳಿಗೆ ಟೀಕು ಬರೆದಿರುವುದು ಈ ಸಂಕಲನದ ವೈಶಿಷ್ಟ್ಯವಾಗಿದೆ.

### 2.4 ಸಿಂಗಳದ ಸಿದ್ಧಬಸವರಾಜ

ಬೆಡಗಿನ ವಚನಗಳನ್ನು ಒಂದೆಡೆ ಸಂಗ್ರಹಿಸಿಕೊಟ್ಟವರಲ್ಲಿ ಸಿಂಗಳದ ಸಿದ್ಧಬಸವರಾಜನೂ ಒಬ್ಬ. ಈತನ ಇತಿವೃತ್ತದ ಬಗೆಗೆ ಯಾವುದೇ ಮಾಹಿತಿಗಳು ಲಭ್ಯವಾಗಿಲ್ಲ. ಈತ ಕೋಲ ಶಾಂತಯ್ಯ, ತುರುಗಾಹಿ ರಾಮಣ್ಣ, ಗಾಣದ ಕಣ್ಣಪ್ಪ, ಕದಿರೆ ರೆಮ್ಮವ್ವೆ, ಕೀಲಾರದ ಭೀಮಣ್ಣ, ಹಡಪದಪ್ಪಣ್ಣ ಮೊದಲಾದ 47 ಸಕಲ ಪುರಾತನ ಶಿವಶರಣರ 541 ಬೆಡಗಿನ ವಚನಗಳಿಗೆ ಟೀಕನ್ನು ಬರೆದಿದ್ದಾನೆ.[16] ಇದರಲ್ಲಿ ಪ್ರಭುದೇವರ ಬೆಡಗಿನ 12 ವಚನಗಳೂ ಸಮಾವೇಶಗೊಂಡಿವೆ. ಕಲಿ ತನ್ನ ತಲೆಯನರಿದು ಕೈಯಲ್ಲಿ.....ಎಂದು ಪ್ರಾರಂಭವಾಗುವ ಅಲ್ಲಮನ ಈ ಬೆಡಗಿನ ವಚನವನ್ನು ಸಿದ್ಧಬಸವರಾಜ ಹೀಗೆ ಅರ್ಥೈಸಿದ್ದಾನೆ. "ದೃಢ ಬುದ್ಧಿ ಕರಿಗೊಂಡ ಶರಣನು ತನ್ನಲ್ಲಿ ತಲೆದೋರಿದ ಭಿನ್ನವಿವೇಕವ ತಾನೆ ಮಹಾಜ್ಞಾನದಿಂ ಛೇದಿಸಿ ಸದ್ಭಾವ ಕರದಿಂ ಪಿಡಿದು ನಾನಾ ಸ್ಥಲ ಪರಿಕ್ರಮದಲ್ಲಿ ವರ್ತಿಸುತ್ತಿರಲದೀಗ, ಕಲಿ ತಲೆಯನರಿದು ಕೈಯಲ್ಲಿ ಹಿಡಿದು ಹಲವು ದ್ವೀಪಕ್ಕೆ ಹೋಗಿ ತೊಳಲುತೈದಾನೆ ಎಂಬ ಶಬ್ದಕರ್ಥ. ಇಂತಪ್ಪ ಶರಣನ ಚಾರಿತ್ರವ ಶ್ರುತಮುಖದಿಂ ಕಂಡು ಗುರುಮುಖದಿಂ ಕೇಳಿ ಸ್ವಾನುಭಾವರ ಮುಖದಿಂ ಪರಾಮರಿಸುತ್ತಿರ್ದಾತನೆ ಭಿನ್ನ ವಿಚಾರವರತ ಅಭಿನ್ನ

ವಿಚಾರಸಂಬಂಧಿ ಎಂಬುದೀಗ, ಕಂಡವರು ತೋರಿರೆ ಕೇಳಿದವರು ಹೇಳಿರೆ ಬುದ್ಧಿಗೆಟ್ಟಿವ ಶುದ್ಧಿಯ ಬೆಸಗೊಳುತೈದಾನೆ ಎಂಬ ಶಬ್ದಕರ್ಥ. ಇಂತೀ ನಿವೃತ್ತಿಮುಖವಾದ ಸದ್ವಿವೇಕವು ಮಹಾನುಭಾವದ ವಿವೇಕವನವಗ್ರಹಿಸಿ ನಾನಾಸ್ಥಲ ಕುಳವನೆಯ್ದಿ ಜಡಭಾವರಹಿತವಾಗಿ ನಿಜದಲ್ಲಿ ನಿರ್ಮಲನೆಯ್ದಿರ್ಪದೆಂಬುದೀಗ, ತಲೆ ತಲೆಯನು ನುಂಗಿ ಹಲವು ದ್ವೀಪಕ್ಕೆ ಹೋಯಿತ್ತು ಗುಹೇಶ್ವರಾ ತಲೆ ಮೊದಲಿಲ್ಲಾ ಎಂಬ ಶಬ್ದಕರ್ಥ."

ಈ ವ್ಯಾಖ್ಯಾನವನ್ನು ಗಮನಿಸಿದಾಗ ಸಿದ್ಧಬಸವರಾಜನು ಹೇಳಬೇಕಾದ ಅರ್ಥವನ್ನು ನೇರವಾಗಿ ಹೇಳದೆ ಅದರೊಳಗಿನ ಗೂಢಾರ್ಥವನ್ನು ಗುರುತಿಸಿರುವುದು ಆತನ ಪಾಂಡಿತ್ಯಕ್ಕೊಂದು ನಿದರ್ಶನ. ಪ್ರತಿಯೊಂದು ವಚನದ ಪ್ರತಿಯೊಂದು ಸಾಲನ್ನು ವ್ಯಾಖ್ಯಾನಿಸಿ ಮತ್ತೆ ಆ ವಚನದ ಸಾಲನ್ನು ಪುನರಾವರ್ತಿಸಿದ್ದಾನೆ.

## 2.5 ಚನ್ನವೀರಾಚಾರ್ಯ

ಹದಿನಾರನೆಯ ಶತಮಾನದ ಆರಂಭದಲ್ಲಿದ್ದ ಚನ್ನವೀರಾರ್ಯನೂ ಸಹ ತನ್ನ ಬಗ್ಗೆ ಏನನ್ನೂ ಹೇಳಿಕೊಂಡಿಲ್ಲ. ತೋಂಟದ ಸಿದ್ಧಲಿಂಗದೇವರ ಪರಂಪರೆಯಲ್ಲಿ ಬರುವ ಈತ ವಿಶೇಷಾನುಭವ ಷಟ್ಸ್ಥಲ ಕೃತಿಯನ್ನು ರಚಿಸಿದ್ದಾನೆ.[17] ಶಿವಲಿಂಗದೇವರಿಗೆ ವಿಶೇಷಾನುಭವ ಷಟ್ಸ್ಥಲವನ್ನು ಬೋಧಿಸಿದುದಾಗಿ ಹೇಳಿಕೊಂಡಿದ್ದಾನೆ. ವಸ್ತುನಿರ್ದೇಶನಸ್ಥಲದಿಂದ ಶೂನ್ಯಸ್ಥಲದವರೆಗೆ 16 ಸ್ಥಲಗಳಲ್ಲಿ ವಚನಗಳನ್ನು ವಿಭಜಿಸಿ ಅವುಗಳಿಗೆ ಟೀಕು ಬರೆದಿರುವನು. ಹೀಗಾಗಿ ಲಿಂಗಲೀಲಾವಿಲಾಸ ಚಾರಿತ್ರದ ಮಾದರಿಯಲ್ಲಿ ಈ ಕೃತಿ ಆಕೃತಿ ಪಡೆದಿದೆ. ಪ್ರಭುದೇವನ 51 ವಚನಗಳು ಇಲ್ಲಿ ಎಡೆಪಡೆದಿದ್ದು, ಅವೆಲ್ಲವುಗಳಿಗೆ ಟೀಕು ಬರೆಯಲಾಗಿದೆ. ಟೀಕು ಪದಕ್ಕೆ ಸಮನಾಗಿ ತಾತ್ಪರ್ಯಾರ್ಥ, ಶಬ್ದಕರ್ಥ, ವಚನಾರ್ಥ, ನಿದರ್ಶನಾರ್ಥ, ವಚನದಭಿಪ್ರಾಯ ಎಂಬ ಪದಗಳನ್ನು ಬಳಸಿದ್ದಾನೆ. ಪೃಥ್ವಿಯ ಮೇಲೊಂದು ಪರಮಶಾಂತಿಯೆಂಬ....ಎಂದು ಆರಂಭವಾಗುವ ವಚನಕ್ಕೆ ಬರೆದ ಟೀಕು ಚನ್ನವೀರಾಚಾರ್ಯನ ಪಾಂಡಿತ್ಯ ಪ್ರತಿಭೆಗೆ ಹಿಡಿದ ಕನ್ನಡಿಯಂತಿದೆ. "ಬ್ರಹ್ಮರಂಧ್ರದ ಮನಸಾ ಪೃಥ್ವಿಯ ಚಿದಹಂಕಾರದ ಆಗ್ರದಲ್ಲಿ ಸ್ವತಃ ಸಿದ್ಧನಾಗಿರ್ಪ ಶ್ರೀಗುರು ಪ್ರಸನ್ನವಾಗಿ ಶಿಷ್ಯನ ನೋಡುವ ಕೃಪಾವಲೋಕನ ಪ್ರಕಾಶದಿಂದಿರಲು, ಆ ನೆತ್ತಿಯಲ್ಲಿಪ್ಪ ಚಿತ್ಕುಂಭ ಉತ್ಕೃಷ್ಟವಾಗಿ ಮಿಕ್ಕು ಮೀರಿ ಬಹಿಷ್ಕರಿಸಿ ಬಂದು ಕರಸ್ಥಲದಲ್ಲಿ ಕಲ್ಪವೃಕ್ಷ ಸ್ವರೂಪವಾಗಿ ನೆಲೆಗೊಂಡ ಲಿಂಗಸ್ಥಲದ ಸತ್ಕ್ರಿಯಾನುಭಾವವೆ ಸದ್ಭಕ್ತರಿಗೆ ಸಮರಸ ಮುಕ್ತಿ ಎಂಬುದೇ ವಚನಾರ್ಥ."[18] ಇಲ್ಲಿ ಬಳಸಿದ ಸರಳ ಪದಪುಂಜಗಳನ್ನು ಅವಲೋಕಿಸಿದಾಗ ಚನ್ನವೀರಾಚಾರ್ಯನ ಶಬ್ದಸಂಪತ್ತಿನ ಅಗಾಧತೆಯ ಅರಿವು ನಮಗಾಗುತ್ತದೆ.

ಹೀಗೆ ಮಹಾಲಿಂಗದೇವ, ಕುಮಾರ ಬಂಕನಾಥ, ಕಲ್ಲುಮಠದ ಪ್ರಭುದೇವ, ಸಿಂಗಳದ ಸಿದ್ಧಬಸವರಾಜ ಮತ್ತು ಚನ್ನವೀರಾಚಾರ್ಯರುಗಳು ಪ್ರಭುದೇವರ ವಚನಗಳಿಗೆ ಟೀಕು

ಬರೆದವರಾಗಿದ್ದಾರೆ. ಆದರೆ ಮಹಾಲಿಂಗದೇವ ಮತ್ತು ಕುಮಾರ ಬಂಕನಾಥರು ಮಾತ್ರ ಷಟ್ಸ್ಥಲಾನುಕ್ರಮದಲ್ಲಿ ಪ್ರಭುದೇವರ ವಚನಗಳನ್ನು ಜೋಡಿಸಿ ಅವುಗಳನ್ನು ವ್ಯಾಖ್ಯಾನಿಸಿದರೆ, ಇನ್ನುಳಿದವರು ಬೇರೆ ಬೇರೆ ಶಿವಶರಣರ ವಚನಗಳ ಜೊತೆಗೆ ಪ್ರಭುದೇವರ ವಚನಗಳನ್ನು ಆಯ್ಕೆ ಮಾಡಿಕೊಂಡು ಟೀಕು ಬರೆದಿದ್ದಾರೆ. ಹೀಗಾಗಿ ಮಹಾಲಿಂಗದೇವ ಮತ್ತು ಕುಮಾರ ಬಂಕನಾಥರು ಸ್ವತಂತ್ರ ಕೃತಿರೂಪದಲ್ಲಿ ಪ್ರಭುದೇವರ ವಚನಗಳಿಗೆ ಟೀಕು ಬರೆದವರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ಐದು ಟೀಕಾಕಾರರ ವ್ಯಾಖ್ಯಾನಗಳನ್ನು ಪರಿಶೀಲಿಸಿದಾಗ ಕಂಡುಬರುವ ಅಂಶಗಳನ್ನು ಹೀಗೆ ಕ್ರೋಡೀಕರಿಸಬಹುದು. 1. ಅಲ್ಲಮನ ಶಿವಯೋಗ ದರ್ಶನವನ್ನು ತಿಳಿದುಕೊಳ್ಳಬಯಸುವವರಿಗೆ ಈ ವ್ಯಾಖ್ಯಾನಗಳು ನೆರವಿಗೆ ಬರುತ್ತವೆ. 2. ಟೀಕಾಕಾರರಿಗೆ ವೇದ, ಉಪನಿಷತ್ತು, ಆಗಮ, ಪುರಾಣ, ಶ್ರುತಿ, ಸ್ಮೃತಿ, ಬ್ರಾಹ್ಮಣಗಳಲ್ಲಿ ಅಪಾರವಾದ ಪಾಂಡಿತ್ಯವಿತ್ತೆಂಬುದು ಸ್ಪಷ್ಟವಾಗುತ್ತದೆ. 3. ಸಂಸ್ಕೃತ ಭಾಷೆಯ ಬಗೆಗೂ ಬಲ್ಲಿದವರಾಗಿದ್ದರೆಂಬುದಕ್ಕೆ ಅವರು ಬಳಸಿದ ಶ್ಲೋಕಗಳು ನಿದರ್ಶನವಾಗಿವೆ. 4. ಅಲ್ಲಮನ ಕ್ಲಿಷ್ಟವಾದ ಮತ್ತು ಬೆಡಗಿನ ವಚನಗಳನ್ನು ಆಯ್ದುಕೊಂಡು ಅವುಗಳನ್ನು ವ್ಯಾಖ್ಯಾನಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿದ್ದಾರೆಂದು ಹೇಳುವಂತಿಲ್ಲ. 5. ಆದರೂ ಅಲ್ಲಮನ ವಚನಗಳನ್ನು ಅರ್ಥೈಸಿಕೊಳ್ಳುವ ಸಾಧಕರಿಗೆ ಕೈಪಿಡಿಯಂತೆ ಈ ಟೀಕುಗಳು ನೆರವಾಗುತ್ತವೆ. 6. ಕೆಲವು ಟೀಕುಗಳಿಗಿಂತ ಮೂಲ ವಚನಗಳೇ ಸುಲಭವಾಗಿ ಅರ್ಥವಾಗುವಂತಿವೆ. 7. ಮತ್ತೆ ಕೆಲವು ಟೀಕುಗಳನ್ನು ಓದಿದ ನಂತರ ವಚನಗಳನ್ನು ಅರ್ಥೈಸಲು ತುಂಬ ಕಠಿಣವೆನಿಸುತ್ತವೆ. 8. ಹೀಗಿದ್ದಾಗಲೂ ವಚನದೊಡನೆ ಕೆಲವು ಟೀಕುಗಳನ್ನು ಓದಿದಾಗ ನೂತನವಾದ ಅರ್ಥ ಸ್ಫುರಿಸಿ ಮನಸ್ಸಿಗೆ ಮುದ ನೀಡುವಂತಿವೆ. 9. ಕೆಲವು ಸಂದರ್ಭಗಳಲ್ಲಿ ಟೀಕಾಕಾರರು ಸರಳವಾದ ಪದಗಳಿಗೆ ಅಥವಾ ವಚನಗಳಿಗೆ ತಮ್ಮ ಪಾಂಡಿತ್ಯದ ಸ್ಪರ್ಶ ನೀಡಿ ಒಳಾರ್ಥವನ್ನು ತೆರೆದು ತೋರಿಸಿದ್ದಾರೆ. 10. ಈ ಎಲ್ಲ ಸಾಧಕ ಬಾಧಕಗಳ ನಡುವೆಯೂ ಅಲ್ಲಮನ ವಚನಗಳನ್ನು ಅರ್ಥೈಸಿಕೊಳ್ಳುವವರಿಗೆ ಈ ಟೀಕುಗಳು ಕೈಹಿಡಿದು ಮುನ್ನಡೆಸುತ್ತವೆ.

## ಕೊನೆ ಟಿಪ್ಪಣಿಗಳು ಮತ್ತು ಪರಾಮರ್ಶನ ಗ್ರಂಥಗಳು

1. ಟೀಕಾಸಾಹಿತ್ಯ ಕುರಿತು ಹೆಚ್ಚಿನ ಮಾಹಿತಿಗಾಗಿ ನೋಡಿ. 1. ಎಂ.ಎಂ. ಕಲಬುರ್ಗಿ, ಬಸವಣ್ಣನವರ ಟೀಕಿನ ವಚನಗಳು, ಪ್ರಸ್ತಾವನೆ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, 1978, 2. ಬಿ.ಆರ್. ಹಿರೇಮಠ, ಕನ್ನಡ ಗ್ರಂಥಗಳಿಗೆ ಬರೆದ ಕನ್ನಡ ಟೀಕಾಸಾಹಿತ್ಯ, ಗೌರವ (ಸಂ.ಶಿ. ಭೂಸನೂರಮಠ ಅಭಿನಂದನ ಗ್ರಂಥ, ಸಂ. ಬಿ.ವಿ. ಶಿರೂರ), ಪುಟ 558, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, 1986, 3. ಕೆ. ರವೀಂದ್ರನಾಥ, ಕನ್ನಡ ಟೀಕಾಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, 2006
2. ಎಂ.ಎಂ. ಕಲಬುರ್ಗಿ, ಮಾರ್ಗ ಸಂ. 3, ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು, 1998, ಪು. 381

3. ಇಮ್ಮಡಿ ಶಿವಬಸವಸ್ವಾಮಿಗಳು (ಸಂ), ಅಲ್ಲಮಪ್ರಭುವಿನ ಟೀಕಿನ ವಚನಗಳು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 1986, ಪು. 1
4. ಅದೇ, ಪು. 318
5. ಅದೇ, ಪು. 5
6. ಅದೇ ಪು. 34
7. ಅಲ್ಲಮನ ವಚನಚಂದ್ರಿಕೆ, ಪೀಠಿಕೆ, ಪು. 19
8. ಇಮ್ಮಡಿ ಶಿವಬಸವಸ್ವಾಮಿಗಳು (ಸಂ), ಅಲ್ಲಮಪ್ರಭುವಿನ ಟೀಕಿನ ವಚನಗಳು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 1986, ಮುನ್ನುಡಿ, ಪು. 46
9. ಸಂ. ಶಿ. ಭೂಸನೂರಮಠ (ಸಂ), ಪ್ರೌಢರಾಯನ ಕಾವ್ಯ, ಸಂ. 1, ಪ. 40, ಮುರುಘಾಮಠ, ಧಾರವಾಡ, 1957
10. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪು. 266, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1978
11. ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದ ತಾಡೋಲೆ ಸಂಖ್ಯೆ 358
12. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪು. 267, ಅಡಿಟಿಪ್ಪಣಿ 12 (ಕಲ್ಲಪ್ಪ ರೇಶ್ಮಿ ಚಿತಾಪುರ ಅವರಲ್ಲಿ ದೊರಕಿದ ಪ್ರಭುದೇವರ ಟೀಕಿನ ವಚನಗಳ ಹಸ್ತಪ್ರತಿ)
13. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪು. 270
14. ಅದೇ, ಪು. 275
15. ಸಂ.ಶಿ. ಭೂಸನೂರಮಠ (ಸಂ), ಲಿಂಗಲೀಲಾವಿಲಾಸ ಚಾರಿತ್ರ, ಮುರುಘಾಮಠ, ಧಾರವಾಡ, 1956
16. ಎಂ.ಎಸ್. ಸುಂಕಾಪುರ (ಸಂ), ಸಕಲ ಪುರಾತನರ ಬೆಡಗಿನ ವಚನಗಳು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1978
17. ಆರ್.ಸಿ. ಹಿರೇಮಠ (ಸಂ), ವಿಶೇಷಾನುಭವ ಷಟ್ಸ್ಥಲ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1971
18. ಅದೇ, ಪು. 128

□

# ದೇವರ ದಾಸಿಮಯ್ಯ - ಒಂದು ಟಿಪ್ಪಣಿ

ಪ್ರೊ. ಚಂದ್ರಶೇಖರಯ್ಯ

ದೇವರ ದಾಸಿಮಯ್ಯನವರ, 'ನಿಮ್ಮ ಶರಣರ ಸೂಳ್ನುಡಿಯನೊಂದರಗಳಿಗೆಯಿತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥ!' ಎಂಬ ನುಡಿ ಅವರ ಕಾಲಕ್ಕಾಗಲೆ ವಚನ ಸಾಹಿತ್ಯ ಒಂದು ಪ್ರಕಾರವಾಗಿ ವಿಕಾಸದ ದಿಕ್ಕು ಹಿಡಿದಿದ್ದ ಬಗೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಧ್ವನಿಸುತ್ತದೆ. ಸಾಹಿತ್ಯ ಸಂದರ್ಭವನ್ನು ಹೊರತುಪಡಿಸಿ ಹೇಳುವುದಾದರೆ ಈ ನುಡಿ ಧಾರ್ಮಿಕ ಅಥವಾ ಆಧ್ಯಾತ್ಮಿಕ ವಲಯದಲ್ಲಿ ಆಗಲೆ ಚರ್ಚೆಗೊಳಗಾಗುತ್ತಿದ್ದ ಪುರೋಗಾಮಿ ಚಿಂತನೆಗಳು ಹಲವಾರು ಇದ್ದುವು ಎಂಬುದನ್ನು ತೆರೆದಿಡುವುದರ ಜೊತೆಗೆ ಅಂತಹ ವಿಚಾರಗಳು 'ದಾಸನ ಕುಲ' ಪ್ರವರ್ತಕರ ನಡುವೆ ಎಷ್ಟು ಗಣ್ಯವಾಗಿದ್ದುವು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಮುಂದೆ ಬಸವಾದಿ ಪ್ರಮಥರ ಕಾಲದಲ್ಲಿ ಇದೇ ಸಾಹಿತ್ಯಪ್ರಕಾರ ಜಗತ್ತೇ ವಿಸ್ಮಯಪಡುವಂತಹ ವೈಚಾರಿಕ ಮತ್ತು ಅನುಭಾವಿಕ ಅಭಿವ್ಯಕ್ತಿಗೆ ಮಾಧ್ಯಮವಾಯಿತೆಂಬುದನ್ನು ನಾವು ಕಂಡಿದ್ದೇವೆ.

ಈ ಅಭಿಪ್ರಾಯದ ಅರುಣೋದಯದ ಮುಂಬೆಳಗು ದಾಸಿಮಯ್ಯನವರ ವಚನಗಳು! ಆದರೆ ಇದುವರೆಗೆ ದೊರಕಿರುವ ದಾಸಿಮಯ್ಯನವರ ವಚನಗಳಲ್ಲೆಲ್ಲಿಯೂ ಅವರು ಈ ಪ್ರಕಾರವನ್ನು 'ವಚನ'ವೆಂದು ಕರೆದಂತೆ ಕಾಣುವುದಿಲ್ಲ. ಆದಾಗ್ಯೂ ಅವರ 'ಸೂಳ್ನುಡಿ' ಅಥವಾ 'ಮೃಡಭಕ್ತರ ನುಡಿಗಡಣ'ವೆಂಬ ಹೇಳಿಕೆಗಳು ವಚನಪ್ರಕಾರದ ವಿಕಾಸದ ಮೊದಮೊದಲ ಸ್ಪಷ್ಟ ಹೆಜ್ಜೆಗಳೆಂದು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಮತ್ತು ದಾಸಿಮಯ್ಯಗಳಿಗೂ ಹಿಂದಿನವರ ವಚನಗಳು ಲಭ್ಯವಿಲ್ಲವೆಂಬ ಕಾರಣದಿಂದಲೂ ದಾಸಿಮಯ್ಯನವರೇ ವಚನಪ್ರಕಾರದ ಆದ್ಯರೆಂದು ಸಮರ್ಥಿಸಬಹುದು. ಆದರೆ ಅವರೇ ತಿಳಿಸಿರುವಂತೆ ಸೂಳ್ನುಡಿಗಳನ್ನು ನುಡಿಯುತ್ತಿದ್ದ ಮೃಡಭಕ್ತರಿದ್ದರು ಎಂಬುದನ್ನು ಗಮನಿಸಬೇಕು.

ದಾಸಿಮಯ್ಯನವರನ್ನು ಆದ್ಯರೆಂದು ಕರೆಯುವಾಗ ಅವರನ್ನು ವಚನ ಸಾಹಿತ್ಯದ ಆದ್ಯ ಪ್ರವರ್ತಕರೆಂದು ಒಪ್ಪಿದಂತೆಯೆ. ಆದಿಕವಿ ವಾಲ್ಮೀಕಿ ಅಥವಾ ಆದಿಕವಿ ಪಂಪ ಎನ್ನುವ ಹಾಗೆ. ಅಂದಮೇಲೆ ಅವರು ಆದ್ಯರಷ್ಟೇಯಲ್ಲ. ಅವರನ್ನು ವಚನ ಶಿಲ್ಪ ಕಡೆದ ಪ್ರಪ್ರಥಮ ರೂವಾರಿಯೆಂದೂ ಗುರುತಿಸಬಹುದು. ಅಂದರೆ ಅವರ ವಚನಗಳನ್ನು ಬಸವಣ್ಣ, ಅಲ್ಲಮ, ಅಕ್ಕ, ಸಿದ್ಧರಾಮ, ಚೆನ್ನಬಸವಣ್ಣ ಮುಂತಾದವರ ವಚನಗಳಿಗೆ ಸರಿಸಮವೆಂದು

ಸಮರ್ಥಿಸಿಕೊಳ್ಳುವ ವಿಚಾರ ಇಲ್ಲಿ ಅಪ್ರಸ್ತುತ. ಆದರೆ ಈ ಸಾಹಿತ್ಯಪ್ರಕಾರ ಮುಂದೆ ಸೀಮೋಲ್ಲಂಘನ ಮಾಡಿದ ಬಗೆಯ ಆರಂಭಿಕ ಲಕ್ಷಣ, ಚಿಹ್ನೆ, ಗುರುತುಗಳೊಂದಿಗೆ ದಾಸಿಮಯ್ಯನವರ ವಚನಗಳು ಉಪಮೆ, ರೂಪಕ ಮುಂತಾದ ಅಲಂಕಾರಗಳಿಂದಲೂ ವಿಜೃಂಭಿಸಿರುವುದು ಗಮನಾರ್ಹ. ಇಲ್ಲಿ ಮತ್ತೊಂದು ಮುಖ್ಯವಾದ ಆಯಾಮವನ್ನು ಗುರುತಿಸಬಹುದೇನೊ. ಅಂದರೆ ದಾಸಿಮಯ್ಯಗಳಿಗಿಂತ ಪೂರ್ವದಲ್ಲಿ ರಾಜಾಶ್ರಯದ ಮೇಲೆ ಅವಲಂಬಿತವಾಗಿದ್ದ ಕನ್ನಡ ಸಾಹಿತ್ಯಶ್ರೀಯನ್ನು ಅಲ್ಲಿಂದ ಬಿಡುಗಡೆಮಾಡಿ ಕನ್ನಡ ಭಾಷೆ ಜನಪದರ ಅಭಿವ್ಯಕ್ತಿಗೆ ಮಾಧ್ಯಮವಾಗುವಂತೆ ರೂಪಿಸಿದ ಕೀರ್ತಿಯೂ ದಾಸಿಮಯ್ಯನವರಿಗೇ ಸಲ್ಲಬೇಕು.

ಧಾರ್ಮಿಕ ದೃಷ್ಟಿಯಿಂದ ವಿಚಾರಮಾಡುವುದಾದರೆ ಶೈವಪರಂಪರೆ ವೀರಶೈವವಾಗಿ ವಿಕಾಸಗೊಂಡ ಸಂಧಿಕಾಲದಲ್ಲಿ ದಾಸಿಮಯ್ಯನವರ ಆಗಮನ ಮಹತ್ವದ್ದು. ಮುಂದೆ ಬಸವಾದಿ ಶರಣರ ಕಾಲದಲ್ಲಿ ವೀರಶೈವ ಧರ್ಮ ಸ್ಪಷ್ಟವಾದ ಸೈದ್ಧಾಂತಿಕ ನೆಲೆಯನ್ನು ಗುರುತಿಸಿಕೊಂಡುದೇನೊ ನಿಜ. ಆದರೆ ಇದಕ್ಕೆ ಸಂಬಂಧಿಸಿದ ನೀಲನಕ್ಷೆ ಸಿದ್ಧವಾಗತೊಡಗಿದ್ದನ್ನು ದಾಸಿಮಯ್ಯನವರ ವಚನಗಳಲ್ಲಿಯೇ ಕಾಣಬಹುದು. ವೀರಶೈವದ ಗುರು, ಲಿಂಗ, ಜಂಗಮ ಮೊದಲಾದ ಪರಿಕಲ್ಪನೆಗಳ ಜೊತೆಗೆ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ ಸಿದ್ಧಾಂತಗಳೂ ರೂಪುಗೊಳ್ಳತೊಡಗಿದ್ದನ್ನು ದಾಸಿಮಯ್ಯನವರ ವಚನಗಳು ತೋರಿಕೊಡುತ್ತವೆ. ಭವಿ, ಭಕ್ತ, ಶರಣ ಪದಗಳು ಮೊದಲ್ಗೊಂಡು ಗುರುಕಾರುಣ್ಯ, ಘನ, ಐಕ್ಯ, ಕ್ರಿಯೆ, ಗಣಂಗಳು, ಪ್ರಸಾದ, ಪ್ರಸಾದಿ, ಪರಿಣಾಮ, ಪಂಚಾಕ್ಷರಿ, ಕರಸ್ಥಲ, ಬಯಲು, ಬೆಡಗು, ಭಕ್ತಿ, ಮಂತ್ರ, ಲಿಂಗಸಮಯ, ಲಿಂಗಾರ್ಚನೆ, ಲಿಂಗಾರ್ಪಿತ, ರುದ್ರಾಕ್ಷಿ, ವಿಭೂತಿ, ಷಟ್‌ತತ್ತ್ವ, ತನು, ಮನ, ಧನ ಮುಂತಾದುವುಗಳು ಸಾಂದರ್ಭಿಕವಾಗಿ ಅವರ ವಚನಗಳಲ್ಲಿ ಪ್ರಯೋಗವಾಗಿರುವುದನ್ನು ಗಮನಿಸಬಹುದು.

ಇದೇ ಸಂದರ್ಭದಲ್ಲಿ ಮತ್ತೊಂದು ಸಂಗತಿ: ಕೆಂಭಾವಿ ಭೋಗಯ್ಯ, ಕೊಂಡಗುಳಿ ಕೇಶಿರಾಜ, ಉದ್ಭಟಯ್ಯ, ಡೋಹರ ಕಕ್ಕಯ್ಯ, ಗುಂಡಯ್ಯ, ಚೆನ್ನಯ್ಯ, ನಕ್ಕಿನಯನಾರ್ ಮೊದಲಾದವರು ದಾಸಿಮಯ್ಯನವರ ಸಮಕಾಲೀನರೊ ಅಲ್ಲವೊ! ಆದರೆ ಅವರನ್ನು ದಾಸಿಮಯ್ಯ ಸ್ಮರಿಸಿರುವುದು ಐತಿಹಾಸಿಕವಾಗಿ ಗಮನಾರ್ಹ. ಇವರಲ್ಲಿ ಒಂದಿಬ್ಬರ ವಚನಗಳು ದೊರಕಿರುವುದೂ ಗಮನಾರ್ಹ.

ತ್ರಿಪದಿ ಛಂದಸ್ಸು ಈ ನಾಡಿನ ಜನಪದರ ಅಭಿವ್ಯಕ್ತಿಯ ಜೀವನಾಡಿಯೆಂಬುದನ್ನು ಬಲ್ಲ ದಾಸಿಮಯ್ಯ ಈ ಪ್ರಕಾರದಲ್ಲಿಯೇ ಕೃಷಿ ಮಾಡಿ ತಮ್ಮ ಮೊದಮೊದಲ ವಚನಗಳನ್ನು ರಚನೆ ಮಾಡಿದಂತೆ ಕಾಣುತ್ತದೆ. ಕಾರಣ ತಮ್ಮ ರಚನೆಗಳು ಜನಪದರಿಗೆ ಹತ್ತಿರವಾಗಿ ಅವರನ್ನು ಮುಟ್ಟಿ ಅವರಿಗೆ ತಮ್ಮ ವಿಚಾರಗಳು ಅರ್ಥವಾಗಲಿ ಎಂಬ ಉದ್ದೇಶವಿರಬಹುದು. ಅಷ್ಟು ಮಾತ್ರವಲ್ಲದೆ ಅವರ ಹಲವಾರು ವಚನಗಳ ಗರ್ಭದೊಳಗೆ ಅಂತರ್ಗತವಾಗಿರುವ

ತ್ರಿಪದಿಗಳನ್ನು ಬಹು ಸುಲಭವಾಗಿ ಹೆಕ್ಕಿ ಹೊರತೆಗೆಯಬಹುದು. ಹಾಗೆಂದು ಅವನ ವಚನಗಳು ತ್ರಿಪದಿಗಳ ವಿಸ್ತೃತತೆಯೆಂದು ಭಾವಿಸಲಾಗದು. ಅವರ ಅನೇಕ ಪ್ರಬುದ್ಧ ರಚನೆಗಳು ಮಹಾನುಭಾವವನ್ನು ಮಾತಿಗಿಳಿಸುವ ಸಂದರ್ಭದಲ್ಲಿ ತ್ರಿಪದಿಗಳ ಚೌಕಟ್ಟು ಮತ್ತು ಪ್ರಭಾವದಿಂದ ಸಂಪೂರ್ಣ ಹೊರತಾಗಿ ನಿಲ್ಲುವುದನ್ನು ಕಾಣಬಹುದು. ಸಮರ್ಥನೆಗೆಂದು ಅವರ ಒಂದೆರಡು ರಚನೆಗಳನ್ನು ನೋಡಬಹುದು. ತ್ರಿಪದಿಯನ್ನೇ ಹೋಲುವ ವಚನಕ್ಕೆ ಒಂದು ಉದಾಹರಣೆ:

ಹೊಲಬನರಿಯದ ಗುರು ಸುಲಭನಲ್ಲದ ಶಿಷ್ಯ
ಕೆಲಬಲನ ನೋಡದುಪದೇಶ ಅಂಧಕನ
ಲಾಭ ಹೊಕ್ಕಂತೆ ಕಾಣಾ ರಾಮನಾಥ.

ಹಾಗೆಯೆ ದಾಸಿಮಯ್ಯನವರು ತಮ್ಮ ಮಹಾನುಭಾವವನ್ನು ಮಾತಿಗಿಳಿಸುವ ವಚನಕ್ಕೆ ಒಂದು ಉದಾಹರಣೆ :

ಒಡಲುಗೊಂಡೆನಾಗಿ ಮೃಡ! ನಿಮಗೆ ಹಗೆಯಾದೆನಯ್ಯಾ.
ಆನು ಒಡಲುಗೊಂಡಡೇನು?
ಕಡಲೊಳಗಣ ಬೊಬ್ಬುಳಿಕೆ ಕಡಲೊಳಗೆ ಅಳಿವಂತೆ
ಎನ್ನ ಒಡಲಳಿದು ಹೋದಡೇನು?
ಪ್ರಾಣ ನಿಮ್ಮ ಎಡೆಯಲಡಗುವುದಯ್ಯಾ, ರಾಮನಾಥ.

ಈ ಬಗೆಯ ಆತ್ಮನಿರೀಕ್ಷಣೆ ಮಾಡಿಕೊಳ್ಳುವ ಹಲವಾರು ವಚನಗಳು ದಾಸಿಮಯ್ಯ ಆದ್ಯ ವಚನಕಾರರಷ್ಟೇ ಅಲ್ಲದೆ ಅವರೊಬ್ಬ ಅನುಭಾವಿಯೆಂಬುದನ್ನು ಅನಾವರಣಗೊಳಿಸುತ್ತವೆ. ಹಾಗೆಯೆ ಭಗವಂತನ ಇರುವಿಕೆಯನ್ನು ಕುರಿತಂತೆ ವಿಚಾರಮಾಡಿ ಗ್ರಹಿಸುವ ಅವರು ಮುಂದಿನ ವಚನಕಾರರಿಗೆ ಮೇಲ್ಪಂಕ್ತಿ ಹಾಕಿಕೊಡುತ್ತಿದ್ದಾರೊ ಎನ್ನುವಂತೆ ಅವರ ಮತ್ತೊಂದು ವಚನ ಹೀಗಿದೆ:

ಮರನೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ತೋರದಂತಿರಿಸಿದೆ
ಶರೀರದೊಳಗೆ ಆತ್ಮನನಾರೂ ಕಾಣದಂತಿರಿಸಿದೆ
ನೀ ಬೆರಸಿಹ ಭೇದಕ್ಕೆ ಬೆರಗಾದೆನಯ್ಯಾ ರಾಮನಾಥ.

ದಾಸಿಮಯ್ಯನವರ ದೃಷ್ಟಿಯಲ್ಲಿ ಒಡಲೆಂಬುದು ಶ್ರೇಷ್ಠವೂ ಅಲ್ಲ ಕನಿಷ್ಠವೂ ಅಲ್ಲವೆನಿಸುತ್ತದೆ. ಪರಮಾತ್ಮನ ಅರಿವಿಗೆ ಒಡಲ ಮಾಧ್ಯಮ ಎಷ್ಟು ಅಗತ್ಯವೊ ಅದೇ ಒಡಲು ಪರಮಾತ್ಮನ ಅರಿವಿಗೆ ಅಡ್ಡಬರುವುದನ್ನು ಅವರು ವಿಶ್ಲೇಷಿಸಿ ನುಡಿಯುತ್ತಾರೆ. ಆದರೆ ಅವರು ತಮ್ಮನ್ನು ಒಡಲುಗೊಂಡವನೆಂದೂ, ಪರಿಣಾಮವಾಗಿ ಹಸಿವವನೆಂದೂ

ಹುಸಿವವನೆಂದೂ ಜರಿಯಬೇಡವೆಂದು ಪರಮಾತ್ಮನಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ. ಅಷ್ಟು ಮಾತ್ರವಲ್ಲ, 'ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥಾ!' ಎಂದು ತಮ್ಮ ಇಷ್ಟದೈವಕ್ಕೆ ಒಂದು ಬಗೆಯ ಸವಾಲನ್ನು ಹಾಕುತ್ತಾರೆ. ಮುಂದುವರಿದು ಒಡಲು ಆತ್ಮದ ವಿಚಾರವಾಗಿ ತಮ್ಮ ಅಭಿಮತವನ್ನು ವಿಸ್ತರಿಸಿ ಹೇಳುತ್ತ ದೇವನಿವಾಸಿ ಒಡಲಿಗೆ ಒತ್ತುಕೊಡುತ್ತಲೇ ದೇವಾಲಯ-ದೇವರು ಪರಿಕಲ್ಪನೆಯನ್ನು ಗೌಣಗೊಳಿಸುವ ಪ್ರಯತ್ನ ಮಾಡುವಂತೆ ಕಾಣುತ್ತದೆ. ಹೀಗೆಂದು ಒಪ್ಪುವುದಾದರೆ ಮುಂದೆ ಶರಣರು ದೇವಾಲಯ ಸಂಸ್ಕೃತಿಯನ್ನು ನಿರಾಕರಿಸುವ ಹೋರಾಟಕ್ಕೆ ಇದು ಆರಂಭವೆಂದು ಹೇಳಬಹುದು.

ದೇಹವೂ ದೇವರ ಕೊಡುಗೆಯೆಂದು ಹೇಳುವ ಸಂದರ್ಭದಲ್ಲಿ ದಾಸಿಮಯ್ಯನವರು 'ಕಾಯ'ವೆಂಬ ಶಬ್ದವನ್ನು ಪ್ರಯೋಗಿಸುತ್ತಾರಾದರೂ 'ಕಾಯಕ'ವೆಂಬ ಪದ ಅವರ ವಚನಗಳಲ್ಲೆಲ್ಲಿಯೂ ಬಂದಂತೆ ಕಾಣುವುದಿಲ್ಲ. ಹಾಗೆಯೆ, 'ದಾಸೋಹ'ವೆಂಬ ಪದವೂ ಸಹ. ಆದರೆ ದಾಸಿಮಯ್ಯನವರ ಬದುಕಿನಲ್ಲಿ ನಡೆಯಿತೆಂದು ನಂಬಲಾಗಿರುವ 'ಶವನಿಧಿ'ಯ ಪ್ರಸಂಗದ ಅರ್ಥವನ್ನು ವಿಸ್ತರಿಸಿ ಗ್ರಹಿಸುವುದಾದರೆ ಅವರು ದಾಸೋಹನಿರತರಾಗಿದ್ದರೆಂದು ತಿಳಿದುಬರುತ್ತದೆ. ತನು ಮನ ಧನಗಳನ್ನು ಕುರಿತು ಹೇಳುವ ಅವರ ಒಂದೆರಡು ವಚನಗಳಲ್ಲಿ ದಾಸೋಹದ ಧ್ವನಿ ಇರುವಂತೆ ತೋರುತ್ತದೆ. ಅಂದರೆ ಅವರು 'ಕಾಯಕ' 'ದಾಸೋಹ' ಪದಗಳನ್ನು ಟಂಕಿಸದಿದ್ದರೂ ಅವರು ಕಾಯಕದಾಸೋಹಿಗಳೆಂಬುದು ಅವರ ನಾಲ್ಕಾರು ವಚನಗಳಲ್ಲಿ ಸ್ಪಷ್ಟವಾಗುತ್ತದೆ.

ತಮ್ಮ ವೃತ್ತಿಯನ್ನು ಕುರಿತು ಹೇಳುವ ದಾಸಿಮಯ್ಯನವರ ಪ್ರಸಿದ್ಧ ವಚನರೂಪಕ ಮತ್ತು ಬೆಡಗಿನ ಅರ್ಥಗಳಿಗೆ ಅಪರೂಪದ ಉದಾಹರಣೆ. ಅವರ ನಂತರ ಹಲವು ವೃತ್ತಿ ಕಾಯಕಗಳನ್ನು ಹಿಡಿದು ಬಂದ ಶರಣರು ಅದಕ್ಕೂ ಮುನ್ನ ಕೀಳೆಂದು ಪರಿಗಣಿಸಲ್ಪಡುತ್ತಿದ್ದ ತಮ್ಮ ತಮ್ಮ ದುಡಿಮೆಯಲ್ಲೆ ದೇವರ ಇರುವಿಕೆಯನ್ನು ಕಂಡು ವೃತ್ತಿಗೌರವಕ್ಕೆ ಭೂಮಿಕೆ ಸಿದ್ಧಪಡಿಸುತ್ತ ಉದ್ಗರಿಸಿದ ರಚನೆಗಳಿಗೆ ಈ ವಚನವೇ ಪ್ರೇರಣೆಯ ಸೆಲೆ ಎನಿಸುತ್ತದೆ. ಹೀಗಾಗಿ ತುಳಿತಕ್ಕೊಳಗಾಗಿದ್ದ ಬಹುಸಂಖ್ಯಾತರ ಪರವಾಗಿ ದನಿಯೆತ್ತಿದ ಆದ್ಯರಲ್ಲಿಯೂ ದಾಸಿಮಯ್ಯ ಪ್ರಮುಖರೆಂಬುದನ್ನು ಮರೆಯುವಂತಿಲ್ಲ. ಅವರ ಪ್ರಸಿದ್ಧ ವಚನ ಹೀಗಿದೆ:

> ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ
> ಸಮಗಾಲನಿಕ್ಕಿ ಅಣಿಯೇಳ ಮುಟ್ಟದೆ
> ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು.
> ಈ ಸೀರೆಯ ನೆಯ್ದವ ನಾನೋ ನೀನೋ? ರಾಮನಾಥ.

ಬಸವಾದಿ ಪ್ರಮಥರ ಕಾಲದಲ್ಲಿ ಹುಟ್ಟಿಕೊಂಡ ದಲಿತಸಂವೇದಿ ಪ್ರತಿಭಟನೆ ಅಬ್ಬರವಾಗಲು ದಾಸಿಮಯ್ಯಗಳಂತಹ ಪುರಾತನರು ಕಾರಣವೆಂದು ಇತಿಹಾಸ ಗುರುತಿಸಿದೆ. ದಾಸಿಮಯ್ಯನವರು ತಮ್ಮ ಸಮಕಾಲೀನ ಧಾರ್ಮಿಕ ಸಾಮಾಜಿಕ ಸ್ಥಿತಿಗತಿಗಳನ್ನು ಚೆನ್ನಾಗಿ

ಅರ್ಥಮಾಡಿಕೊಂಡಿದ್ದವರು. ಹಿಂದುಳಿದ ವರ್ಗದಲ್ಲಿ ಹುಟ್ಟಿದರೂ ಅವರು ತಮ್ಮ ಬದುಕಿನಲ್ಲಿ ಆಚರಣೆಗೆ ತಂದ ಆದರ್ಶಗಳಿಂದಾಗಿ ಸಮಕಾಲೀನ ಪ್ರಸಿದ್ಧರಲ್ಲಿ ಒಬ್ಬರಾಗಿದ್ದರು ಎಂಬುದೂ ಇತಿಹಾಸವೆ. ಅವರ ಮಾತುಗಳನ್ನು ಕೇಳುವ ಅನುಯಾಯಿ ಹಿತೈಷಿಗಳು ಅವರಿಗೆ ಬಹುಸಂಖ್ಯೆಯಲ್ಲಿಯೇ ಇದ್ದರು. ಈ ಸಂಗತಿಯನ್ನು ಅವರ ಬದುಕಿನಲ್ಲಿ ಜರುಗಿದ ಒಂದೆರಡು ಘಟನೆಗಳಿಂದ ಸಮರ್ಥಿಸಬಹುದು. ಹಾಗಾಗಿ ಅವರ ನುಡಿಗಳಿಗೆ ಅಥವಾ ವಚನಗಳಿಗೆ ಬಹಳ ಬೆಲೆಯಿತ್ತೆಂದು ಧಾರಾಳವಾಗಿ ಹೇಳಬಹುದು. ಇದರಿಂದ ಅವರ ಸೂಳ್ನುಡಿಗಳು ಒಂದು ಪ್ರಕಾರವಾಗಿ ರೂಪುಗೊಳ್ಳಲೂ ಸಹಾಯವಾಗಿರಬಹುದು.

ಈ ಹಿನ್ನೆಲೆಯಲ್ಲಿ ದಾಸಿಮಯ್ಯಗಳ ವಚನಗಳನ್ನು ಪರಿಶೀಲಿಸಿದಾಗ ಅವುಗಳ ಮಹತ್ವ ಗಮನಕ್ಕೆ ಬರುತ್ತದೆ. ಇಲ್ಲಿ ಒಂದು ವಿಚಾರವನ್ನು ಮರೆಯುವಂತಿಲ್ಲ. ದಾಸಿಮಯ್ಯ ಒಂದು ನೂತನ ಛಂದಸ್ಸನ್ನೊ ಅಥವಾ ಸಾಹಿತ್ಯಪ್ರಕಾರವನ್ನೊ ನಿರ್ಮಿಸಹೊರಟವರೆಂದು ತಿಳಿದರೆ ತಪ್ಪಾದೀತು. ಅವರ ವಿಸ್ತೃತ ಕಾರ್ಯಕ್ಷೇತ್ರಕ್ಕೆ ಮತ್ತು ಅದರ ವಿವರಣಾತ್ಮಕ ಅಭಿವ್ಯಕ್ತಿಗೆ ಇದು ನಿಮಿತ್ತವೂ ಮತ್ತು ಮಾಧ್ಯಮವೂ ಆಯಿತೆಂದು ತಿಳಿಯುವುದು ಅರ್ಥಪೂರ್ಣವೆನಿಸುತ್ತದೆ. ಅವರ ಸಾಮಾಜಿಕ ಧಾರ್ಮಿಕ ಕಳಕಳಿಯನ್ನು ಪರಾಮರ್ಶಿಸುವಾಗ ಮುಂದೆ ಜರುಗಲಿದ್ದು ಜಗತ್ತು ವಿಸ್ಮಯಪಡುವಂತಹ ಆಂದೋಲನಕ್ಕೆ ದಾಸಿಮಯ್ಯನವರ ಬದುಕು ಬರಹಗಳು ಯಾವ ಪ್ರಮಾಣದಲ್ಲಿ ಪ್ರಭಾವ ಬೀರಿದುವು ಎಂಬುದು ಕಣ್ಣುಮುಂದೆ ನಿಲ್ಲುತ್ತದೆ. ಈ ವಿಚಾರಗಳನ್ನು ಮುಂದಿಟ್ಟುಕೊಂಡು ದಾಸಿಮಯ್ಯನವರ ಒಂದೆರಡು ವಚನಗಳನ್ನು ಪರಿಶೀಲಿಸಬಹುದು.

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ!
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ! ರಾಮನಾಥಾ.

ಮೇಲ್ನೋಟಕ್ಕೆ ಇದೊಂದು ಸಾಮಾನ್ಯ ವಚನವೆಂದು ಗ್ರಹಿಸುವುದು ಸ್ವಾಭಾವಿಕವೆ. ಆದರೆ ಇದನ್ನು ಅಂದಿನ ಜನಪದರ ಆರ್ಥಿಕ ಹಿನ್ನೆಲೆಯಿಟ್ಟುಕೊಂಡು ನೋಡಿದರೆ ಎಂತಹ ಕಟುಸತ್ಯವೊಂದನ್ನು ದಾಖಲಿಸುತ್ತಿದೆ ಎಂಬುದು ಆಶ್ಚರ್ಯವುಂಟುಮಾಡುತ್ತದೆ. ಬಹುಸಂಖ್ಯಾತರು ಹೊಟ್ಟೆತುಂಬ ಉಣಲಿಕ್ಕೆ ನಡೆಸುತ್ತಿದ್ದ ಹೋರಾಟದ ಚಿತ್ರ ಇದರಲ್ಲಿ ಅಡಗಿದೆ ಎನಿಸುತ್ತದೆ. ಈ ದೃಷ್ಟಿಯಿಂದ ಈ ವಚನ ಅಂದಿಗೆ ಮಾತ್ರವಲ್ಲದೆ ಇಂದಿಗೂ ಪ್ರಸ್ತುತವೆ.

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ.
ಸುಳಿದು ಬೀಸುವ ವಾಯು ನಿಮ್ಮ ದಾನ.

ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ, ರಾಮನಾಥ.

ಹಾಗೆಯೆ,

ಎತ್ತು ನಿಮ್ಮದಾನ; ಬಿತ್ತು ನಿಮ್ಮ ದಾನ.
ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ.

ಹಾಗೆಯೆ,

ಕಾಯ ನಿಮ್ಮ ದಾನ; ಜೀವ ನಿಮ್ಮದಾನ.
ಕಾಯ ಜೀವ ಉಳ್ಳಲ್ಲಿಯೇ ನಿಮ್ಮ ಪೂಜಿಸದ
ನಾಯಿಗಳನೇನೆಂಬೆ ಹೇಳ? ರಾಮನಾಥ.

ಅಪರೂಪವೆನ್ನಬಹುದಾದ ಮೇಲಿನ ವಚನಗುಚ್ಛಗಳಲ್ಲಿ ಹೊಸ ಅರ್ಥಗಳನ್ನು ಹುಡುಕಹೊರಟರೆ ಒಂದೆರಡು ಕ್ರಾಂತಿಕಾರಿ ಸಂಗತಿಗಳು ಅಭಿವ್ಯಕ್ತಗೊಂಡಿವೆ ಎನಿಸುತ್ತದೆ. ಇಲ್ಲಿ ದೇವರು, ಅನ್ಯರು ಮತ್ತು ಕುನ್ನಿಗಳೆಂದು ವಿಂಗಡಿಸಿಕೊಂಡು ಪ್ರಸ್ತುತಪಡಿಸಿರುವ ವಿಚಾರವನ್ನು ಗಮನಿಸಿದರೆ ಅಂದು ಹೊಗಳುವ ವೃತ್ತಿ ಹಿಡಿದು ಜೀವನ ಸಾಗಿಸುತ್ತಿದ್ದ ಒಂದು ವರ್ಗವೇ ಇತ್ತೆಂಬುದು ಸ್ಪಷ್ಟವಾಗುತ್ತದೆ. ಈ ಹೊಗಳುಭಟ್ಟರ ವರ್ಗದ ಜೊತೆಗೆ ಹೊಗಳಿಸಿಕೊಳ್ಳುವ 'ಅನ್ಯರು', ಅಂದರೆ ರಾಜಮಹಾರಾಜರು ಮತ್ತು ಸಿರಿವಂತ ವರ್ಗವೊಂದೂ ಇತ್ತು. ಆದರೆ ಇವೆರಡು ವರ್ಗಗಳು ಸಕಲ ಜೀವಾವಳಿಯ ಕಾಯ ಮತ್ತು ಜೀವ ಭಗವಂತನ ಕೊಡುಗೆ ಎಂಬ ಸಹಜ ಸತ್ಯ ಸಂಗತಿಯನ್ನು ಅರಿಯದೆ ಮರೆತಿರುವ ಸಂಗತಿಯನ್ನು ಇಲ್ಲಿ ಒತ್ತಿ ಹೇಳುವಂತೆ ಕಾಣುತ್ತಿದೆ. ಅಂದರೆ ಕಾಯವಿಡಿದ ಜೀವಿಗಳೆಲ್ಲರೂ ಸಮಾನರು ಎಂಬುದನ್ನು ಈ ವಚನಗಳಲ್ಲಿ ದಾಸಿಮಯ್ಯ ಹೇಳುತ್ತಿರಬಹುದು. ತಮ್ಮ ಇನ್ನೂ ನಾಲ್ಕಾರು ವಚನಗಳಲ್ಲಿ ಅವರು ಇದೇ ವಿಚಾರವನ್ನು ಪ್ರಸ್ತಾಪಿಸುತ್ತಿರುವುದನ್ನು ಗಮನಿಸಬಹುದು. ಹೀಗೆ ವರ್ಣಾಧಾರಿತ ಮೇಲುಕೀಳುಗಳನ್ನು ಸೌಮ್ಯವಾಗಿಯೆ ಖಂಡಿಸುತ್ತಿರುವ ದಾಸಿಮಯ್ಯ ಹೆಣ್ಣುಗಂಡುಗಳ ನಡುವಿನ ಅಸಮಾನತೆಯನ್ನೂ ಒಪ್ಪಿರಲಿಲ್ಲವೆಂಬುದು ಅತ್ಯಂತ ಮಹತ್ವದ ಸಂಗತಿ.

ಮೊಲೆ-ಮುಡಿ ಬಂದಡೆ ಹೆಣ್ಣೆಂಬರು.
ಗಡ್ಡ-ಮೀಸೆ ಬಂದಡೆ ಗಂಡೆಂಬರು.
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ! ರಾಮನಾಥ.

ಸಮಾನತೆಯ ಆಧಾರದ ಮೇಲೆ ನಿಂತ ಸಾಂಸಾರಿಕ ಬದುಕನ್ನು ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಎಂದು ಸಮರ್ಥಿಸುವ ದಾಸಿಮಯ್ಯ ಆದಿಯಲ್ಲಿ ಒಂದೇ ಎರಡಾದ ಬಗೆಯನ್ನು ಅತ್ಯಂತ ಪರಿಣಾಮಕಾರಿಯಾಗಿ, 'ನಿಡಿದೊಂದು ಕೋಲನು ಕಡಿದು ಎರಡು ಮಾಡಿ'

ಎಂದು ಆರಂಭವಾಗುವ ವಚನದಲ್ಲಿ ಮತ್ತಷ್ಟು ಸ್ಫುಟಗೊಳಿಸುತ್ತಾರೆ.

ಬಸವಣ್ಣನವರು ಮೊದಲ್ಗೊಂಡು ಅನೇಕ ಶರಣರು ದಾಸಿಮಯ್ಯ ವ್ಯಕ್ತಪಡಿಸಿರುವ ವಿಚಾರಗಳನ್ನೇ ಮುಂದುವರಿಸಿರುವುದಕ್ಕೆ ನಾಲ್ಕಾರು ನಿದರ್ಶನಗಳು ದೊರಕುತ್ತವೆ. ಅಂದರೆ ಮುಂದಿನವರು ದಾಸಿಮಯ್ಯಗಳ ಲೋಕದೃಷ್ಟಿಯನ್ನು ಹಂಚಿಕೊಂಡು ಅನುಮೋದಿಸಿ ದಂತಾಯಿತು. ಅಷ್ಟರಮಟ್ಟಿಗೆ ದಾಸಿಮಯ್ಯ ತಮ್ಮ ನಂತರದ ವಚನಕಾರರ ಮೇಲೆ ಪ್ರಭಾವ ಬೀರಿದರೆಂದರೆ ಅವರ ಕೊಡುಗೆ ಅನುಕರಣೀಯವೆನ್ನುವಷ್ಟು ಪ್ರಭಾವಯುತವಾಗಿತ್ತೆಂಬು ದರಲ್ಲಿ ಎರಡು ಮಾತಿಲ್ಲ. ಅದರಲ್ಲೂ ಬಸವಣ್ಣನವರ ಮೇಲೆ ದಾಸಿಮಯ್ಯನವರ ಪ್ರಭಾವ ದಟ್ಟವೆಂದರೂ ಸರಿಯೆ. ಅವರ ಇಪ್ಪತ್ತಕ್ಕೂ ಹೆಚ್ಚಿನ ವಚನಗಳು ದಾಸಿಮಯ್ಯನ ವಿಚಾರಗಳನ್ನೇ ಬೇರೊಂದು ಧಾಟಿಯಲ್ಲಿ ಪ್ರಸ್ತಾಪಿಸಿರುವುದನ್ನು ಕಾಣುತ್ತೇವೆ.

ಗುರು, ಲಿಂಗ, ಜಂಗಮ, ದೇವರು, ಭಕ್ತ, ಭಕ್ತಿ ಮೊದಲ್ಗೊಂಡು ದಾಸಿಮಯ್ಯನವರ ಪರಿಕಲ್ಪನೆಗಳನ್ನು ಮುಂದಿನ ವಚನಕಾರರು ಬಹುಮಟ್ಟಿಗೆ ಒಪ್ಪಿ ಅವುಗಳ ಹೆಚ್ಚಿನ ಪರಿಷ್ಕರಣೆಗೆ ತೊಡಗಿದುದನ್ನು ಅನೇಕ ಸಂದರ್ಭದಲ್ಲಿ ಕಾಣುತ್ತೇವೆ. ಸರ್ವರೊಳಗೂ ಮನೆಮಾಡಿಕೊಂಡಿರುವ ಶಿವಚೈತನ್ಯವನ್ನು ಅರಿಯಲಿಕ್ಕೆ, 'ಗುರುವಿನಿಂದಲ್ಲದಾಗದು' ಎನ್ನುವ ದಾಸಿಮಯ್ಯನವರ ಅಭಿಪ್ರಾಯವನ್ನು ಗಮನಿಸಬೇಕು. ಹಾಗೆಯೇ ಸರ್ವರೊಳಗೂ ಶಿವಚೈತನ್ಯವಿದೆಯೆಂದು ಪರಿಭಾವಿಸಿ ಭಕ್ತಿಮಾಡುವ ಭಕ್ತನ ಮನೆಯ ಹಿತ್ತಿಲ ಬೇಲಿಯಾಗಿಪ್ಪೆ ಎನ್ನುವ ಅವರ ಸಮರ್ಪಣಾಭಾವವನ್ನು ಗುರುತಿಸಬಹುದು. ಆದರೆ ಭಕ್ತಿ ಮಾಡುವುದು ಸುಲಭದ ಮಾತಲ್ಲ. 'ಮಡಿಲಲ್ಲಿ ಲಿಂಗವ ಕಟ್ಟಿದಡೇನೊ! ಲೋಕದ ಅಜ್ಞಾನಿತನ ಬಿಡುವುದೆ?! ನಡೆ ನುಡಿ ಸತ್ಯ ಸದಾಚಾರಿಗಳು ಎಡೆಎಡೆಗೊಬ್ಬರು,' ಎನ್ನುವಲ್ಲಿ ಭಕ್ತನ ಸೋಗಿನಲ್ಲಿ ಕಚ್ಚುವ ಬೊಗಳುವ ಮಂದಿಯೆ ಅಧಿಕವೆಂದು ವಿಡಂಬಿಸುತ್ತಾರೆ.

ಅವೈಜ್ಞಾನಿಕ ಮತ್ತು ವಿವೇಕರಹಿತ ಆಚರಣೆಗಳನ್ನು ಖಂಡಿಸುವ ದಾಸಿಮಯ್ಯ ಹಿಂಸೆಯಲ್ಲಿ ತೊಡಗಿರುವವರನ್ನು ಶಿವಭಕ್ತರೆನ್ನುವುದಿಲ್ಲ. 'ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ ಗೋರಿಗೊಳಿಸಿ ಕುರಿಯ ಕೊರಳನೆ ಕೊಯ್ದೆಂಬ ಕ್ರೂರಕರ್ಮಿಗಳನವರ ಶಿವಭಕ್ತರೆನ್ನಬಹುದೇ?' ಎಂದು ಪ್ರಶ್ನಿಸುತ್ತಾರೆ. ಅಚ್ಚ ಶಿವೈಕ್ಯಂಗೆ ಹೊತ್ತಾರೆ, ಅಮಾವಾಸ್ಯೆ, ಮಟಮಧ್ಯಾಹ್ನ, ಸಂಕ್ರಾಂತಿ, ಹುಣ್ಣಿಮೆಯೆಂದು ಶುಭ ಅಶುಭವೆಂಬ ಕಾಲಮಾನಗಳಿಲ್ಲ. ಉಚ್ಚ, ನೀಚ, ಉತ್ತಮ, ಅಧಮ ಎನ್ನುವ ತರತಮಗಳನ್ನು ನಿರಾಕರಿಸುವ ದಾಸಿಮಯ್ಯ ಎಲ್ಲರೂ ಸಮಾನರೆಂಬ ಸತ್ಯವನ್ನು ಎತ್ತಿ ಹಿಡಿಯುತ್ತ, 'ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ? ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ?' ಎಂದು ಪ್ರಶ್ನಿಸುತ್ತಾರೆ.

ಬದುಕಿನ ಜಂಜಾಟ ಮತ್ತು ಸಮಸ್ಯೆಗಳಿಗೆಲ್ಲ ಮೂಲ ಕಾರಣವೆಂದು ಯಾವುದನ್ನು ಗುರುತಿಸುತ್ತಾರೊ ಅದನ್ನು ದಾಸಿಮಯ್ಯ 'ಕಿಚ್ಚು' ಎಂದು ಧ್ವನಿಪೂರ್ಣವಾಗಿ ಹೆಸರಿಸುತ್ತ

ವಿವರಿಸುವ ಅದ್ಭುತ ರೀತಿ ಹೀಗಿದೆ:

> ನಡೆ-ನೋಟ-ಸೊಲ್ಲೆಡೆಯಲೊಂದು ಕಿಚ್ಚು.
> ಮಡದಿ-ಪುರುಷರೆಡೆಯಲೊಂದು ಕಿಚ್ಚು.
> ತಡದುಂಬೆಡೆಯಲೊಂದು ಕಿಚ್ಚು.
> ಪಡೆದರ್ಥ ಕೆಟ್ಟೆಡೆಯಲೊಂದು ಕಿಚ್ಚು.
> ಕೂಡಿದ ವ್ಯಾಮೋಹ ದೆಡೆಯಲೊಂದು ಕಿಚ್ಚು.
> ಇಂತೀ ಐದು ಕಿಚ್ಚನಿಕ್ಕಿ ಬಾಯಲ್ಲಿ ಮಣ್ಣ ಹೊಯಿದು
> ಕೆಡಿಸಿದೆ ಕಾಣಾ! ರಾಮನಾಥ.

ದಾಸಿಮಯ್ಯನವರು ತಮ್ಮ ಅನೇಕ ವಚನಗಳಲ್ಲಿ ಬದುಕಿನ ರಹಸ್ಯಗಳನ್ನು ಭೇದಿಸುವ, ಅದರ ಸಂಕೀರ್ಣತೆಯನ್ನು ಸರಳಗೊಳಿಸುವ ಮತ್ತು ಅದನ್ನು ಅರ್ಥಪೂರ್ಣಗೊಳಿಸುವುದಕ್ಕೆ ಸಿದ್ಧತೆ ಮತ್ತು ಪರಿಕರಗಳು ಮೊದಲ್ಗೊಂಡು ಸಾಧ್ಯತೆಗಳನ್ನು ಪ್ರಸ್ತಾಪಿಸಿದ್ದಾರೆ. ಬದುಕು ಎಷ್ಟೇ ದುರ್ಭರವೆನಿಸಿದರೂ ಅದು ಹಾಗಾಗುವುದಕ್ಕೊಂದು ಕಾರಣವಿರಬೇಕೆಂದು ಗ್ರಹಿಸುವ ದಾಸಿಮಯ್ಯ ಅದಕ್ಕೆ ಬೆಚ್ಚುವ, ಬೆದರುವ ಅಥವಾ ಹಿಮ್ಮುಖವಾಗುವ ಅಗತ್ಯವಿಲ್ಲವೆಂದು ಭರವಸೆಯ ಮಾತುಗಳನ್ನಾಡುತ್ತಾರೆ. ಅವರ ವಚನಗಳಲ್ಲೇ ಅಪೂರ್ವವೆನ್ನಬಹುದಾದ ಕೆಳಗಿನ ವಚನದಲ್ಲಿ ಅವರು ತಮ್ಮ ಸಂದೇಶವನ್ನು ಬಿತ್ತರಿಸುವ ಪರಿಯನ್ನು ಗಮನಿಸಬಹುದು.

> ಹರ ತನ್ನ ಭಕ್ತರ ತಿರಿವಂತೆ ಮಾಡುವ
> ಒರದು ನೋಡುವ ಮಿಸುನಿಯ ಚಿನ್ನದಂತೆ.
> ಅರೆದು ನೋಡುವ ಚಂದನದಂತೆ.
> ಅರಿದು ನೋಡುವ ಕಬ್ಬಿನ ಕೋಲಿನಂತೆ.
> ಬೆದರದೆ ಬೆಚ್ಚದೆ ಇರ್ದಡೆ
> ಕರವಿಡಿದೆತ್ತಿಕೊಂಬ, ನಮ್ಮ ರಾಮನಾಥನು.

ದಾಸಿಮಯ್ಯನವರ ಇಂತಹ ಇನ್ನೂ ನಾಲ್ಕಾರು ವಚನಗಳು ನಂತರ ಅವತರಿಸಿ ಬಂದ ನೂರಾರು ಶರಣರ ಮೇಲೆ ಪ್ರಭಾವ ಬೀರಿ ಇತಿಹಾಸವನ್ನೆ ಬದಲಿಸುವ ಸಾಮರ್ಥ್ಯ ಪಡೆದಿದ್ದವು ಎಂದರೆ ಅತಿಶಯೋಕ್ತಿ ಎನಿಸುವುದಿಲ್ಲ.

□

# ವಾರ್ತಾ ವಿಹಾರ

## ಬದುಕೇ ಒಂದು ತಪೋರಂಗ

ಮನುಷ್ಯನಲ್ಲಿ ಸಾಧನೆಯ ಸಾಮರ್ಥ್ಯ ಹಾಗೂ ಛಲ ಇದ್ದರೆ ಯಾವ ಎತ್ತರಕ್ಕೂ ಬೇಕಾದರೂ ಏರಬಹುದು. ಅಂತಹವರಿಗೆ ಬದುಕೇ ಒಂದು ತಪೋರಂಗ ಆಗುತ್ತದೆ ಎಂದು ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಅಭಿನಂದನಾ ಸಮಾರಂಭದ ದಿವ್ಯಸಾನ್ನಿಧ್ಯವನ್ನು ವಹಿಸಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ತಿಳಿಸಿದರು.

ಸುವರ್ಣ ಕರ್ನಾಟಕ - 2005ರ ಪ್ರಯುಕ್ತ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಮತ್ತು ಅಭಿನಂದನಾ ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ವಿದ್ವಾಂಸರಾದ ಡಾ. ಸಿ.ಪಿ. ಕೃಷ್ಣಕುಮಾರ್‌ರವರು ವಹಿಸಿದ್ದರು.

ಸಮಾರಂಭದಲ್ಲಿ ಜೀಶಂಪ ಜಾನಪದ ಪ್ರಶಸ್ತಿ ಪಡೆದ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ನಿರ್ದೇಶಕರಾದ ಡಾ. ರಾಮೇಗೌಡ, ಕರ್ನಾಟಕ ಅನುವಾದ ಅಕಾಡೆಮಿಗೆ ಪ್ರಪ್ರಥಮ ಅಧ್ಯಕ್ಷರಾಗಿ ಆಯ್ಕೆಯಾದ ಡಾ. ಪ್ರಧಾನ್ ಗುರುದತ್, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಬಿ.ನಂ. ಚಂದ್ರಯ್ಯ, ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ಗೆ ಮೂರನೇ ಬಾರಿಗೆ ಅಧ್ಯಕ್ಷರಾಗಿ ಚುನಾಯಿತರಾದ ಪ್ರೊ. ಮಲೆಯೂರು ಗುರುಸ್ವಾಮಿ, ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಕೆ. ರಾಮಮೂರ್ತಿರಾವ್‌ರವರನ್ನು ಸನ್ಮಾನಿಸಲಾಯಿತು. ಪ್ರೊ. ಸಿ. ನಾಗಣ್ಣ ಅಭಿನಂದನಾ ಭಾಷಣ ಮಾಡಿದರು.

## ಪ್ರಾಮಾಣಿಕ ಮತದಾನದಿಂದ ಪ್ರಾಮಾಣಿಕ ಜನಪ್ರತಿನಿಧಿಗಳ ಆಯ್ಕೆ

ರಾಜಕೀಯ ಎಂಬುದು ಬದುಕಲ್ಲ, ಅದು ಬದುಕಿನ ಒಂದು ಅಂಗ ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಚಾಮರಾಜನಗರ ತಾಲ್ಲೂಕಿನ ಹರವೆ ಗ್ರಾಮದಲ್ಲಿ ನಡೆದ ಹೋಬಳಿ ಮಟ್ಟದ ವೀರಶೈವ ಸಮಾವೇಶದಲ್ಲಿ ಮಾತನಾಡಿದ ಅವರು, ಉತ್ಕೃಷ್ಟ ಪ್ರಜಾಪ್ರಭುತ್ವ ಇರುವ ನಮ್ಮ ದೇಶದಲ್ಲಿ ರಾಜಕಾರಣದ ಮೇಲೆ ಅಪ್ರಮಾಣಿಕತೆಯ ಮೋಡ ಕವಿದಿದೆ ಎಂದು ವಿಷಾದಿಸಿದರು.

ಸಾಮಾಜಿಕ ಬದ್ಧತೆಗೆ ತೊಂದರೆ ಉಂಟಾದಾಗ ಬಸವಣ್ಣನವರು ಮುಖ್ಯಮಂತ್ರಿ ಸ್ಥಾನ ತ್ಯಜಿಸಿ ತಮ್ಮನ್ನು ಕಾಯಕದಲ್ಲಿ ತೊಡಗಿಸಿಕೊಂಡರು. ಈಗ ಐದು ವರ್ಷಗಳ ಅಧಿಕಾರಕ್ಕೆ

ಜನರ ಪ್ರೀತಿ ವಿಶ್ವಾಸವನ್ನು ಶಾಶ್ವತವಾಗಿ ಕಳೆದುಕೊಳ್ಳುವ ಪರಿಸ್ಥಿತಿ ಇದೆ. ನಾವು ಎಲ್ಲಿಯವರೆಗೆ ಪ್ರಾಮಾಣಿಕವಾಗಿ ಮತದಾನ ಮಾಡುವುದಿಲ್ಲವೋ ಅಲ್ಲಿಯವರೆಗೆ ಪ್ರಾಮಾಣಿಕ ಜನಪ್ರತಿನಿಧಿಗಳನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಪ್ರಾಮಾಣಿಕತೆ ಎಂಬುದು ಕೆಳಹಂತದಲ್ಲಿ ಬರಬೇಕಾಗಿದೆ ಎಂದರು.

ರಾಜ್ಯಸಭಾ ಚುನಾವಣೆಯೊಂದರಲ್ಲಿ ನಮ್ಮ ಪ್ರತಿನಿಧಿಗಳು ವರ್ತಿಸಿದ ರೀತಿ ರಾಜಕಾರಣ ಕಲುಷಿತವಾಗಿರುವುದಕ್ಕೆ ಸಾಕ್ಷಿಯಾಗಿದೆ. ಇಂತಹ ವ್ಯವಸ್ಥೆಯನ್ನು ಬದಲಾಯಿಸುವ ಶಕ್ತಿ ಮತದಾರರಿಗೆ ಮಾತ್ರ ಇದೆ ಎಂದರು.

ಸಮಾರಂಭದಲ್ಲಿ ದೇವನೂರು ಶ್ರೀ ಗುರುಮಲ್ಲೇಶ್ವರ ಮಠದ ಶ್ರೀಗಳು, ಹರವೆ ಮಠದ ಶ್ರೀಗಳು, ಸೋಮಹಳ್ಳಿ ಮಠದ ಶ್ರೀಗಳು, ಕಾರಾಪುರ ಮಠದ ಶ್ರೀಗಳು, ವೀರಶೈವ ಮುಖಂಡರಾದ ಕೆ.ಎಸ್. ನಾಗರಾಜಪ್ಪ, ಹರವೆ ಆನಂದ, ಎ.ಪಿ. ಮಹದೇವಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.

## ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ ಸಂಗೀತ ಸಮ್ಮೇಳನ

ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ ಹನ್ನೆರಡನೆಯ ಸಂಗೀತ ಸಮ್ಮೇಳನವು ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಡಿಸೆಂಬರ್ 2ರಿಂದ 6ರವರೆಗೆ ನಡೆಯಿತು.

ಸಂಗೀತ ಕ್ಷೇತ್ರದಲ್ಲಿ 'ರುದ್ರಪಟ್ಟಣಂ ಸಹೋದರರು' ಎಂದು ಖ್ಯಾತರಾಗಿರುವ ವಿದ್ವಾನ್ ಆರ್.ಎನ್. ತ್ಯಾಗರಾಜನ್ ಹಾಗೂ ಡಾ. ಆರ್.ಎನ್. ತಾರಾನಾಥನ್ ಅವರುಗಳು ಸಮ್ಮೇಳನಾಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ, "ಸಂಗೀತವನ್ನು ಅಭ್ಯಾಸ ಮಾಡುವಾಗ ಸಾಹಿತ್ಯ, ಅರ್ಥ, ಉಚ್ಚಾರಣೆಗಳ ಕಡೆಗೆ ಗಮನ ನೀಡುವುದು ಅಗತ್ಯ. ಜನರಂಜನೆಯ ಜೊತೆಗೆ ಸಂಪ್ರದಾಯಶುದ್ಧತೆಯನ್ನೂ ಉಳಿಸಿಕೊಳ್ಳಬೇಕು. ಹೊಸ ಪ್ರಯೋಗಗಳ ಹೆಸರಿನಲ್ಲಿ ಆಡಂಬರದ ಪ್ರದರ್ಶನ ಮತ್ತು ಅಬ್ಬರದ ಸಂಗೀತಕ್ಕೆ ಮಣೆ ಹಾಕುವ ಪ್ರವೃತ್ತಿ ನಿಲ್ಲಬೇಕು. ಅಂಧಾನುಕರಣೆಯಿಂದ ಯಾವುದೇ ಕಲೆ ಬೆಳೆಯುವುದಿಲ್ಲ. ಸಮರ್ಥನಾದ ಗುರುವಿನಿಂದ ಕಲಿತ ಸಂಗೀತ ಮಾತ್ರ ನಾಲ್ಕು ಕಾಲ ನಿಲ್ಲುತ್ತದೆ. ಸ್ಥಳೀಯ ಪ್ರತಿಭೆಗಳಿಗೆ ಸಾಕಷ್ಟು ಪ್ರೋತ್ಸಾಹವನ್ನು ನೀಡಬೇಕು. ರಾಷ್ಟ್ರೀಯ ಪ್ರಶಸ್ತಿಗಳಿಗೆ ಕನ್ನಡಿಗರನ್ನು ಅವಗಣನೆ ಮಾಡುವ ಪ್ರವೃತ್ತಿ ಹೆಚ್ಚುತ್ತಿದ್ದು, ಇದು ನಿಲ್ಲಬೇಕು" ಎಂಬುದಾಗಿ ಸಂಗೀತ ಕ್ಷೇತ್ರದ ಆಗುಹೋಗುಗಳನ್ನು ತೆರೆದಿಟ್ಟರು.

3.12.2005ರಂದು ಸಮ್ಮೇಳನಾಧ್ಯಕ್ಷರುಗಳಾದ ವಿದ್ವಾನ್ ಆರ್.ಎನ್. ತ್ಯಾಗರಾಜನ್ ಮತ್ತು ಡಾ. ಆರ್.ಎನ್. ತ್ಯಾಗರಾಜನ್ ವಿದ್ವದ್ಗೋಷ್ಠಿಗಳ ಉದ್ಘಾಟನೆ ಮಾಡಿದರು. ಸಮ್ಮೇಳನದ ಅಂಗವಾಗಿ 3.12.2005 ರಿಂದ 5.12.2005 ರವರೆಗೆ ಪ್ರಖ್ಯಾತ ವಿದ್ವಾಂಸರುಗಳಿಂದ ಪ್ರತಿನಿತ್ಯವೂ ಪ್ರಾತ್ಯಕ್ಷಿಕೆಗಳು ಮತ್ತು ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು.

ಪ್ರಿನ್ಸ್ ಶ್ರೀ ಅಶ್ವತಿ ತಿರುನಾಳ್ ರಾಮವರ್ಮ, ವಿದ್ವಾನ್ ಪಿ. ಉನ್ನಿಕೃಷ್ಣನ್, ವಿದ್ವಾನ್ ಆರ್.ಎನ್. ತ್ಯಾಗರಾಜನ್ ಮತ್ತು ಡಾ. ಆರ್.ಎನ್. ತಾರಾನಾಥನ್, ವಿದ್ವಾನ್ ಆರ್. ಕುಮರೇಶ್ ಮತ್ತು ವಿದುಷಿ ಜಯಂತಿ ಕುಮರೇಶ್ ಹಾಗೂ ವಿದುಷಿ ಅನೂರಾಧ ಮಧುಸೂದನ್ ಅವರುಗಳಿಂದ ಸಂಗೀತ ಕಾರ್ಯ ಕ್ರಮಗಳು ನಡೆದುವು.

## ಸಮಾರೋಪ

6.12.2005 ಸಂಜೆ ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ಮೈಸೂರಿನ ಮಹಾಜನ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಆರ್. ವಾಸುದೇವಮೂರ್ತಿ ಅವರು ವಹಿಸಿದ್ದರು. ಜೆಎಸ್‌ಎಸ್ ಸಂಗೀತ ಸಭೆಯ ಸಂಪ್ರದಾಯದಂತೆ, ಸಂಗೀತೋತ್ಸವದ ಅಧ್ಯಕ್ಷರಾದ ವಿದ್ವಾನ್ ಆರ್.ಎನ್. ತ್ಯಾಗರಾಜನ್ ಮತ್ತು ಡಾ. ಆರ್.ಎನ್. ತಾರಾನಾಥನ್ ಅವರುಗಳಿಗೆ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಲಾಯಿತು. ಗಾನಕಲಾಭೂಷಣ ಶ್ರೀ ಆರ್.ಕೆ. ಪದ್ಮನಾಭ ಅವರು ಈ ಸಂದರ್ಭದಲ್ಲಿ ವಿಚಾರ ಪೂರಿತವಾದ ಸಮಾರೋಪ ಭಾಷಣ ಮಾಡಿದರು. ಸಂಗೀತ ಕ್ಷೇತ್ರದಲ್ಲಿ ಅಪಾರವಾದ ಸಾಧನೆ ಮಾಡಿರುವ ವಿದ್ವಾಂಸರುಗಳಾದ ಶ್ರೀ ಆರ್.ವಿ. ರಾಘುವೇಂದ್ರ, ಶ್ರೀ ಪಿ. ನಿತ್ಯಾನಂದರಾವ್, ವಿದುಷಿ ಜಿ.ಎಸ್. ಕಮಲ, ವಿದುಷಿ ಜಿ.ಎಸ್. ರಾಜಲಕ್ಷ್ಮಿ ಹಾಗೂ ಡಾ. ಜಿ.ಎನ್. ಮಧುರಾನಾಥ್ ದೀಕ್ಷಿತ್ ಅವರುಗಳಿಗೆ ಸನ್ಮಾನ ಮಾಡಲಾಯಿತು.

## ಶಿವರಾತ್ರಿ ರಾಜೇಂದ್ರ ಚಿಂತನಮಂದಿರದ ಉದ್ಘಾಟನೆ

ಪರಮಪೂಜ್ಯ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಶ್ರೀ ಟಿ.ಎನ್. ಚತುರ್ವೇದಿಯವರು, ಬೆಂಗಳೂರಿನಲ್ಲಿ ಪ್ರಾರಂಭಿಸಲಾಗಿರುವ ಶಿವರಾತ್ರಿ ರಾಜೇಂದ್ರ ಚಿಂತನಮಂದಿರವನ್ನು ಉದ್ಘಾಟಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಹಣಕಾಸು ಮತ್ತು ಕೈಗಾರಿಕಾ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ವಹಿಸಿದ್ದರು. ಕೇಂದ್ರ ಸಚಿವರಾದ ಎಂ.ವಿ. ರಾಜಶೇಖರನ್ ಮತ್ತು ಮಾಜಿ ಕೇಂದ್ರ ಸಚಿವರಾದ ಶ್ರೀ ಅನಂತ್‌ಕುಮಾರ್ ಅವರು ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರ ಮತ್ತು ದಾನಿಗಳ ಭಾವಚಿತ್ರವನ್ನು ಅನಾವರಣ ಮಾಡಿದರು.

## ಅಂಗವಿಕಲ ಮಕ್ಕಳು ಶಾಪವಲ್ಲ

ಮಕ್ಕಳಿಗೆ ಅಂಗವೈಕಲ್ಯವಿದೆ ಎಂದು ತಂದೆತಾಯಿಗಳು ಧೃತಿಗೆಡಬೇಕಿಲ್ಲ. ಆ ಮಕ್ಕಳಿಗೆ ಎಲ್ಲ ಮಕ್ಕಳ ಹಾಗೇ ಶಿಕ್ಷಣ ಕೊಡಲು ಈಗ ಉತ್ತಮ ಸವಲತ್ತುಗಳಿವೆ ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ತಿಳಿಸಿದರು.

ಅಂಗವಿಕಲ ಮಕ್ಕಳು ಹುಟ್ಟಿದರೆ ಹಿಂದೆ ಅದೊಂದು ಶಾಪ ಎಂದು ತಿಳಿದು, ಅಂಥವರನ್ನು ನಿರ್ಲಕ್ಷಿಸುತ್ತಿದ್ದರು. ಈಗ ಆ ಸಮಸ್ಯೆ ಇಲ್ಲ. 'ಸಹನಾ' ಉತ್ತಮ ಶಿಕ್ಷಣ ಕೊಡುವ ಸಂಸ್ಥೆಯಾಗಿ ರೂಪುಗೊಂಡಿದೆ ಎಂದು ಸಹನಾ ಸಂಸ್ಥೆಯ ದ್ವಿದಶಮಾನೋತ್ಸವ ಸಮಾರಂಭದ ದಿವ್ಯಸಾನ್ನಿಧ್ಯವನ್ನು ವಹಿಸಿ ಮಾತನಾಡಿದರು.

ದೇಶದಲ್ಲಿ ಅಂಗವಿಕಲ ಮಕ್ಕಳಿಂದ ಯಾವುದೇ ಸಮಸ್ಯೆ ಉಂಟಾಗಿಲ್ಲ. ದೈಹಿಕವಾಗಿ ಆರೋಗ್ಯವಾಗಿರುವ ಯುವಕರೇ ಸಮಸ್ಯೆ ಸೃಷ್ಟಿಸುತ್ತಿದ್ದಾರೆ. ಅವರನ್ನು ನಿಯಂತ್ರಿಸಲು ಸರಕಾರ ಹಲವು ಕ್ರಮಗಳನ್ನು ಕೈಗೊಳ್ಳಬೇಕಾಗಿ ಬಂದಿದೆ. ಅದಕ್ಕೆ ಪರ್ಯಾಯವಾಗಿ ಅಂಗವಿಕಲ ಮಕ್ಕಳು ದೇಶದ ಸಂಪನ್ಮೂಲ ಹೆಚ್ಚಿಸಲು ನೆರವಾಗುತ್ತಿದ್ದಾರೆ ಎಂದರು.

ರಾಜ್ಯಪಾಲರಾದ ಟಿ.ಎನ್. ಚತುರ್ವೇದಿಯವರು ಮಾತನಾಡಿ, ಉತ್ತಮ ಶಿಕ್ಷಣ ಎಂದರೆ ಉತ್ತಮ ಗುರುಗಳ ಮಾರ್ಗದರ್ಶನ ಎಂದೇ ಅರ್ಥ. ಶಿಕ್ಷಣ ಸಂಸ್ಥೆಯಲ್ಲಿ ಶ್ರೇಷ್ಠ ಗುರುಗಳ ಪರಂಪರೆ ಇರಬೇಕು. ಆಗ ಮಾತ್ರ ಯುವ ಜನಾಂಗವನ್ನು ಯೋಗ್ಯವಾಗಿ ರೂಪಿಸಲು ಸಾಧ್ಯ ಎಂದು ಹೇಳಿದರು.

ರೆಡ್‌ಕ್ರಾಸ್ ಸಂಸ್ಥೆ ಉಪಾಧ್ಯಕ್ಷ ಡಾ. ಚಂದ್ರಶೇಖರ ಶೆಟ್ಟಿ, ಮಕ್ಕಳ ಆರೋಗ್ಯದ ಬಗ್ಗೆ ಎಚ್ಚರವಹಿಸುವುದು ಮುಖ್ಯ, ಅದರಿಂದ ಯುವ ಜನಾಂಗವನ್ನು ಸಶಕ್ತವಾಗಿ ದುಡಿಸಿಕೊಳ್ಳಲು ಸಾಧ್ಯ ಎಂದು ತಿಳಿಸಿದರು. ಸಂಸ್ಥೆಯ ಉಪಾಧ್ಯಕ್ಷ ಎಸ್.ಬಿ. ಮುದ್ದಪ್ಪ ಭಾಗವಹಿಸಿದ್ದರು.

ಇತರರ ಧರ್ಮ ಸಿದ್ಧಾಂತಗಳನ್ನು ಹೀನೈಸುವುದು ತಪ್ಪು. ಅದು ತನ್ನದೇ ಸಿದ್ಧಾಂತವನ್ನು ಹೀನೈಸಿದಂತೆ. ಮಂತ್ರಯಾನವೇನೋ ಪರಮಿತಯಾನಕ್ಕಿಂತ vkjåq; ÌÚ+à |' #<¤ã jಕ್ಕಿಂತ ಶ್ರೇಷ್ಠ ಎಂಬ ಮಾತೇ ಇಲ್ಲ.

ಅಪಕ್ವರಾದವರಿಗೆ, ದೀಕ್ಷೆ ಪಡೆಯದವರಿಗೆ, ರಹಸ್ಯಬೋಧೆಗಳನ್ನೂ ಸೂಕ್ಷ್ಮ ಸಿದ್ಧಾಂತಗಳನ್ನೂ ಹೇಳುವುದು ತಕ್ಕುದಲ್ಲ.

ಪ್ರಾಪಂಚಿಕ ಪ್ರಶ್ನೆಗಳು, ವಿಷಯಗಳಿಗೆ ಹೊರತಾದ ಸತ್ಯಗಳು ಇವುಗಳ ಚರ್ಚೆಯಲ್ಲಿ ಬುದ್ಧಿಶಕ್ತಿಯನ್ನು ವ್ಯಯಿಸುವುದು ವ್ಯರ್ಥ.

**ಟಿಬೆಟ್ ಸಾಹಿತ್ಯ**




ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ ಹನ್ನೆರಡನೆಯ ಸಂಗೀತ ಸಮ್ಮೇಳನವನ್ನು ತಿರುವನಂತಪುರಂ ಸಂಸ್ಥಾನದ ಪ್ರಿನ್ಸ್ ಅಶ್ವತಿ ರಾಮವರ್ಮ ಅವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಆರ್.ಎಂ. ಅಗರ್‌ವಾಲ್, ಪೂಜ್ಯ ಶ್ರೀಗಳವರು, ರುದ್ರಪಟ್ಟಣಂ ಸಹೋದರರು, ಶ್ರೀ ಕೆ.ವಿ. ಮೂರ್ತಿ ಹಾಗೂ ವಿದ್ವಾನ್ ಎಸ್. ಮಹದೇವಪ್ಪನವರು



ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ ಹನ್ನೆರಡನೆಯ ಸಂಗೀತ ಸಮ್ಮೇಳನದಲ್ಲಿ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಸಮ್ಮೇಳನಾಧ್ಯಕ್ಷರಾದ ವಿದ್ವಾನ್ ಆರ್.ಎನ್. ತ್ಯಾಗರಾಜನ್ ಮತ್ತು ಡಾ. ಆರ್.ಎನ್. ತಾರಾನಾಥನ್ ಅವರುಗಳಿಗೆ "ಸಂಗೀತ ವಿದ್ಯಾನಿಧಿ" ಪ್ರಶಸ್ತಿ ಪ್ರದಾನ ಮಾಡುತ್ತಿರುವುದು. ಶ್ರೀ ಆರ್. ವಾಸುದೇವಮೂರ್ತಿ ಹಾಗೂ ಸಂಗೀತಸಭಾದ ಪದಾಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು



ಬೆಂಗಳೂರಿನಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಚಿಂತನ ಮಂದಿರದ ಉದ್ಘಾಟನೆಯನ್ನು ರಾಜ್ಯಪಾಲರಾದ ಶ್ರೀ ಟಿ.ಎನ್. ಚತುರ್ವೇದಿಯವರು ಉದ್ಘಾಟಿಸುತ್ತಿರುವುದು. ಕೇಂದ್ರ ಸಚಿವರಾದ ಶ್ರೀ ಎಂ.ವಿ. ರಾಜಶೇಖರನ್, ಸಚಿವ ಶ್ರೀ ಪಿ.ಜಿ.ಆರ್. ಸಿಂಧ್ಯಾ, ಪೂಜ್ಯ ಶ್ರೀಗಳವರು ಹಾಗೂ ಸಂಸದ ಶ್ರೀ ಅನಂತಕುಮಾರ್ ಅವರನ್ನು ಚಿತ್ರದಲ್ಲಿ ಕಾಣಬಹುದು



ಜೆಎಸ್‌ಎಸ್ 'ಸಹನಾ' ಸಮನ್ವಯ ಶಿಕ್ಷಣ ಶಾಲೆಯ ದ್ವಿದಶಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಶಾಲೆಯ ಮಕ್ಕಳೊಡನೆ ಪೂಜ್ಯ ಶ್ರೀಗಳವರು, ರಾಜ್ಯಪಾಲರಾದ ಶ್ರೀ ಟಿ.ಎನ್. ಚತುರ್ವೇದಿ, ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಅಧ್ಯಕ್ಷರಾದ ಡಾ. ಎಸ್. ಚಂದ್ರಶೇಖರ ಶೆಟ್ಟಿಯವರು, ಶ್ರೀ ಎಸ್.ಬಿ. ಮುದ್ದಪ್ಪನವರು ಹಾಗೂ ಶ್ರೀ ಎಚ್.ವಿ. ಶೇಷಗಿರಿರಾವ್

Registered with the Registrar of Newspapers in India under No. 50622/86
'Prasada' bi-monthly. Vol. 21 Issue No.1, January - February 2006

## ಜೆಎಸ್‌ಎಸ್ ಗ್ರಂಥಮಾಲೆ, ಮೈಸೂರು

### 'ಶರಣ ಸಂಸ್ಕೃತಿ ಮಾಲೆ'ಯ ಪ್ರಕಟಣೆಗಳು*

| | | |
|---|---|---|
| 1. | ವೀರಶೈವ ದರ್ಶನ | ಡಾ. ಬಿ.ವ್ಹಿ. ಮಲ್ಲಾಪುರ |
| 2. | ಷಟ್‌ಸ್ಥಲಗಳು | ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು |
| 3. | ಪಂಚಾಚಾರ | ಹೆಚ್. ಗಂಗಾಧರನ್ |
| 4. | ಅಷ್ಟಾವರಣ | ಡಾ. ಮಲ್ಲಿಕಾರ್ಜುನ ಎಸ್. ಲಠ್ಠೆ |
| 5. | ಶೈವಾಗಮಗಳು | ಡಾ. ಎಂ. ಶಿವಕುಮಾರಸ್ವಾಮಿ |
| 6. | ಶರಣರು ಮತ್ತು ಕಾಯಕ | ಡಾ. ಬಸವರಾಜ ಮಲಶೆಟ್ಟಿ |
| 7. | ವೀರಶೈವ ಮಠಗಳು | ಡಾ. ಬಿ.ಸಿ. ವೀರಪ್ಪ |
| 8. | ಕೆಳದಿಯ ಅರಸರು | ಡಾ. ಕೆಳದಿ ವೆಂಕಟೇಶ ಜೋಯಿಸ್ |
| 9. | ಸೋದೆ ಅರಸರು | ಡಾ. ಎಂ.ಜಿ. ವಾರಿ |
| 10. | ಕೊಡಗಿನ ಅರಸರು | ಎಂ.ಜಿ. ನಾಗರಾಜ್ |
| 11. | ವೀರಶೈವ ಚಂಪೂ ಸಾಹಿತ್ಯ | ಪ್ರೊ. ಆರ್. ರಾಚಪ್ಪ |
| 12. | ವೀರಶೈವ ಷಟ್ಪದಿ ಸಾಹಿತ್ಯ | ಡಾ. ಡಿ. ಮಂಗಳಾ ಪ್ರಿಯದರ್ಶಿನಿ |
| 13. | ಕೈವಲ್ಯ ಸಾಹಿತ್ಯ | ಡಾ. ಎಚ್. ತಿಪ್ಪೇರುದ್ರಸ್ವಾಮಿ |
| 14. | ಶೂನ್ಯ ಸಂಪಾದನೆ | ಪ್ರೊ. ಜಿ.ಎಸ್. ಶಿವಲಿಂಗಯ್ಯ |
| 15. | ವಚನ ವ್ಯಾಕರಣ | ಡಾ. ಬಿ.ಬಿ. ರಾಜಪುರೋಹಿತ |
| 16. | ಶಂಕರ ದಾಸಿಮಯ್ಯ | ಡಾ. ಸ್ನೇಹಾ ಭೂಸನೂರ |
| 17. | ಅಕ್ಕಮಹಾದೇವಿ | ಡಾ. ವಿಜಯಶ್ರೀ ಸಬರದ |
| 18. | ಘನಲಿಂಗಿ ಶಿವಯೋಗಿ | ಡಾ. ಡಿ. ಶೀಲಾಕುಮಾರಿ |
| 19. | ಷಣ್ಮುಖ ಶಿವಯೋಗಿ | ಡಾ. ವ್ಹಿ.ಜಿ. ಪೂಜಾರ |
| 20. | ಚನ್ನಬಸವಾಂಕ | ಡಾ. ಬಿ.ನಂ. ಚಂದ್ರಯ್ಯ |
| 21. | ಸಿದ್ಧನಂಜೇಶ | ಡಾ. ಬಸವರಾಜ ಜಗಜಂಪಿ |
| 22. | ಕೆರೆಯ ಪದ್ಮರಸ | ಡಾ. ಎಫ್.ಟಿ. ಹಳ್ಳಿಕೇರಿ |
| 23. | ಮಗ್ಗೆಯ ಮಾಯಿದೇವ | ಡಾ. ಡಿ.ವ್ಹಿ. ಪುರಾಣಿಕ |
| 24. | ನಿಜಗುಣ ಶಿವಯೋಗಿ | ಯೋಗೀಶ ಯಡ್ರಾವಿ |
| 25. | ಸರ್ಪಭೂಷಣ ಶಿವಯೋಗಿ | ಮೊರಬದ ಮಲ್ಲಿಕಾರ್ಜುನ |
| 26. | ಕೈವಲ್ಯ ಪದ್ಧತಿ | ಡಾ. ಬಿ.ಸಿ. ಜವಳಿ |
| 27. | ಅನುಭವಾಮೃತ | ಡಾ. ಕೆ.ಎಸ್. ರತ್ನಮ್ಮ |
| 28. | ವಚನಗಳಲ್ಲಿ ಶರಣ ಪರಿಕಲ್ಪನೆ | ಡಾ. ಎಂ.ಬಿ. ಹೂಗಾರ |
| 29. | ವಚನಗಳಲ್ಲಿ ಮಾಯೆ, ಸಂಸಾರ | ಡಾ. ಶೈಲಜಾ ಉಡಚಣ |
| 30. | ವಚನಗಳಲ್ಲಿ ಅಂತರಂಗ-ಬಹಿರಂಗ ಶುದ್ಧಿ | ಡಾ. ಎಚ್.ಎಂ. ಮರುಳಸಿದ್ಧಯ್ಯ |
| 31. | ವಚನಗಳಲ್ಲಿ ವ್ಯಕ್ತಿತ್ವ ವಿಕಾಸ | ಡಾ. ಬಸವರಾಜ ಸಬರದ |
| 32. | ವಚನಗಳಲ್ಲಿ ಸಜ್ಜನ ಸಂಗ | ಡಾ. ವಿಜಯಕುಮಾರ ಮಹಾನುಭಾವಿಗಳು |
| 33. | ವಚನಸಾಹಿತ್ಯದಲ್ಲಿ ಪ್ರಾಣಿಗಳ ಸಂಪತ್ತು | ಹೀ.ಚಿ. ಶಾಂತವೀರಯ್ಯ |
| 34. | ವಚನಗಳಲ್ಲಿ ಲೋಕಾನುಭವ | ಡಾ. ಸಂಗಮೇಶ ಸವದತ್ತಿಮಠ |
| 35. | ಶರಣರ ಪುಣ್ಯಕ್ಷೇತ್ರಗಳು | ಡಾ. ಚೆನ್ನಕ್ಕ ಪಾವಟೆ |

★ ಪ್ರತಿ ಪುಸ್ತಕದ ಬೆಲೆ **12** ರೂ.

ಆಜೀವ : **500** ರೂ. ★ ವಾರ್ಷಿಕ : **100** ರೂ. ★ ಬಿಡಿ ಪ್ರತಿ : **10** ರೂ.